(b) A State Level Advisory Committee, a District Committee for each of the 19 districts and a Taluk Co ordination Committee for each of the 175 taluks in the State have been constituted.

(e) Does not arise in view of reply to clauses (a) and(b).

MADAM SPEAKER.—The Hon'ble Member Sri V. M. Ghadi is absent to take up the calling Attention Notice.

Supplementary Estimates for 1975-76 (second and final instalment) Presentation

SRI M. Y. GHORPADE (Minister for Finance and Housing).—Madam Speaker, I beg to present ;—

> "The supplementary estimates for the year 1975-76 (Second and Final instalment) as required under article 205(1) of the Constitution of India"

MADAM SPEAKER.—Supplementary Estimates are presented.

Budget Estimates for 1976-77 Demand for Grants.

Demand Nos. 2, 11, 12, 14, 15, 20, 21, 43, 52 and 53

SRI D. DEVARAJ URS (Chief Minister).—Madam Speaker, on the recommendation of the Governor, I beg to move :

> "That a sum not exceeding Rs. 28,00,000 be granted to the Government to defray the charges which will come in course of payment during the financial year ending 31st day of Mar h 1977 in respect of Demand No 2 "Governor, Ministers and Public Service Commission."
>
> "That a sum not exceeding Rs 2,97,68,000 be granted to the Government to defray the charges which will come in course of payment during the financial year en ing 31st day of March 1977 in respect of Demand No. 11 'Sec etariat'."
>
> "That a sum not exceeding Rs 4,54,60,000 be granted to the Government to defray the charges which will come in course of payment during the financial year ending 31st day of March, 1977 in respect of Demand No. 12 'District Administration'."
>
> "That a sum not exceeding Rs 21,54,50,000 be granted to the Government to defray the charges which will come in course of payment during the financial year ending 31st day of March 1977 in respect of Demand No. 14 "Police'."

"That a sum not exceeding Rs. 1,77,90,000 be granted to the Government to defray the charges which will come in course of payment during the financial year ending 31st day of March 1977 in respect of Demand No. 15 'Jails'."

"That a sum not exceeding Rs. 54,90,000 be granted to the Government to defray the charges which will come in course of payment during the financial year ending 31st day of March 1977 in respect of Demand No. 20 'Fire Protection and Control'."

"That a sum not exceeding Rs 5,06,75,000 be granted to the Government to defray the charges which will come in course of payment during the financial year ending 31st day of March, 1977 in respect of Demand No. 21 'Bangalore Development Authority and other Services'."

"That a sum not exceeding Rs. 3,21,00,000 be granted to the Government to defray the charges which will come in course of payment during the financial year ending 31st day of March, 1977 in respect of Demand No. 43 'Area Development'."

"That a sum not exceeding Rs. 85,67,40,000 be granted to the Government to defray the charges which will come in course of payment during the financial year ending 31st day of March 1977 in respect of Demand No 52 'Irrigation, Navigation, Drainage and Flood Control Projects'."

"That a sum not exceeding Rs. 3,36,00,000 be granted to the Government to defray the charges which will come in course of payment during the financial year ending 31st day of March 1977 in respect of Demand No. 53 'Power Projects'."

MADAM SPEAKER.—Motion moved:

"That a sum not exceeding Rs. 28,00,000 be granted to the Government to defray the charges which will come in course of payment during the financial year ending 31st day of March 1977 in respect of 'Governor, Ministers and Public Service Commission'."

Demand Nos, 11, 12, 14, 15, 20, 21, 43, 52 and 53 are also before the House for discussion.

† ಶ್ರೀ ಹೆಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಅನುಮೋದನೆಗಾಗಿ ಇಟ್ಟಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ೨೯ ವರ್ಷಗಳು ಮುಗಿಯುತ್ತಾ ಬಂದಿದೆ. ಆದರೆ ನಮ್ಮ ದೇಶದ ಜನತೆಯ ಅರ್ಥ, ಮಾನ, ಪ್ರಾಣ ಇವುಗಳನ್ನು ರಕ್ಷಣೆ ಮಾಡುವಂತಹ ಇಲಾಖೆ ಎಂದರೆ ಈ ಪೋಲೀಸ್ ಇಲಾಖೆ. ಹಿಂದೆ ಆಳರಸರು ಅಂದರೆ ಬ್ರಿಟಿಷರು ಆಳುತ್ತಿದ್ದಂಥ ಕಾಲದಲ್ಲಿ ಯಾವ ಒಂದು ಮನೋಧರ್ಮ, ಮತ್ತು ಆಚರಣೆಗಳನ್ನು ಇಟ್ಟುಕೊಂಡಿದ್ದರೋ ಅವುಗಳಲ್ಲಿ ಇವತ್ತೂ ಕೂಡ ಕಿಂಚಿತ್ ಮಾತ್ರವೂ ಬದಲಾವಣೆಯನ್ನು ನಾವು ಕಾಣುವುದು ಕಷ್ಟವಾಗಿದೆ. ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇವತ್ತು ಪೋಲೀಸ್ ಠಾಣೆಗೆ ಯಾರಾದರೂ ಸತ್ಯವಾದಂಥ ದೂರುಗಳನ್ನು ತೆಗೆದುಕೊಂಡು ಹೋದರೆ ಅವರು ಮತ್ತೆ ಆ ಪೋಲೀಸ್ ಠಾಣೆಯಿಂದ ಹೊರಗೆ ಬರುವುದೇ ಒಂದು ಮಹಾ ಕಷ್ಟದ ಕೆಲಸವಾಗಿದೆ. ಹುಲಿಯ ಬೋನಿಗೆ ಹೋಗಿ ಸಾಹಸ ಮಾಡಿ ತಪ್ಪಿಸಿಕೊಂಡು ಬೇಕಾದರೂ ಬರಬಹುದು. ಆದರೆ ಈ ಪೋಲೀಸ್ ಠಾಣೆಯೊಳಗೆ ಹೋಗಿ ಬರುವುದು ಅದಕ್ಕಿಂತಲೂ ಕಷ್ಟದ ಕೆಲಸ. ಇಂಥ ಒಂದು ಅಪವಾದ ಈ ಪೋಲೀಸ್ ಠಾಣೆಗಳ ಮೇಲಿದೆ. ಬಹುತೇಕವಾಗಿ ಈ ಪೋಲೀಸ್ ಠಾಣೆಯೊಳಗೆ ಯಾರಾದರೂ ಧೈರ್ಯವಾಗಿ ಹೋಗಿ ತಮ್ಮ ಫಿರ್ಯಾದುಗಳನ್ನು ಕೊಟ್ಟು ಆಗಿರತಕ್ಕ ಅನ್ಯಾಯದ ಬಗ್ಗೆ ವಿವರಗಳನ್ನು ಕೊಟ್ಟು ಸರಿಯಾದ ನ್ಯಾಯವನ್ನು ಪಡೆಯುವುದು ಕಷ್ಟವಾಗಿದೆ. ಇದಕ್ಕೆ ಕಾರಣ ಇವತ್ತು ನಾವು ಈ ಪೋಲೀಸರ ಮನೋಧರ್ಮ ಏನು ಇರಬೇಕೆಂದು ಕಲ್ಪನೆ ಮಾಡಿಕೊಂಡಿದ್ದೇವೆಯೋ ಅದು ಇಲ್ಲದಿರುವುದು. ಪೋಲೀಸರು ತಾವು ಸಾರ್ವಜನಿಕರ ಸ್ನೇಹಿತರಾಗಿ ಇರಬೇಕಾದವರು ಮತ್ತು ಶತ್ರುಗಳಾಗಿ ನಡೆದುಕೊಳ್ಳುತ್ತಿದ್ದಾರೆ, ಅವರಲ್ಲಿ ತಮ್ಮ ಕರ್ತವ್ಯದ ಬಗ್ಗೆ ಸರಿಯಾದ ಪ್ರಜ್ಞೆಯನ್ನು ಮೂಡಿಸುವುದರಲ್ಲಿ ಸರ್ಕಾರ ವಿಫಲವಾಗಿದೆ ಎಂದು ನಾನು ಇವತ್ತು ಹೇಳಬೇಕಾಗಿದೆ. ಮಾನ್ಯ ಅಧ್ಯಕ್ಷರೆ, ಈ ಸಮಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಪೋಲೀಸ್ ಠಾಣೆಯ ಮುಂದೆ "ಪೋಲೀಸ್ ಠಾಣೆ" ಎಂದು ಇದ್ದ ಬೋರ್ಡನ್ನು ತೆಗೆದು "ಆರಕ್ಷಕ ಕಛೇರಿ" ಎಂದು ಬೋರ್ಡ್ ಹಾಕಿದ್ದಾರೆ. ಇದನ್ನು ಜನರು ತಿಳಿದೋ, ಅಥವಾ ತಿಳಿಯದೆಯೋ ಆ ಬೋರ್ಡ್‌ನ್ನು ನೋಡಿ "ಆ ರಾಕ್ಷಸ ಕಛೇರಿ" ಎಂದು ಓದಿಕೊಳ್ಳುತ್ತಾರೆ. ಇದನ್ನು ನನ್ನ ಮಟ್ಟಿಗೆ ಹೇಳುವುದಾದರೆ ಇದು ಯಥಾವತ್ತಾಗಿ, ಅರ್ಥಪೂರ್ಣವಾಗಿದೆ ಎಂದು ಹೇಳುತ್ತೇನೆ. ಕೆಲವು ಸಂದರ್ಭಗಳಲ್ಲಿ ಪೋಲೀಸರು ನಡೆದುಕೊಳ್ಳುವುದನ್ನು ನೋಡಿದರೆ ಅವರು ರಾಕ್ಷಸರಿಗಿಂತ ಕಡಿಮೆ ಏನೂ ಇಲ್ಲವೆಂದು ಹೇಳಬಹುದು. ಆದುದರಿಂದ ಜನ ಇದನ್ನು ರಾಕ್ಷಸ ಕಛೇರಿ ಎಂದು ಓದಿಕೊಳ್ಳುವುದರಲ್ಲಿ ಏನೂ ಅತಿಶಯೋಕ್ತಿ ಇಲ್ಲ. ಇದು ಅನುಭವಾಮೃತ. ಇವತ್ತು ಯಾರಾದರೂ ಒಬ್ಬ ಮಹಿಳೆ ಧೈರ್ಯವಾಗಿ ಪೋಲೀಸ್ ಸ್ಟೇಷನ್ನೊಳಗೆ ಹೋಗಿ ತನಗೆ ಆಗಿರತಕ್ಕ ಅನ್ಯಾಯದ ಬಗ್ಗೆ ದೂರನ್ನು ಕೊಟ್ಟು ಹಿಂದಕ್ಕೆ ಬರುವುದಕ್ಕೆ ಸಾಧ್ಯವಿದೆಯೇ ಎಂದು ನೋಡಿದರೆ ಅದು ಎಂದಿಗೂ ಸಾಧ್ಯವಿಲ್ಲ. ಇವತ್ತು ಅಂಥ ಒಂದು ಹೆದರಿಕೆ ಜನರಲ್ಲಿ ಬರಬೇಕಾದರೆ ಈ ಪೋಲೀಸರ ನಡತೆಯೇ ಕಾರಣ. ಒಟ್ಟಾರೆ ಹೇಳುವುದಾದರೆ ಈ ಪೋಲೀಸ್ ಸ್ಟೇಷನ್‌ನ ವ್ಯವಹಾರ ಈ ರೀತಿ ಇದೆ. ಸಾಮಾನ್ಯವಾಗಿ ಈ ಪೋಲೀಸ್ ಠಾಣೆಗಳಲ್ಲಿ ಸರಿಯಾದ ರೀತಿಯಲ್ಲಿ ನ್ಯಾಯ ದೊರೆಯಬೇಕಾದರೆ ಅವನು ಸಿರಿವಂತನಾಗಿರಬೇಕು. ಇಲ್ಲವೇ ರಾಜಕೀಯದಲ್ಲಿ ಸ್ಥಾನಮಾನವನ್ನು ಹೊಂದಿರುವ ವ್ಯಕ್ತಿಯಾಗಿರಬೇಕು. ಅದೂ ಇಲ್ಲವೇ ಅವನಿಗೆ ಬೆಂಬಲ ಚೆನ್ನಾಗಿರಬೇಕು. ಹಾಗಿದ್ದರೆ ಮಾತ್ರ ಸ್ವಲ್ಪಮಟ್ಟಿಗೆ ನ್ಯಾಯ ದೊರಕುತ್ತದೆ. ಹಿಂದೆ ಕೋರ್ಟ್‌ಗಳಲ್ಲಿ ನ್ಯಾಯವನ್ನು ಪಡೆಯಬೇಕಾಗಿದ್ದರೆ ಬಹಳ ವರ್ಷಗಳಾಗುತ್ತಿದ್ದುವು. ಹಿಂದೆ ಏನು ಹೇಳುತ್ತಿದ್ದರು ಎಂದರೆ ಗೆದ್ದವನು ಸೋತ, ಸೋತವನು ಸತ್ತ ಎಂದು. ಅದೇ ರೀತಿ ಈ ಪೋಲೀಸ್ ಕಛೇರಿಗಳ ಬಗ್ಗೆ ಹೇಳಿದರೂ ಕೂಡ ಅದೇನೂ ಸರ್ವಥಾ ಉತ್ಪ್ರೇಕ್ಷೆಯಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಪರಾಧಿಗಳನ್ನು ತನಿಖೆ ಮಾಡುವ ಕಾಲದಲ್ಲಿ ಪೋಲೀಸಿನವರ ದಕ್ಷತೆ, ಪ್ರಾಮಾಣಿಕತೆ ಎಷ್ಟರ ಮಟ್ಟಿಗೆ ಇದೆ ಎನ್ನುವುದರ ಬಗ್ಗೆ ಹೇಳುವುದಾದರೆ ಯಾರಾದರೂ ಪೋಲೀಸಿನವರು ಬೆನ್ನಹಿಂದೆ ಬಿದ್ದು ತನಿಖೆಯ ಕಾಲದಲ್ಲಿ ಪ್ರತಿಯೊಂದು ಹಂತದಲ್ಲಿಯೂ ಸಹ ಅವರಿಗೆ ಎಲ್ಲ ವಿಧವಾದ ಸಹಾಯ ಸಹಕಾರಗಳನ್ನು ಮತ್ತು ಮಾರ್ಗದರ್ಶನವನ್ನು ಮಾಡಿಕೊಂಡು ಬಂದರೆ ಅಂಥ ಸಂದರ್ಭದಲ್ಲಿ ಮಾತ್ರ ತಪ್ಪಿತಸ್ಥರನ್ನು ಕಂಡುಹಿಡಿಯುವ ಸಾಹಸವನ್ನು ಮಾಡುತ್ತಾರೆಯೇ ವಿನಃ ತಾವಾಗಿಯೇ ಅಪರಾಧಿಗಳನ್ನು ಕಂಡುಹಿಡಿಯುವ ಕೆಲಸಕ್ಕೆ ಕೈ ಹಾಕುವುದೇ ಇಲ್ಲ. ಸಾರ್ವಜನಿಕ ಸಂಸ್ಥೆಗಳಲ್ಲಿ ಅಪರಾಧಗಳು ಜರುಗಿದರೆ, ಅಪರಾಧಿಗಳ ಮೇಲೆ ಫಿರ್ಯಾದು ಕೊಟ್ಟರೂ ಸಹಾ ಸರಿಯಾದ ರೀತಿಯಲ್ಲಿ ತನಿಖೆಯನ್ನು ಮಾಡುವುದಿಲ್ಲ.

ವೈಯಕ್ತಿಕವಾಗಿ ಅಪರಾಧಿಗಳ ಮೇಲೆ ಆಸಕ್ತಿಯನ್ನು ತೋರಿಸುತ್ತಾರೆಯೇ ವಿನಃ ಫಿರ್ಯಾದಿಯ ಬಗ್ಗೆ ಯಾವ ವಿಧವಾದ ಆಸಕ್ತಿಯನ್ನು ತೋರಿಸುವುದಿಲ್ಲ. ಈ ರೀತಿಯಾಗಿರುತ್ತದೆ ಪೋಲೀಸಿನವರು ಅಪರಾಧಿಗಳನ್ನು ತನಿಖೆ ಮಾಡುವ ವೈಖರಿ.

ಪೋಲೀಸಿನವರ ಅದಕ್ಷತೆಗೆ ಇನ್ನೊಂದು ಕಾರಣವೇನೆಂದರೆ, ರಾಜಕಾರಣಿಗಳು ಹಸ್ತಕ್ಷೇಪ ಮಾಡುವುದು. ಇಂಥಪ್ರಕರಣಗಳು ಬಹಳವಾಗಿ ಇವೆ. ಮಾನ್ಯ ಮಂತ್ರಿಗಳ ಗಮನಕ್ಕೆ ಒಂದೆರಡು ಪ್ರಕರಣಗಳನ್ನು ತರುವುದಾದರೆ, ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನಲ್ಲಿ ಕೂಡಲೇ ಎನ್ನುವುದು ಒಂದು ದೊಡ್ಡ ಗ್ರಾಮವಿರುತ್ತದೆ. ಅಲ್ಲಿಯ ಸಹಕಾರಿ ಸಂಘದಲ್ಲಿ ಒಬ್ಬ ಕಾರ್ಯದರ್ಶಿ 1 ಲಕ್ಷ ರೂಪಾಯಿನಷ್ಟು ಹಣವನ್ನು ದುರುಪಯೋಗ ಮಾಡಿಕೊಂಡಿದ್ದರ ಬಗ್ಗೆ ಅವನಮೇಲೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಫಿರ್ಯಾದು ಕೊಟ್ಟಮೇಲೆ ಅಧಿಕಾರಿಗಳು ದಾಖಲೆ ಮಾಡಿಕೊಂಡು ಅವನನ್ನು ದಸ್ತಗಿರಿ ಮಾಡುವುದಕ್ಕೆ ಪೋಲೀಸ್ ಸೂಪರಿಂಟೆಂಡೆಂಟ್‌ರವರಾಗಲಿ, ಡೆಪ್ಯುಟಿ ಕಮಿಷನರ್ ಆಗಲಿ ಸುಮಾರು 20 ದಿವಸ 1 ತಿಂಗಳ ಕಾಲ ತೆಗೆದುಕೊಂಡ ವಿಷಯ ಬಹುಶ: ನಿಮಗೆ ಗೊತ್ತಿರಬಹುದು.

ವಿಚಾರ ನನಗೆ ಹೇಗೋ ತಿಳಿದು ಬಂದಿರುವುದರಿಂದ ಈ ವಿಚಾರವನ್ನು ಮುಚ್ಚಿಡುವುದಕ್ಕೆ ಸಾಧ್ಯವಾಗುತ್ತಿಲ್ಲ. ರಾಜಕಾರಣಿಗಳು ವೈಯುಕ್ತಿಕವಾಗಿ ಪ್ರಭಾವ ಇರತಕ್ಕಂಥವರು ತನಿಖಾ ಕಾಲದಲ್ಲಿ ಹೇಗಾದರು ಮಾಡಿ ಬಚಾವ್ ಮಾಡಬೇಕೆಂದು ಹಸ್ತಕ್ಷೇಪ ನಡೆಯುತ್ತಿರುವ ವಿಚಾರ ತಿಳಿದು ಬಂದಿರುತ್ತದೆ. ಒಂದು ವಿಷಯವೆಂದರೆ ಮಾನ್ಯ ಮಂತ್ರಿಗಳ ಹೆಸರನ್ನು ಉಪಯೋಗಿಸಿಕೊಂಡು ಅವರ ಹಿಂಬಾಲಕರು ಇಂಥ ದುಶ್‌ಕರ್ಮಕೃತಗಳನ್ನು ಮಾಡಿರುತ್ತಾರೆಯೋ ಎಂದು ಶಂಕೆ ಪಟ್ಟೆ ಆದರೆ ಇದರಲ್ಲಿ ಮಂತ್ರಿಗಳು ಹಸ್ತಕ್ಷೇಪಮಾಡಿಲ್ಲವೆಂದು ತಿಳಿದುಬಂದುದರಿಂದ ನಾನು ಸಂತೋಷಪಟ್ಟೆ. ಇಂಥ ವಿಷಯಗಳು ತಮ್ಮ ಗಮನಕ್ಕೆ ಬಂದಾಗ್ಯೂ ತಾವು ಆದೇಶ ಕೊಟ್ಟಿದ್ದರೂ ಜಿಲ್ಲಾಧಿಕಾರಿಗಳಿಂದ ಸರಿಯಾದ ತನಿಖಾ ಕ್ರಮ ನಡೆದಿಲ್ಲವೆನ್ನುವುದನ್ನು ಪುನ: ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ.

ಮಾನ್ಯ ಅಧ್ಯಕ್ಷರೆ ಇನ್ನೊಂದು ಪ್ರಕರಣದ ಬಗ್ಗೆ ಹೇಳುವುದಾದರೆ ಮದ್ದೂರು ಬಳಿ ನವಲೆ ಎಂಬ ಗ್ರಾಮದಲ್ಲಿ ಕೆಲವು ದುಶ್‌ಕರ್ಮಿಗಳು ಒಬ್ಬ ರಾಜಕಾರಣಿಯವರನ್ನು ಅವರು ಹಿಂದಿನಿಂದಲೂ ಆಸಕ್ತಿ ಇರತಕ್ಕಂಥ ವ್ಯಕ್ತಿಗಳು ಅವರ ಊರ ಹೊರಗಿರುವ ಜಮೀನಿನಲ್ಲಿರುವ ಪಂಪ್‌ಸೆಟ್, ಮನೆಯನ್ನು ಹಾಡಹಗಲಿನಲ್ಲಿಯೇ ಬೆಂಕಿ ಇಟ್ಟು ಸುಟ್ಟು ಹಾಕಿದಂಥ ಕಾಲದಲ್ಲಿ ಅವರು ಫಿರ್ಯಾದನ್ನು ಕೊಡಲು ಪೋಲೀಸ್ ಸ್ಟೇಷನ್ ಹೋದಾಗ, ಪೋಲೀಸ್ ಅಧಿಕಾರಿಗಳು ನೀವು ಫಿರ್ಯಾದನ್ನು ಬಿ ಫಾರಮ್‌ನಲ್ಲಿ ರಿಪೋರ್ಟ್‌ನನ್ನು ಕೊಡಬೇಕು ಎಂದು ನಿರಾಕರಿಸಿದರು. ಹಾನಿ ಮಾಡಿದಂತ ದುಶ್‌ಕರ್ಮಿಗಳು ಅಧಿಕಾರಿಯನ್ನೇ ಹೆದರಿಸಿ, ರಿಪೋರ್ಟ್‌ನ್ನು ತೆಗೆದುಕೊಂಡರೆ ನಿಮ್ಮ ಕಾಲನ್ನು ಮುರಿಯುತ್ತೇವೆಂದು ಅವಾಚ್ಯ ಶಬ್ದಗಳನ್ನು ಉಪಯೋಗಿಸಿದ್ದಾರೆ. ಒಬ್ಬ ಅಧಿಕಾರಿಗೆ ಇಂಥ ಒಂದು ವಾಕ್ಯವನ್ನು ಪ್ರಯೋಗ ಮಾಡಬೇಕಾದರೆ ಅದರ ಹಿನ್ನೆಲೆಯಲ್ಲಿ ಎಷ್ಟರಮಟ್ಟಿನ ಪ್ರಭಾವವಿದೆ ಎಂದು ಊಹಿಸಬೇಕಾಗುತ್ತದೆ. ಅವರ ಹಿನ್ನೆಲೆಯಲ್ಲಿ ಶಾಸಕರು ಇದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ನ್ಯಾಯವನ್ನು ಅನ್ಯಾಯ ಮಾಡತಕ್ಕ. ಅನ್ಯಾಯವನ್ನು ನ್ಯಾಯ ಮಾಡತಕ್ಕ ರಾಜಕಾರಣಿಗಳು ಇದ್ದಾರೆ. ಅವನ್ನು ಮುಚ್ಚುವುದಕ್ಕೆ ಹೋಗಿ ಹತ್ತಿಕ್ಕಿದಂಥ ವ್ಯಕ್ತಿಗಳು ನಿಮ್ಮ ಪಕ್ಷದಲ್ಲಿಯೇ ಇದ್ದಾರೆ. ಆ ರಾಜಕಾರಣಿಯವರ ಹೆಸರು ಹೇಳಿಬಿಡುತ್ತೇನೆ, ಅವರ ಹೆಸರು ಚಿಕ್ಕಣ್ಣನವರೆಂದು, ಅವರು ಯಾರೆಂಬುದು ಮಾನ್ಯ ಕೃಷ್ಣರವರಿಗೂ ಗೊತ್ತಿರುತ್ತದೆ. ಇಂಥ ಪ್ರಕರಣಗಳು ನಡೆದಿರುವುದು. ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಶ್ನೆ ಮಾಡುತ್ತೇನೆ ಪೋಲೀಸ್ ಸ್ಟೇಷನ್‌ನಲ್ಲಿ ನ್ಯಾಯ ದೊರೆಯುತ್ತದೆಯೋ ಎಂದು ಈ ವಿಷಯವನ್ನು ಹೇಳುವಾಗ ರಾಜಕಾರಣಿಯಾಗಬೇಕು ಅದು ಯಾವ ರಾಜಕಾರಣಿಯಾಗಬೇಕು ಅಂದರೆ ಅಧಿಕಾರದಲ್ಲಿರತಕ್ಕಂಥ ಪಕ್ಷದ ರಾಜಕಾರಣಿಯಾಗಬೇಕು. ಜೊತೆಗೆ ಸಿರಿವಂತರು ಆಗಿರಬೇಕು. ಅಂಥವರಿಗೆ ಮಾತ್ರ ನ್ಯಾಯ ದೊರೆಯುತ್ತದೆಯೇ ಹೊರತು ಸಾಮಾನ್ಯ ಜನರಿಗೆ ನ್ಯಾಯ ಸಿಗುತ್ತದೆಂದು ಹೇಳಿದರೆ ಅದು ಸುಳ್ಳು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ ದಕ್ಷತೆಯಿಂದ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೂ ಕಿರುಕುಳ ಇದ್ದೇ ಇರುತ್ತದೆ. ಇದರಿಂದ ನಮಗೆ ಅರ್ಥವಾಗುತ್ತದೆ. ಈ ಪೋಲೀಸ್ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ, ಎಷ್ಟರಮಟ್ಟಿಗೆ ಸುಧಾರಿಸಿದೆ ಎಂಬುದು.

ಶ್ರೀ ಡಿ. ದೇವರಾಜ ಅರಸ್.—ಅದರ ಬಗ್ಗೆ ದೂರು ಕೊಟ್ಟಿದ್ದಾರೆಯೋ ?

SRI H. T. KRISHNAPPA.—The complaint is by the person whose property is destroyed and in the police station the people who have destroyed the property gone and threatened the Sub-Inspector that in case you file a charge sheet your limbs will be broken and you will be dismissed from the service.

SRI D. DEVARAJ URS.—What happened subsequently ?

SRI H. T KRISHNAPPA.—I don't think the investigation is completed. It is still pending. As a matter of fact he is a poor official who is afraid of these powerful elements. ಮಾನ್ಯ ಅಧ್ಯಕ್ಷರೆ ಮೊನ್ನೆ ಶಿವಳ್ಳಿ ನಾಲೆಯಲ್ಲಿ ಖಾಸಗಿ ಬಸ್ ಉರುಳಿ ನಡೆದಂಥ ಒಂದು ದುರಂತ ಕರ್ನಾಟಕದ ಇತಿಹಾಸದಲ್ಲಿ ಬಹುಶಃ ಎಂದೂ ನಡೆಯದಂಥ ಘೋರ ದುರಂತ ಎಂದು ಹೇಳಿದರೆ ಅದು ಸುಳ್ಳಲ್ಲವೆಂದು ನಾನು ತಿಳಿದು ಕೊಂಡಿದ್ದೇನೆ ಆ ದುರಂತ ನಡೆದ ದಿವಸ ಮುತ್ತಗೆರೆ ಗ್ರಾಮದಲ್ಲಿ ಒಂದು ದೊಡ್ಡ ಜಾತ್ರೆ ನಡೆದಿತ್ತು. ಆ ಜಾತ್ರೆಯಲ್ಲಿ ಪೋಲೀಸಿನವರು ಇದ್ದರು. ಪೋಲೀಸಿನವರ ತಿಳುವಳಿಕೆಗೆ ಬಾರದೆ ೧೧೫ ಜನರಿಂದ ೧೨೦ ಜನ ಬಸ್‌ನಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ದಿವಸ ಪೋಲೀಸ್‌ನವರು ತಮ್ಮ ಭಾಗದ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿದ್ದರೆ ಈ ದುರಂತ ತಪ್ಪುತ್ತಿತ್ತು. ಮೂವತ್ತೆರಡು ಮೂತ್ತೈದು ಜನ ಕುಳಿತುಕೊಳ್ಳುವ ಬಸ್‌ನಲ್ಲಿ ೧೧೦ ಜನರನ್ನು ತುಂಬಿದ್ದರು ಎನ್ನುವುದನ್ನು ಗಮನಿಸಿದರೆ ಪೋಲೀಸ್‌ನವರದು ಕರ್ತವ್ಯ ಲೋಪ ಇದರಲ್ಲಿ ಇದೆ ಎಂದು ಹೇಳಬೇಕಾಗುತ್ತದೆ ಈತರಹ ಓವರ್‌ಲೋಡ್ ಮಾಡತಕ್ಕದ್ದು ಎಲ್ಲ ಕಡೆಯೂ ನಡೆಯುತ್ತಾ ಇದೆ. ಪೋಲೀಸಿನವರೇ ಇದಕ್ಕೆ ಬೆಂಬಲ ಕೊಡುತ್ತಿದ್ದಾರೆ. ಲಾರಿಯಲ್ಲಿ ಜನಗಳನ್ನು ತುಂಬಿಕೊಂಡು ಹೋಗುವುದು ಬಸ್ಸಿನ ಮೇಲೆ ಪ್ರಯಾಣಿಕರನ್ನು ಕುಳಿಸಿಕೊಂಡು ಹೋಗುವುದು ಈಗಲೂ ನಡೆಯುತ್ತಿದೆ ಸಾರ್ವಜನಿಕರ ಕ್ಷೇಮವನ್ನು ಕಡೆಗಣಿಸಿ ಲಾರಿ ಬಸ್‌ನಲ್ಲಿ ಎಷ್ಟು ಜನರನ್ನು ಕೂರಿಸಿಕೊಂಡು ಹೋಗಬೇಕೋ ಆ ಸಂಖ್ಯೆಗೂ ಮೀರಿ ಎರಡುಪಟ್ಟು ಮೂರುಪಟ್ಟು ಜನರನ್ನು ಕೂರಿಸಿಕೊಂಡು ಅಪಾಯಕ್ಕೆ ತಳ್ಳತಕ್ಕಂಥದ್ದನ್ನು ಸರ್ಕಾರ ನೋಡಿಕೊಂಡು ಸುಮ್ಮನಿರ ತಕ್ಕಂಥದ್ದು ನಿಜವಾಗಿಯೂ ಕೂಡ ಅನ್ಯಾಯ ಮತ್ತು ಇದು ಖಂಡನೀಯವೆಂದು ನಾನು ಹೇಳಬಯಸು ತ್ತೇನೆ.

2-00 P.M.

ಇನ್ನು ನಾವು ಮಾಡತಕ್ಕಂಥಹ ಶಾಸನಗಳು, ಈ ಶಾಸನಗಳಲ್ಲಿರತಕ್ಕಂಥ ಪೀನಲ್ ಪ್ರಾವಿಷನ್ಸ್‌ಗಳನ್ನು ಎಷ್ಟೋ ಜನ ಪೋಲೀಸ್ ಅಧಿಕಾರಿಗಳು ತಿಳಿದುಕೊಂಡೇ ಇರುವುದಿಲ್ಲ ಕೆಲವರಿಗೆ ಮೈಸೂರು ಎನಾಕ್ಟ್‌ಮೆಂಟ್ಸ್ ಎಂದರೆ ಏನು ಎಂಬುದರ ಬಗ್ಗೆ ಪರಿಚಯ ಇರುವುದಿಲ್ಲ ಮಾನ್ಯ ಅಧ್ಯಕ್ಷರೇ ಅನೇಕ ಸಂದರ್ಭಗಳಲ್ಲಿ ರಸ್ತೆಗಳ ಅಪಘಾತಗಳು ಸಂಭವಿಸತಕ್ಕಂಥವುಗಳು ನಮ್ಮೆಲ್ಲರ ಅನುಭವಕ್ಕೆ ಬಂದಿರುವ ಹಾಗೆ ಈ ದನಗಳು ಮತ್ತು ಕುರಿಗಳನ್ನು ಯಾರು ಸಹ ಸರಿಯಾದ ರೀತಿಯಲ್ಲಿ ನೋಡಿಕೊಳ್ಳದೇ ದನಗಳಿಗೆ ಹಗ್ಗ ಮೂಗುದಾರಗಳು ಇಲ್ಲದೆ ಹಾಗೆಯೇ ಬಿಟ್ಟು ಬಿಟ್ಟಿರುತ್ತಾರೆ. ನಮ್ಮ ರಾಜ್ಯದಲ್ಲಿ ಒಂದು ಶಾಸನ ಇದೆ, ಏನೆಂದರೆ ಪ್ರಿವೆನ್‌ಷನ್ ಆಫ್ ಸ್ಟ್ರೇ ಕ್ಯಾಟಲ್ ಆಕ್ಟ್ ಎಂದು ಇದೆ. ಆದರೆ ನಾವು ಪ್ರತಿದಿವಸ ನೋಡು ತ್ತಿದ್ದೇವೆ. ರಸ್ತೆಗಳಲ್ಲಿ ಹಗ್ಗ ಮೂಗುದಾರ ಇಲ್ಲದೇ ದನಗಳು ಹೋಗುತ್ತಿರತಕ್ಕಂಥದ್ದು ಮತ್ತು ಅವು ಗಳನ್ನು ತಪ್ಪಿಸುವುದಕ್ಕೋಸ್ಕರ ಅನೇಕ ಸಂದರ್ಭಗಳಲ್ಲಿ ಚಾಲಕರು ಮನುಷ್ಯರ ಮೇಲೆ ಮತ್ತು ಬೇರೆ ವಾಹನಗಳ ಮೇಲೆ ಬಿಡತಕ್ಕಂಥಾದ್ದು ನಾವು ನೋಡುತ್ತಿರುತ್ತೇವೆ. ಇದರ ಬಗ್ಗೆ ಒಂದು ಕಾನೂನು ಇದ್ದರೂ ಸಹ ಕಾನೂನು ರೀತ್ಯಾ ಯಾವುದಾದರೂ ಒಂದು ಕೇಸನ್ನು ದಾಖಲು ಮಾಡಿದ್ದಾರೆಯೇ ವಿಂದರೆ ವರ್ಷಕ್ಕೆ ಒಂದು ಕೇಸ್ ಕೋರ್ಟಿಗೆ ಬರುತ್ತದೆಯೋ ಇಲ್ಲವೋ ? ನನಗೆ ತಿಳಿದಿರುವ ಪ್ರಕಾರ ಅಂತಹ ಕೇಸುಗಳು ಬರುವುದೇ ಇಲ್ಲ, ರಸ್ತೆಗಳಲ್ಲಿ ಎತ್ತಿನಗಾಡಿಗಳು ಹೋಗುತ್ತಿರುತ್ತವೆ. ನಾವು ಹಿಂದೆ ಗಾಡಿಗಳಲ್ಲಿ ಸಂಚಾರ ಮಾಡುತ್ತಿದ್ದಾಗ ಪ್ರತಿಯೊಬ್ಬರೂ ಸಹ ಲ್ಯಾಂಟಿನ ಕಟ್ಟಿಕೊಂಡು ರಾತ್ರಿಯ ಹೊತ್ತಿನಲ್ಲಿ ಪ್ರಯಾಣ ಮಾಡುತ್ತಿದ್ದರು ಈಗ ಯಾರಾದರೂ ಒಬ್ಬರಾದರೂ ಲ್ಯಾಂಟಿನನ್ನು ಕಟ್ಟು ತ್ತಿದ್ದಾರೆಯೇ ? ಲ್ಯಾಂಟೀನನ್ನು ಗಾಡಿಗಳಿಗೆ ಕಟ್ಟುವಂತೆ ಹೇಳುವುದು ಪೋಲೀಸರ ಕರ್ತವ್ಯ ಅಲ್ಲವೇ ? ಒಂದು ವೇಳೆ ಅವರನ್ನು ಕೇಳಿದರೂ ಸಹ ಅಲ್ಪ ಸಂಭಾವನೆಗೋಸ್ಕರ ಅವರನ್ನು ಬಿಟ್ಟುಬಿಡುತ್ತಾರೆ,

ಇವು ನಿತ್ಯ ನಡೆಯುತ್ತಾ ಇರತಕ್ಕಂಥದ್ದು. ಪೋಲೀಸರು ಹೆಲ್ಪ್‌ಲೆಸ್ ತರಹ ಕೂತುಕೊಂಡಿರುತ್ತಾರೆ. ಆದರೆ ನೀವು ಅಧಿಕಾರವನ್ನು ಹೊಂದಿರತಕ್ಕಂಥವರು ಆಡಳಿತ ಸೂತ್ರವನ್ನು ಹಿಡಿದಿರತಕ್ಕಂಥವರು ಸೂಕ್ತವಾದ ಆದೇಶವನ್ನು ಕೊಟ್ಟು ಸರಿಪಡಿಸಬೇಕು. ಎತ್ತಿನಗಾಡಿಗಳು ಮತ್ತು ಎತ್ತುಗಳು ವಾಹನಗಳಿಗೆ ಡಿಕ್ಕಿ ಹೊಡೆದು ಬಹುತೇಕವಾಗಿ ಈ ಒಂದು ಕಾರಣಕ್ಕಾಗಿ ಸತ್ತಿರುತ್ತವೆ. ಇದನ್ನು ತಪ್ಪಿಸಬೇಕಾದರೆ ಗಾಡಿಗಳಿಗೆ ಲ್ಯಾಂಟಿನ್ ಕಟ್ಟಿಕೊಂಡು ರಾತ್ರಿಹೊತ್ತು ಗಾಡಿಗಳನ್ನು ತೆಗೆದುಕೊಂಡು ಹೋಗಬೇಕು ಎಂಬುದನ್ನು ಕಡ್ಡಾಯ ಮಾಡಬೇಕು ಮತ್ತು ಹಿಂದೆ ಇದ್ದಂಥ ಪದ್ಧತಿಯನ್ನು ಪುನಃ ಜಾರಿಗೇ ತರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ ಈ ಸರ್ಕಾರದವರು ಡಿಐಆರ್ ಮತ್ತು ಮೀಸಾ ಪ್ರಯೋಗದಲ್ಲಿ ಯಾರು ಸಮಾಜಘಾತಕ ಶಕ್ತಿಗಳು ಇದ್ದಾರೆ, ದೇಶದ ಸಂಪತ್ತನ್ನು ವಾಮ ಮಾರ್ಗಗಳಿಂದ ಪಡೆದು ದೇಶದ ಜನತೆಗೆ ಅನ್ಯಾಯ ಮಾಡಿದ್ದಾರೆ, ಅವರು ಕಳ್ಳಸಂತೇಕೋರರಾಗಿರಬಹುದು, ಅವರು ಸ್ಮಗ್ಲರ್ಸ್ ಆಗಿರಬಹುದು, ಅವರು ಯಾರೇ ಆಗಿರಬಹುದು ಅಂತಹವರ ಮೇಲೆ ಈ ಒಂದು ಪ್ರಯೋಗವಾದರೆ ಅವನ್ನು ನಾವು ಸ್ವಾಗತಿಸುತ್ತೇವೆ. ಆದರೆ ರಾಜಕಾರಣಗಳ ಮೇಲೆ ನಿರ್ದಿಷ್ಟವಾದ ಖಚಿತವಾದ ಕಾರಣಗಳು, ಪುರಾವೆಗಳು ಏನೂ ಇಲ್ಲದೆ ಈ ಪ್ರಯೋಗವನ್ನು ಉಪಯೋಗಿಸತಕ್ಕಂಥಾದ್ದು ಸರಿಯಾದುದಲ್ಲ. ನೀವು ನಿಜವಾಗಿಯೂ ಸಹ ಪ್ರಜಾಪ್ರಭುತ್ವವಾದಿಗಳಾದರೆ ನಿಮಗೆ ನಿಮ್ಮ ಅಂತಃಕರಣಕ್ಕೆ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ, ಈಗ ನೀವು ಹಿಡಿದು ಜೈಲಿನಲ್ಲಿ ಇಟ್ಟಿರತಕ್ಕಂಥ ಜನಗಳು ನಿಮ್ಮಷ್ಟೇ ಪ್ರಜಾಪ್ರಭುತ್ವವಾದಿಗಳು, ನಿಮ್ಮಷ್ಟೇ ದೇಶಪ್ರೇಮಿಗಳು ಇದ್ದಾರೆ. ಈ ವಿಚಾರವನ್ನು ನೀವು ಮನಸ್ಸಿನಲ್ಲಿ ಮಥನ ಮಾಡಿ ತಿಳಿದುಕೊಳ್ಳಬೇಕಾಗಿದೆ. ಬಹುತೇಕ ಜನರು ಅಲ್ಲಿರತಕ್ಕಂಥವರಲ್ಲಿ ನಿಮ್ಮಷ್ಟೇ ಪ್ರಜಾಪ್ರಭುತ್ವವಾದಿಗಳು ನಿಮ್ಮಷ್ಟೇ ದೇಶಭಕ್ತರು ಇದ್ದಾರೆ, ದೇಶಕ್ಕೆ ಏನು ತ್ಯಾಗಮಾಡಬೇಕಾದರೂ ಸಿದ್ಧವಾಗಿರತಕ್ಕಂಥ ಜನಗಳು ಇದ್ದಾರೆ. ಅವರನ್ನು ಕಾರಣ ಇಲ್ಲದೇ ಜೈಲಿನಲ್ಲಿ ಇಟ್ಟಿರತಕ್ಕಂಥಾದ್ದು ಸರಿಯಲ್ಲ. ಮೊನ್ನೆ ಮಾನ್ಯ ಎಚ್. ಡಿ. ದೇವೇಗೌಡರನ್ನು ರಾತ್ರಿ $11\frac{1}{2}$ ಗಂಟೆಯಲ್ಲಿ ಮೀಸಾ ಕೆಳಗೆ ದಸ್ತಗಿರಿ ಮಾಡಿದ್ದಾರೆ. ಈ ರೀತಿ ದಸ್ತಗಿರಿ ಮಾಡುವುದಕ್ಕೆ ಪ್ರಬಲವಾದ ಕಾರಣವಾದರೂ ಏನಿತ್ತು ? ಅವರು $2\frac{1}{2}$–3 ಗಂಟೆ ಸಮಯದಲ್ಲಿ ಕೋರ್ಟಿನಲ್ಲಿ ನಿರಪರಾಧಿ ಎಂದು ತೀರ್ಪಿತ್ತಮೇಲೆ ಅವರು ಮನೆಗೆ ಹೋಗುವಾಗ ನನ್ನ ಜೊತೆಯಲ್ಲಿಯೂ ಅವರು ಮಾತನಾಡುವುದಕ್ಕೆ ಆಗಲಿಲ್ಲ. ಬೆಳಿಗ್ಗೆ ಮಾತನಾಡುತ್ತೇನೆ ಎಂದು ಹೇಳಿದರು. ಯಾವ ಸ್ನೇಹಿತರ ಜೊತೆಯಲ್ಲಿಯೂ ಅವರು ಮಾತನಾಡಲಿಲ್ಲ. ಅವರು ಮನೆಗೆ ಹೋಗಿ ಹೆಂಗಸರ ಮಕ್ಕಳ ಜೊತೆಯಲ್ಲಿ ಮಾತನಾಡಿದರು ಅವರ ಜೊತೆಯಲ್ಲಿ ಊಟ ಮಾಡಿದರು. ಮತ್ತೆ ಪುನಃ $11\frac{1}{2}$ ಗಂಟೆಗೆ ಅವರನ್ನು ಹಿಡಿದುಕೊಂಡು ಹೋಗಬೇಕಾದಂತ ಒತ್ತಡ ಏನಿತ್ತು? ಅವರು ದೇಶದ್ರೋಹದ ಚಟುವಟಿಕೆಗಳಲ್ಲಿ ಯಾವುದನ್ನು ಮಾಡಿದ್ದರು; ಸರ್ಕಾರದ ಆಡಳಿತವನ್ನು ಬುಡಮೇಲು ಮಾಡತಕ್ಕಂಥ ಚಟುವಟಿಕೆಗಳಲ್ಲಿ ಯಾವುದನ್ನು ಮಾಡಿದ್ದರು ಇದು ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇದು ಎಲ್ಲರಿಗೂ ಸ್ಪಷ್ಟವಾಗಿ ಕಾಣುತ್ತಿರತಕ್ಕಂಥ ವಿಚಾರವಾಗಿದೆ. ಈ ಜಗತ್ತೇ ನೋಡುವ ವಿಚಾರವಾಗಿದೆ. ಯಾವ ಅಪರಾಧವನ್ನೂ ಮಾಡದೇ ಇರತಕ್ಕಂಥವರನ್ನು, ಕೋರ್ಟಿನ ತೀರ್ಮಾನಕ್ಕೆ ಗೌರವ ಕೊಡದೇ ಪುನಃ $11\frac{1}{2}$ ಗಂಟೆಯಲ್ಲಿ ಅವರನ್ನು ಜೈಲಿಗೆ ಕಳಿಸಬೇಕಾದ ಪ್ರಮೇಯ ಏನು ? ಇದು ಪ್ರಜಾಪ್ರಭುತ್ವವನ್ನು ನಡೆಸತಕ್ಕಂಥ ವೈಖರಿಯೇ ? ಜನಗಳಿಗೆ ನಿಜವಾಗಿಯೂ ಸಹ ಏನು ಹಕ್ಕುಗಳನ್ನು ಕೊಟ್ಟಿದ್ದಾರೆ ಅವುಗಳನ್ನು ಚಲಾಯಿಸುವುದಕ್ಕೆ ಸರಿಯಾದ ಅನುಕೂಲವನ್ನು ಮತ್ತು ವಾತಾವರಣವನ್ನು ಈ ರಾಜ್ಯದಲ್ಲಿ ಸೃಷ್ಟಿ ಮಾಡಿದ್ದಾರೆಯೇ ? ಮಾರನೇ ದಿವಸ ಬೆಳಿಗ್ಗೆ ನಾನು ಕುತೂಹಲದಿಂದ ಅವರಿಗೆ ಫೋನ್ ಮಾಡಿದಾಗ ಅವರ ಮಗ ಅಳುತ್ತಾ ಉತ್ತರ ಕೊಡುತ್ತಾನೆ ರಾತ್ರಿ $11\frac{1}{2}$ ಗಂಟೆಯಲ್ಲಿ ಪುನಃ ದಸ್ತಗಿರಿ ಮಾಡಿದರು ಎಂದು. ನಾನು ಇದೇ ಮಾತನ್ನು ಅವತ್ತು ಹೇಳಿದಾಗ ಅಧ್ಯಕ್ಷರು ನಾನು ನಡೆದುಕೊಂಡಂತಾದ್ದು ಸರಿಯಲ್ಲವೆಂದು ಹೇಳಿದರು. ನಾನು ಉದ್ವೇಗದಲ್ಲಿ ಕೆಲವು ಮಾತುಗಳನ್ನು ಹೇಳಿದ್ದೇನೆ. ನಿಮಗೆ ಒಳ್ಳೆಯ ಅನುಭವ ಇದೆ. 30-40 ವರ್ಷಗಳಲ್ಲಿ ಒಳ್ಳೆಯ ರಾಜಕೀಯ ಅನುಭವ ಇದೆ. ಎಂತೆಂತಹ ಸಂದರ್ಭಗಳನ್ನೋ ಕಂಡಿದ್ದೀರಿ, ಎಂತೆಂತಹ ಜನಗಳ ಜೊತೆಯಲ್ಲಿ ವ್ಯವಹರಿಸಿದ್ದೀರಿ. ಆದರೆ ಇಂತಹ ಒಂದು ಘಟನೆಯನ್ನು ನೀವು ಮಾನವೀಯ ದೃಷ್ಟಿಯಿಂದ ನೋಡಲಿಕ್ಕೆ ಅಥವಾ ಒಂದು ನ್ಯಾಯ ದೃಷ್ಟಿಯಿಂದ ನೋಡಲಿಕ್ಕೆ ಕೋರ್ಟ್ ತೀರ್ಮಾನ ಕೊಟ್ಟಿದ್ದರೂ ಸಹ ಪುನಃ ಹಿಡಿದುಕೊಂಡು ಹೋಗಿದ್ದಾರೆ ಅವರ ಹೆಂಡತಿ ಮಕ್ಕಳ ಜೊತೆಯಲ್ಲಿ ಮಾತನಾಡುವ ಸಂದರ್ಭದಲ್ಲಿ ಅವರನ್ನು ಹಿಡಿದುಕೊಂಡು ಹೋಗಿದ್ದಾರೆ, ಅವರ ಹುಡುಗ ಅಳುತ್ತಾ ಉತ್ತರಕೊಟ್ಟಾಗ ಸ್ವಾಭಾವಿಕವಾಗಿ ಮಾನವೀಯತೆಯ ಹೃದಯ ಇರತಕ್ಕಂಥಾವರು ಮರುಗಲೇಬೇಕು ಹೀಗೆ ಮಾಡತಕ್ಕಂಥಾದ್ದು ಯಾವ ಸರ್ಕಾರಕ್ಕೂ ಸಹ ಗೌರವವನ್ನು ತರತಕ್ಕಂಥಾದ್ದಲ್ಲ. ಹೃದಯ

ಇರತಕ್ಕಂಥ ಯಾವ ಮನುಷ್ಯನೂ ಸಹ ಈ ರೀತಿ ನಡೆದುಕೊಳ್ಳಬಾರದು ಎಂದು ಬಹಳ ವ್ಯಸನದಿಂದ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಇನ್ನು ಪೋಲೀಸರನ್ನು ನಿಮ್ಮ ಪಕ್ಷದ ರಾಜಕೀಯ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವುದಕ್ಕೆ ನೀವು ಉಪಯೋಗಿಸತಕ್ಕಂಥ ಸಂದರ್ಭಗಳನ್ನು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಕಳೆದಸಾರಿ ಶ್ರೀಮಾನ್ ಸಂಜಯ ಗಾಂಧಿಯವರು ನಮ್ಮರಾಜ್ಯಕ್ಕೆ ಭೇಟಿ ಕೊಟ್ಟಾಗ ಬೆಂಗಳೂರಿನಲ್ಲಿ ಒಂದು ಬೃಹತ್ ಸಭೆಯನ್ನು ಕರೆದಿದ್ದೀರಿ. ಮಂಡ್ಯದಲ್ಲೂ ಸಹ ಈ ಒಂದು ಸಭೆಯನ್ನು ಕರೆದಿದ್ದೀರಿ. ಆ ಸಭೆಗೆ ನಾನು ತಿಳಿದುಕೊಂಡಿರುವಷ್ಟು ಮಟ್ಟಿಗೆ ಸುತ್ತಮುತ್ತಲಿನ ಎಲ್ಲಾ ಪೋಲೀಸ್ ಠಾಣೆಗಳಿಂದಲೂ ಸಹ ಪೋಲೀಸರನ್ನು ಕರೆಸಿದ್ದೀರಿ. ಅಷ್ಟೇ ಅಲ್ಲದೇ ಎಲ್ಲಾ ಬಸ್ಸುಗಳನ್ನೂ, ಲಾರಿಗಳನ್ನೂ, ಅವು ಸರ್ಕಾರಿ ಆಗಲೀ, ಖಾಸಗೀ ಆಗಲೀ ಎಲ್ಲವನ್ನೂ ಸಹ ಬೆಂಗಳೂರು, ಮಂಡ್ಯದ ಕಡೆಗೆ ತಿರುಗಿಸಿದರು. ನಿಮಗೆ ಗೊತ್ತಿಲ್ಲದ ಎಷ್ಟೋ ವಿಷಯಗಳು ನಡೆಯುತ್ತವೆ. ಶ್ರೀರಂಗಪಟ್ಟಣದಿಂದ ಬಂದಂತ ಬಸ್ಸುಗಳನ್ನು ಅಲ್ಲಿಯೇ ನಿಲ್ಲಿಸಿ, ಬೆಂಗಳೂರಿಗೆ ಬರತಕ್ಕಂಥ ಸರ್ಕಾರಿ ಬಸ್ಸುಗಳನ್ನು ಅಲ್ಲಿಯೇ ನಿಲ್ಲಿಸಿ ಈ ಮೇಳಕ್ಕೆ ಬರತಕ್ಕಂಥ ಜನಗಳನ್ನು ತುಂಬಿಸಿಕೊಂಡು ಬಂದಿದ್ದಾರೆ. ಆ ಪೈಕಿ ವಕೀಲರೂ ಇದ್ದಾರೆ, ಡಾಕ್ಟರುಗಳೂ ಇದ್ದಾರೆ. ಒಬ್ಬ ಜಡ್ಜ್ ಸಹ ಇದ್ದಾರೆ. ಒಬ್ಬ ಮ್ಯಾಜಿಸ್ಟ್ರೇಟ್ ಜಡ್ಜ್ ಕೋರ್ಟಿಗೆ ಬರುವುದಕ್ಕೆ ಆಗಲಿಲ್ಲ. ಅವರನ್ನು ಬಲವಂತದಿಂದ ಬಸ್‌ನಿಂದ ಕೆಳಕ್ಕೆ ತಳ್ಳಿ, ನೆಕ್ಸ್ಟ್ ಬಸ್‌ನಲ್ಲಿ ಬರುತ್ತಾನೆಂದು ಹೇಳಿ ಬೇರೆಯವರನ್ನು ಕೂರಿಸಿಕೊಂಡು ಬಂದಿದ್ದಾರೆ. ಈ ರೀತಿಯಲ್ಲಿ ಸಂಜಯಗಾಂಧಿಯವರನ್ನು ನೋಡುವುದಕ್ಕೆ ಬಂದಿದ್ದಾರೆ. ಪ್ರಸಿದ್ಧ ಸಿನಿಮಾ ಸಂಗೀತಗಾರರು ಹಾಡುತ್ತಾರೆಂದು ಪ್ರಚಾರ ಬೇರೆ ಆಗಿತ್ತು. ಇವತ್ತಿನದಿವಸ ಸಿನಿಮಾ ಕಂಡರೆ ನಮ್ಮ ಜನಗಳೂ ಆಕರ್ಷಿತರಾಗುತ್ತಾರೆ. ಅವರಿಗೆ ಇಷ್ಟೊಂದು ವ್ಯಾಮೋಹ ಇದೆ. ಇದು ತಮಗೆ ಗೊತ್ತಿಲ್ಲದ ವಿಚಾರವಲ್ಲ. ಇದಕ್ಕಾಗಿ ಕೇವಲ ಒಂದು ದಿವಸದ 10 ರೂಪಾಯಿಯ ಭತ್ಯಕ್ಕೋಸ್ಕರ ಬಂದರೋ ಅಥವಾ ಸ್ವಪ್ರೇರಿತರಾಗಿ ಬಂದಿದ್ದರೋ ಎಂಬುದು ಗೊತ್ತಿಲ್ಲ. ಸ್ವಪ್ರೇರಿತರಾಗಿ ಬಂದಿದ್ದರು ಎಂದರೆ ನಾನು ಒಪ್ಪುವುದಿಲ್ಲ. ಕೆಲವು ಜನರು ಸ್ವಯಂಪ್ರೇರಿತರಾಗಿ ಬಂದವರೂ ಉಂಟು. ಅವರು ಯಾವ ಯಾವ ಉದ್ದೇಶದಿಂದ ಬಂದಿದ್ದರೋ ಗೊತ್ತಿಲ್ಲ. ಅನೇಕರು ಅನೇಕ ಉದ್ದೇಶಗಳಿಂದ, ಚಪಲಗಳಿಂದ ಬಂದಿದ್ದವರೂ ಉಂಟು. ಭಾರಿ ಭಾರಿ ಚಾಪಲ್ಯಗಳನ್ನು ಉದ್ದೇಶಗಳನ್ನು, ಇಟ್ಟುಕೊಂಡು ಜನರು ಬಂದಿದ್ದು ಉಂಟು ಬಲವಂತವಾಗಿ ಬಂದವರು, ಹಣದ ಆಕರ್ಷಣೆಯಿಂದ ಬಂದವರೂ ಉಂಟು.

ಶ್ರೀ ಎಂ. ಬಿ. ರಾಮಸ್ವಾಮಿ.—ಲಾರಿ, ಬಸ್ಸು ಏನೇನಿತ್ತೋ ಎಲ್ಲವನ್ನೂ ತರಿಸಿಕೊಂಡರು ಎಂದು ಹೇಳಿದಿರಲ್ಲಾ ಒಂದೂವರೆ-ಎರಡು ಲಕ್ಷ ಜನ ಬಂದಿದ್ದರಲ್ಲಾ ಅವರನ್ನೆಲ್ಲಾ ಪ್ರೇರಣೆ ಮಾಡಿಕೊಂಡು ಕರೆದುಕೊಂಡು ಬಂದಿದ್ದರು ಎಂದು ತಿಳಿದುಕೊಂಡಿರಾ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನು ಹೇಳುತ್ತೇನೆ, ಮಂಡ್ಯದಲ್ಲಿ ಬಸ್ ಮಾಲೀಕರನ್ನು ನೀವೇ ಪ್ರತ್ಯೇಕವಾಗಿ ಬೇಕಾದರೆ ವಿಚಾರಿಸಿ. ಅವರು ಬಸ್‌ಗಳನ್ನು ಕೊಟ್ಟಿದ್ದರು, ಡೀಸೆಲ್‌ಗಳನ್ನು ಇವರೇ ಹಾಕಿಸಿದ್ದಾರೆ, ಲಾರಿ ಮಾಲೀಕರನ್ನು ಕೇಳಿ, ಅದಕ್ಕೂ ಇವರೇ ಡೀಸಲ್ ಹಾಕಿಸಿದ್ದಾರೆ. ನಾನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿದ್ದೇನೆ ಎಂದು ಭಾವಿಸುವುದಾದರೆ ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ವಸ್ತುಸ್ಥಿತಿ ಇದು. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ದಿವಸ ಹೇಳಿದರು, ಎಲ್ಲೆಲ್ಲಿ ಜನಸಂದಣಿ ಸೇರುತ್ತದೆಯೋ ಅಂತಹ ಕಡೆ ಭದ್ರತಾ ವ್ಯವಸ್ಥೆ ಮಾಡಬೇಕಾಗುತ್ತದೆ, ಅದು ಸರ್ಕಾರದ ಕರ್ತವ್ಯ ಎಂದು ನಿಮ್ಮ ದೃಷ್ಟಿಯಲ್ಲಿ ಸಂಜಯ ಗಾಂಧಿಯವರು ಬೇರೆ ತರಹ ಕಾಣಬಹುದು, ಜನತೆಯ ದೃಷ್ಟಿಯಲ್ಲಿ ಹಾಗೆ ಕಾಣುವುದಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದರು. ಆದ್ದರಿಂದ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ನನ್ನ ಪ್ರಶ್ನೆ ಏನೆಂದರೆ,—ಶ್ರೀಮಾನ್ ಸಂಜಯ ಗಾಂಧಿಯವರು ಕೇವಲ ನಿಮ್ಮ ಪಕ್ಷದ ಯುವಕಶಕ್ತಿಯ ಮುಖಂಡರಾಗಿ ಇಲ್ಲಿಗೆ ಬಂದಿದ್ದರು. ಅವರಿಗೆ ನಭೂತೊ ನಭವಿಷ್ಯತಿ ಎನ್ನತಕ್ಕ ಸ್ವಾಗತವನ್ನು ಸರ್ಕಾರ ಕೊಡಬೇಕಾದರೆ ಸರ್ಕಾರದ ಯಂತ್ರವನ್ನು ದುರುಪಯೋಗ ಮಾಡಿಕೊಂಡರು ಎಂಬುದೇ ನನ್ನ ಆಪಾದನೆ.

ಶ್ರೀ ಟಿ. ಆರ್. ಶಾಮಣ್ಣ.—ಕಾರ್ಪೊರೇಷನ್ನಿನಿಂದ 40 ಲಾರಿ ಕೊಟ್ಟರು.

ಶ್ರೀ ಎಚ್. ಟಿ. ಕೃಷ್ಣಪ್ಪ.—ನನ್ನ ಲೆಕ್ಕಾಚಾರದ ಪ್ರಕಾರ ತಮ್ಮ ಅಧಿಕಾರವನ್ನು ಶಾಶ್ವತವಾಗಿ ಉಳಿಸಿಕೊಳ್ಳುವುದಕ್ಕೆ, ಭದ್ರ ಮಾಡಿಕೊಳ್ಳುವುದಕ್ಕೆ ಮತ್ತು ಸಂಜಯಗಾಂಧಿಯವರು ಶ್ರೀಮತಿ ಇಂದಿರಾ ಗಾಂಧಿಯವರ ಮಕ್ಕಳು, ಅವರು ತಮ್ಮ ವರ್ಚಸ್ಸನ್ನು ಪ್ರಧಾನಿಯವರ ಮೇಲೆ ಬೀರುತ್ತಾರೆ ಎಂದು

ಅವರನ್ನು ಓಲೈಸಿಕೊಳ್ಳುವುದಕ್ಕೆ ಸಂಪ್ರೀತಗೊಳಿಸುವುದಕ್ಕೆ ನೀವು ಇಷ್ಟೆಲ್ಲಾ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿರಿ ಎಂಬುದೇ ನನ್ನ ಆಪಾದನೆ. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಿದರೆ ಸಂದರ್ಭೋಚಿತವೆನಿಸಲಾರದು ಎಂದು ಹೇಳುತ್ತೇನೆ. ಶ್ರೀಮಾನ್ ಸಂಜಯಗಾಂಧಿಯವರು ಪಂಡಿತ್ ಜವಾಹರಲಾಲ್ ನೆಹರೂ ಅವರ ಮೊಮ್ಮಗ ಮತ್ತು ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಮಗ ಎನ್ನುವುದು ಬಿಟ್ಟರೆ ಅವರು ಈ ದೇಶದ ಜನತೆಗೆ ರಾಜಕೀಯ ಜೀವನದಲ್ಲಾಗಲೀ, ಬೇರೆ ಯಾವುದೇ ಕ್ಷೇತ್ರದಲ್ಲಾಗಲೀ ಅವರ ಕೊಡುಗೆ ಏನು ಎಂಬುದೇ ನನ್ನ ಪ್ರಶ್ನೆ. ನೀವು ಜನರನ್ನು ಈ ರೀತಿ ಫೂಲ್ ಮಾಡುವುದಕ್ಕೆ ಹೋಗಬೇಡಿ. ಜನಗಳಿಗೆ ದೊಡ್ಡ ಕೆಲಸ ಮಾಡಲಿ. ಉದಾಹರಣೆಗೆ ತಾವು (ಮುಖ್ಯಮಂತ್ರಿಗಳು) 30 ವರ್ಷದಿಂದ ರಾಜಕಾರಣದಲ್ಲಿ ಇದ್ದೀರಿ, ಹಂತಹಂತವಾಗಿ ಮೇಲಕ್ಕೆ ಬಂದಿದ್ದೀರಿ, ನೀವು ಬೇಕಾದರೆ ಬೆರಳಿಟ್ಟು ತೋರಿಸಬಹುದು ಇಂತಹ ಕೆಲಸ ಮಾಡಿದ್ದೇನೆ ಎಂದು ಶ್ರೀಮಾನ್ ಚನ್ನಬಸಪ್ಪನವರು ಆಗಲೀ, ನಾಯ್ಕರ್ ಅವರಾಗಲೀ, ಘೋರ್ಪಡೆಯವರಾಗಲೀ ತೋರಿಸಬಹುದು. ಅವರಿಗೆ ಅಂಥಾದ್ದು ಏನಿದೆ, ಏನೂ ಇಲ್ಲ. ನೀವು ಇಂತಹ ವಿಷಯಗಳಲ್ಲಿ ಸ್ವತಂತ್ರವಾಗಿ ವಿಚಾರ ಮಾಡಿ. ಸ್ವತಂತ್ರ್ಯವಾಗಿ ತೀರ್ಮಾನ ತೆಗೆದುಕೊಳ್ಳಿ, her masters voice ಆಗಬೇಡಿ. ಬೆಳಗ್ಗೆಯಿಂದ ಸಾಯಂಕಾಲದವರೆಗೆ ಪ್ರಜಾಪ್ರಭುತ್ವದ ವಿಚಾರ ಮಾತನಾಡಿ, ಅದಕ್ಕೆ ವಿರೋಧವಾಗಿ ನಡೆದುಕೊಳ್ಳಬಾರದು. ಮುಂದಿನ ಪೀಳಿಗೆ ನಾವು ಏನು ಮಾಡಿದ್ದೇವೆ ಎಂಬುದನ್ನು ನೋಡುತ್ತದೆ. ಇವತ್ತು ಆ ಮಾತುಗಳನ್ನು ಪ್ರಯೋಗಿಸಬಾರದೋ ಏನೊ ಗೊತ್ತಿಲ್ಲ. ನಾವು ಯಾರು ಶಾಶ್ವತವಲ್ಲ, ಅಧಿಕಾರ ಶಾಶ್ವತವಲ್ಲ. ಎಲ್ಲಾ ಅಶಾಶ್ವತ. ಒಂದು ದಿವಸ ಎಲ್ಲರೂ ಹೋಗಲೇಬೇಕು. ಆದರೆ ಮುಂದಿನ ಜನಾಂಗಕ್ಕೆ, ಒಳ್ಳೆಯ ಆದರ್ಶಗಳನ್ನು, ಸಂಪ್ರದಾಯಗಳನ್ನು ಬಿಟ್ಟುಹೋಗಬೇಕು. ಆದಕಾರಣ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನೀವು ರಾಜಕೀಯ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವುದಕ್ಕೋಸ್ಕರ ಸರ್ಕಾರದ ಯಂತ್ರವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬಾರದು. ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಿದರೆ ಅವರು ಅನ್ಯಥಾ ಭಾವಿಸಬಾರದು. ಯಾವಾಗಲೂ ನಿಮ್ಮ ಸ್ನೇಹಿತರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಅಧಿಕಾರದಲ್ಲಿ ಇರತಕ್ಕ ಕಾಲದಲ್ಲಿ ಬಹಳ ಜನ ನಿಮ್ಮನ್ನು ಓಲೈಸುತ್ತಾರೆ, ಮೆಚ್ಚುಗೆ ಮಾತುಗಳನ್ನಾಡುತ್ತಾರೆ, ಮುಖಸ್ತುತಿ ಮಾಡುತ್ತಾರೆ. ಆದರೆ ನೀವು ಅವರ ಬಗ್ಗೆ ಹುಷಾರಾಗಿರಬೇಕು. ನನ್ನ ಮಾನ್ಯ ಸ್ನೇಹಿತರು ಉದಾಹರಣೆ ಕೊಟ್ಟರು 1947ರಲ್ಲಿ ಸ್ವಾತಂತ್ರ್ಯ ಬಂತು ಅದಕ್ಕಿಂತ ಮುಂಚಿತವಾಗಿ ಇಂಗ್ಲೀಷಿನವರೊಬ್ಬರು ಚಿಕ್ಕಮಗಳೂರಿನಲ್ಲಿ ಜಿಲ್ಲಾಧಿಕಾರಿಯಾಗಿದ್ದರು. ಅವರು ಜಮಾಬಂದಿಗೆ ಹೋಗುವಾಗ ಒಂದು ಆಲ್ಸೇಷನ್ ನಾಯಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಆಗ ಜನರು ಮಾಂಸ, ಮೂಳೆಗಳನ್ನು ತಂದು ಆ ನಾಯಿಗೆ ಕೊಡುತ್ತಿದ್ದರು. ಅದನ್ನು ನೋಡಿ ಸಂತೋಷಪಟ್ಟು ಜಿಲ್ಲಾಧಿಕಾರಿ ಅವರನ್ನು ಕರೆದು ನಿನ್ನ ಅರ್ಜಿ ವಿಚಾರ ಏನು ಎಂದು ಕೇಳಿ ಅವನಿಗೆ ಆ ಕೆಲಸ ಆಗುವಂತೆ ಆರ್ಡರ್ ಮಾಡುತ್ತಿದ್ದರಂತೆ. ಒಂದು ದಿವಸ ಯಾರೋ ಒಬ್ಬರು ಸ್ವಲ್ಪ ಚೂಪಾದ ಮೂಳೆಯನ್ನು ನಾಯಿಗೆ ಕೊಟ್ಟರು, ಅದು ಗಂಟಲಿಗೆ ಸಿಕ್ಕಿಹಾಕಿಕೊಂಡು ಆ ನಾಯಿ ಸತ್ತುಹೋಯಿತು. ಸತ್ತುಹೋದ ನಾಯಿಗೆ ಶವಸಂಸ್ಕಾರಕ್ಕಾಗಿ ಮೆರವಣಿಗೆಯಲ್ಲಿ ತೆಗೆದುಕೊಂಡುಹೋದಾಗ ಸಹಸ್ರಾರು ಜನ ಮೂಲೆ ಮೂಲೆಯಿಂದ ಬಂದಿದ್ದರು. ಆದರೆ ಆದಾದ 6 ತಿಂಗಳ ಮೇಲೆ ದುರ್ದೈವವಶಾತ್ ಜಿಲ್ಲಾಧಿಕಾರಿ ಸತ್ತಾಗ ಯಾರೂ ಕೂಡ ಹೋಗಿ ನೋಡಲಿಲ್ಲವಂತೆ. ಆದ್ದರಿಂದ ಅಧಿಕಾರ ಇರತಕ್ಕಂಥ ಕಾಲದಲ್ಲಿ ಓಲೈಸತಕ್ಕ ಜನಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ನಿಜಲಿಂಗಪ್ಪನವರಿಗೂ ಅದೇ ಸ್ಥಿತಿ ಇದೆ.

ಶ್ರೀ ಎಚ್ ಟಿ. ಕೃಷ್ಣಪ್ಪ.—ಜೈಲುಗಳ ವ್ಯವಹಾರಗಳ ಬಗ್ಗೆ ಹೇಳುವುದಾದರೆ, ದಿನೇ ದಿನೇ ಜೈಲುಗಳ ವ್ಯವಹಾರಗಳ ಪರಿಸ್ಥಿತಿ ಉತ್ತಮವಾಗುತ್ತಿದೆ. ಮುಖ್ಯಮಂತ್ರಿಗಳಿಗೆ ನಾನು ಆತ್ಮ ಸಂತೋಷದಿಂದ ಆಡತಕ್ಕ ಮಾತು ಇದು. ರಾಜಕೀಯ ಖೈದಿಗಳ ಬಗ್ಗೆ ಬಹಳ ಎಚ್ಚರ ವಹಿಸಿ ಅವರ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದಾರೆ. ಅವರ ಅವಶ್ಯಕತೆಗಳೆಲ್ಲವನ್ನೂ ಪೂರೈಸುತ್ತಿದ್ದಾರೆ. ಬಳ್ಳಾರಿಯಲ್ಲಿ ನಡೆದಂತಹ ಒಂದು ಕಹಿ ಘಟನೆ ಬಿಟ್ಟರೆ ಬೇರೆ ಯಾವುದೇ ಘಟನೆಗಳು ನಡೆದಿಲ್ಲ. ಬಳ್ಳಾರಿ ಜೈಲಿನಲ್ಲಿ ಒಬ್ಬ ಅಧಿಕಾರಿ ರಾಜಕೀಯ ಖೈದಿಗೆ ರಕ್ತ ಬಂದು ತಲೆಗೆ ಗಾಯ

ವಾಗುವಂತೆ ಹೊಡೆದಿದ್ದಾರೆ. ಅದೊಂದು ಘಟನೆ ಬಿಟ್ಟರೆ ಬೇರೆಲ್ಲೂ ಕಹಿ ಘಟನೆಗಳು ನಡೆದಿಲ್ಲ. ಕೂಡಲೇ ಐ.ಜಿ.ಪಿ.ಯವರು ಆ ಜಾಗಕ್ಕೆ ಧಾವಿಸಿ ತನಿಖೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿ ಕೂಡ ಇಟ್ಟಿದ್ದಾರೆ. ಅದೊಂದು ಘಟನೆ ಬಿಟ್ಟರೆ ಜೈಲಿನಲ್ಲಿ ಉತ್ತಮವಾದ ಪರಿಸ್ಥಿತಿ ಇದೆ. ಜನರಲ್ ಹಾಸ್ಪಟಲ್ ಮಹಡಿಮೇಲೆ ನಿಂತುಕೊಂಡು ನೋಡಿದರೆ ಜೈಲಿನಲ್ಲಿರುವ ಪರಿಸ್ಥಿತಿ ಕಾಣುತ್ತದೆ. ನಾನು ನೋಡಿದ್ದೇನೆ. ಅಡಿಗೆ ಮನೆ, ಊಟದ ಮನೆ ಇನ್ನೂ ಸ್ವಲ್ಪ ಸುವ್ಯವಸ್ಥಿತವಾಗಿ ಇದ್ದರೆ ಚೆನ್ನಾಗಿರುತ್ತದೆ ಎಂದು ಕಾಣುತ್ತದೆ. ಇನ್ನೊಂದು ವಿಷಯ ಏನೆಂದರೆ, ಜೈಲಿನಲ್ಲಿರತಕ್ಕ ಜನರಿಗೆ ಕರಕುಶಲ ಕೈಗಾರಿಕೆಗಳಲ್ಲಿ ಒಳ್ಳೆಯ ತರಬೇತಿ ಕೊಟ್ಟು ಉತ್ತಮವಾದ ಪದಾರ್ಥಗಳನ್ನು ತಯಾರು ಮಾಡುತ್ತಿದ್ದೀರಿ. ಅವರಿಗೆ ಕೊಡುತ್ತಿರುವ ವೇತನ ಸಾಲದು. ಬಹಳ ಕಡಿಮೆ ಇದೆ. ಜೈಲಿನಲ್ಲಿರತಕ್ಕ ಜನಗಳಿಗೂ ಕೂಡ ಸಾಮಾಜಿಕ ಹೊಣೆಗಾರಿಕೆ ಇದೆ ಎಂದು ತಿಳಿದುಕೊಳ್ಳುವುದಾದರೆ, ಜೈಲಿನಲ್ಲಿರತಕ್ಕ ಜನಗಳಿಗೆ ಹೊರಗಡೆ ಸಾಕಿ ಸಲಹಬೇಕಾದಂತ ಹೆಂಡತಿ, ಮಕ್ಕಳು ಇದ್ದಾರೆ, ಇದನ್ನು ತಿಳಿದುಕೊಂಡು ಅವರಿಗೆ ವೇತನ ಜಾಸ್ತಿ ಮಾಡಿ. ಆ ಹಣ ಹೊರಗಡೆ ಇರತಕ್ಕಂಥ ಅವರ ಅವಲಂಬಿಗಳಿಗೆ ತಲಪುವಂತೆ ಮಾಡತಕ್ಕದ್ದು ಮುಖ್ಯ ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ಪದಾರ್ಥಗಳನ್ನು ತಯಾರು ಮಾಡಬೇಕಾದರೆ ಕಚ್ಚಾ ಪದಾರ್ಥಗಳೇನು ಬೇಕೋ ಅದನ್ನು ಯಶಸ್ವಿಯಾಗಿ, ಯಥೇಚ್ಛವಾಗಿ ಸರಬರಾಜು ಮಾಡುವುದಕ್ಕೂ ಸಹ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬಯಲು ಜೈಲುಗಳ ಬಗ್ಗೆ ವಿಚಾರ ಮಾಡುವುದು ಮುಖ್ಯ. ಜೈಲುಗಳ ಸಂಖ್ಯೆಯನ್ನು ಹೆಚ್ಚು ಮಾಡುವುದು ನಮ್ಮ ಸಂಸ್ಕೃತಿಗೆ, ನಾಗರೀಕತೆಗೆ ಸರಿಯಾದುದಲ್ಲ ಇವತ್ತು ಬೇಕಾದಷ್ಟು ಜನರನ್ನು ಜೈಲಿನಲ್ಲಿ ಕೂಡಿದ್ದೀರಿ. ಆದರೆ ನಾವು ನಿಜವಾಗಿಯೂ ನಾಗರೀಕರು, ಸುಸಂಸ್ಕೃತರು ಎಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕಾದರೆ ಜೈಲುಗಳ ಸಂಖ್ಯೆಯನ್ನು ಹೆಚ್ಚು ಮಾಡಿದರೆ ಅದಕ್ಕೆ ತದ್ವಿರುದ್ಧವಾದ ಅರ್ಥವನ್ನು ಹೊಂದಬೇಕಾಗುತ್ತದೆ. ಆದ ಕಾರಣ ಜೈಲುಗಳ ಸಂಖ್ಯೆಯನ್ನು ಹೆಚ್ಚು ಮಾಡುವುದು ಸರಿಯಲ್ಲ. ಜೈಲಿನಲ್ಲಿರತಕ್ಕವರು ಒಂದೇ ತರಹ ಉಡುಪು ಹಾಕದೆ ಬೇರೆ ಬೇರೆ ತರಹ ಉಡುಪನ್ನು ಹಾಕಿಕೊಂಡರೆ ಏನು ತೊಂದರೆಯಾಗುತ್ತದೆ ? ಅವರಲ್ಲಿ ನೀಚ ಭಾವನೆ ಬೆಳೆಯುವುದಕ್ಕೆ ಅವಕಾಶ ಕೊಡಬಾರದು; ಅವರು ಏನೋ ಅಕಸ್ಮಿಕವಾಗಿ ತಪ್ಪು ಮಾಡಿರುತ್ತಾರೆ ತಪ್ಪು ಮಾಡಿದವರನ್ನು ಸುಧಾರಣೆ ಮಾಡಬೇಕೇ ಹೊರತು ಚಿತ್ರಹಿಂಸೆ ಕೊಡುವುದಾಗಲಿ, ಪ್ರಾಣ ತೆಗೆಯುವುದಾಗಲಿ ಮಾಡಕೂಡದು. ಜೈಲಿನಲ್ಲಿಟ್ಟುಕೊಳ್ಳುವ ಮೂಲೋದ್ದೇಶ ಹೀಗಿರುವುದರಿಂದ ಸರಿಯಾದ ದಿಸೆಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಂತ್ರಿಗಳ ವಿಚಾರವನ್ನು ಹೇಳಬಯಸುತ್ತೇನೆ. ತಾವು ಅಧಿಕಾರಕ್ಕೆ ಬಂದಾಗ ಹೆಮ್ಮೆಯಿಂದ, ಅಭಿಮಾನದಿಂದ ಒಂದು ಮಾತನ್ನು ಹೇಳಿದ್ದೀರಿ. ಅದನ್ನು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ತಂದರೆ ಒಳ್ಳೆಯದೆಂದು ಕಾಣುತ್ತದೆ. ಸ್ವಾತಂತ್ರ್ಯ ಬಂದಮೇಲೆ ಬಂದಂತಹ ಮಂತ್ರಿ ಮಂಡಲಗಳ ಪೈಕಿ ನಮ್ಮದು ಅತ್ಯುತ್ತಮ ಮಂತ್ರಿಮಂಡಲವೆಂದೂ, ದಕ್ಷರು, ಯುವಕರು ಹಾಗೂ ಪ್ರಾಮಾಣಿಕರು ಇರತಕ್ಕ ಮಂತ್ರಿಮಂಡಲವೆಂದು ತಾವು ಹೇಳಿದ ಮಾತುಗಳು ದಪ್ಪ ಅಕ್ಷರಗಳಲ್ಲಿ ಪತ್ರಿಕೆಗಳಲ್ಲಿ ಬಂದವು. ಆದರೆ ಇವತ್ತು ಆ ಮಂತ್ರಿಮಂಡಲ ಇಲ್ಲ; ಬಹಳ ಬದಲಾವಣೆ ಆಗಿದೆ; ಅದೇ ವಿಚಾರವನ್ನು ಇವತ್ತು ಹೇಳುವುದಕ್ಕೆ ಸಾಧ್ಯವೆ ? ನಾಲ್ಕು ವರ್ಷಗಳು ಕಳೆದ ಮೇಲೆ ನೀವು ಹೇಳಲಾರಿರಿ ಎಂದು ನನ್ನ ಅಭಿಪ್ರಾಯ. ಇದರ ಬಗ್ಗೆ ತಾವು ಏನು ನಿರೀಕ್ಷಣೆ ಮಾಡಿದ್ದಿರಿ ಆ ನಿರೀಕ್ಷಣೆಯ ಗುರಿಯನ್ನು ನೀವು ಇನ್ನೂ ಮುಟ್ಟಿಲ್ಲವೆಂದು ವಿಷಾದದಿಂದ ಹೇಳುತ್ತೇನೆ. ಆ ಅಭಿಪ್ರಾಯವನ್ನು ನೀವು ಹಂಚಿಕೊಳ್ಳುತ್ತೀರಿ ಎಂಬ ಭಾವನೆ ನನಗೆ ಇದೆ. ಮಂತ್ರಿಗಳು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾರೆ ಎಂಬ ಬಗ್ಗೆ ನಿಮಗೆ ಒಂದು ಸಾರಿ ತಲೆ ಕೆಟ್ಟು ಹೋಗಿ ಅವರಿಗೆ ಆಚಾರ್ಯ ಸಂಹಿತೆಯನ್ನು ಗೊತ್ತು ಮಾಡುತ್ತೇನೆಂದು ಹೊರಟಿದ್ದೀರಿ. ಆದರೆ ಆಚಾರ್ಯ ಸಂಹಿತೆ ಬರಲಿಲ್ಲ, ಆದಕ್ಕೆ ಮಂತ್ರಿಗಳೇ ವಿರೋಧ ಮಾಡಿರಬೇಕು. ಈ ಸಂಹಿತೆಯು ಪ್ರಜೆಗಳಿಗೆ ಮತ್ತು ಶಾಸನಸಭಾಸದಸ್ಯರಿಗೆ ಬೇಕಾಗಿರುವುದರಿಂದ ಇದನ್ನು ಮಂತ್ರಿಗಳೇ ವಿರೋಧ ಮಾಡಿರಬೇಕೇ ವಿನಹ ಬೇರೆ ಯಾರೂ ವಿರೋಧ ಮಾಡುವುದಕ್ಕೆ ಕಾರಣವಿಲ್ಲ

ವೆಂದು ತಿಳಿದುಕೊಂಡಿದ್ದೇನೆ. ನಾನು ಕಳೆದ ಸಾರಿ ಮಾತನಾಡುತ್ತಾ ಹೇಳಿದೆ, ನಿರ್ದಿಷ್ಟವಾದ ದಿನದಲ್ಲಿ, ನಿರ್ದಿಷ್ಟವಾದ ಕಾಲದಲ್ಲಿ ಮಂತ್ರಿಗಳು ಸಂದರ್ಶನ ಕೊಡುತ್ತಾರೆಂಬ ಭಾವನೆಯನ್ನು ಜನಗಳಲ್ಲಿ ಮೂಡಿಸುವುದಕ್ಕೆ ಮಂತ್ರಿಮಂಡಲಕ್ಕೆ ಸಾಧ್ಯವಾಗಲಿಲ್ಲ ಎಂದು. ಒಂದೊಂದು ವೇಳೆ ಮೂರನೇ ಮಹಡಿಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುತ್ತಿದರೂ ಕೂಡ ಶಾಸ್ತ್ರಕ್ಕೆ ಒಬ್ಬರು ಮಂತ್ರಿಗಳು ಸಿಗುವುದಿಲ್ಲ. ನಾವು ಶಿಸ್ತನ್ನು ಪಾಲಿಸುತ್ತೇವೆ, ನೀವು ಅದನ್ನು ಪಾಲಿಸಬೇಕು ಎಂದು ಜನಗಳ ಮುಂದೆ ಹೇಳುತ್ತಿರುವಾಗ ಎಲ್ಲಿ ಶಿಸ್ತು ಹುಟ್ಟಬೇಕೋ ಆ ಜಾಗದಲ್ಲಿ ಶಿಸ್ತು ಇಲ್ಲದಿದ್ದರೆ ಜನಗಳಿಗೆ ಬೋಧನೆ ಮಾಡುವುದಕ್ಕೆ ನೈತಿಕವಾದ ಸಾಮರ್ಥ್ಯ ಎಲ್ಲಿ ಬಂತು ಎಂದು ನನ್ನ ಪ್ರಶ್ನೆ? ಯಾವ ಮಂತ್ರಿಗಳನ್ನೇ ತೆಗೆದುಕೊಳ್ಳಿ, 100ಕ್ಕೆ 70 ಜನ ಯಾವ ಒಂದು ಸಾರ್ವಜನಿಕ ಕಾರ್ಯಕ್ರಮವನ್ನು ಒಪ್ಪಿಕೊಂಡರೂ ಅದಕ್ಕೆ ಸಕಾಲದಲ್ಲಿ ಹೋಗುವುದಿಲ್ಲ, ಹೋಗುವುದು ಅಪರೂಪ, ಹೋದಂತಹ ಕಾಲದಲ್ಲಾದರೂ ಸಕಾಲಕ್ಕೆ ಬರುವುದಕ್ಕೆ ಆಗಲಿಲ್ಲ ಎನ್ನುವಂತಹ ಒಂದು ವಿವರಣೆಯನ್ನೂ ಸಹ ಜನಗಳಿಗೆ ಕೊಡತಕ್ಕ ಸೌಜನ್ಯತೆ ಕಾಣುವುದಿಲ್ಲ. ಇನ್ನು ಪ್ರವಾಸ ಮಾಡುವ ಕಾಲದಲ್ಲಿ ಇದನ್ನು ಬಹಳ ಮುಖ್ಯವಾಗಿ ಯೋಚಿಸಬೇಕಾಗಿದೆ. ಯಾವ ಮಂತ್ರಿಗಳನ್ನೇ ತೆಗೆದುಕೊಳ್ಳಿ (ಒಬ್ಬೊಬ್ಬರನ್ನು ಬಿಟ್ಟು) ಇವತ್ತಿನವರೆಗೆ ಅವರು ಪ್ರವಾಸ ಮಾಡಿರತಕ್ಕ ಕಥನ ಏನು ಇದೆ ಅದನ್ನು ಪರೀಕ್ಷೆ ಮಾಡಿ ನೋಡಿ. ಅವರ ಸ್ವಂತ ಜಿಲ್ಲೆಗೆ ಹೆಚ್ಚಾಗಿ ಹೋಗಿರುತ್ತಾರೆ; ಸ್ವಂತ ಜಿಲ್ಲೆಗೆ ಹೋಗುವುದರ ಜೊತೆಗೆ ಸ್ವಂತ ಕ್ಷೇತ್ರಕ್ಕೆ ಇನ್ನೂ ಹೆಚ್ಚಾಗಿ ಹೋಗಿರುತ್ತಾರೆ. ಅವರವರ ಕ್ಷೇತ್ರಗಳನ್ನು ಅಭಿವೃದ್ಧಿ ಮಾಡಿಕೊಳ್ಳಲಿ ಎಂದು ಮಂತ್ರಿಗಳನ್ನು ಮಾಡಿದ್ದೀರೋ ಅಥವಾ ಇಡೀ ದೇಶದ ಅಭಿವೃದ್ಧಿ ಮಾಡುವುದಕ್ಕೆ ಮಾಡಿದ್ದೀರೋ ಎಂಬುದು ನನ್ನ ಪ್ರಶ್ನೆ? ಹಿಂದೆಯೂ ಹೀಗೆ ಇತ್ತು ಎಂದು ಹೇಳಬೇಡಿ, ಹಿಂದೆ ಇದ್ದರೂ ಅದು ತಪ್ಪು; ಇಂದು ಇದ್ದರೂ ತಪ್ಪು. ಈ ಬಗ್ಗೆ ದಯವಿಟ್ಟು ಅಂಕಿ ಅಂಶಗಳನ್ನು ತರಿಸಿ ನೋಡಿ. ಈಗ ಉದಾಹರಣೆಗೆ ಹೇಳುವುದಾದರೆ ಮಂಡ್ಯ, ಮೈಸೂರು ಹಾಸನ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕ್ಷಾಮ ಬಂತು. ಆ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ ಕ್ಷಾಮ ಪರಿಹಾರ ಕಾರ್ಯಗಳನ್ನು ಮಾಡುವುದಕ್ಕೋಸ್ಕರ ಇಬ್ಬರು ಮಂತ್ರಿಗಳನ್ನು (ಮಲ್ಲಿಕಾರ್ಜುನ ಸ್ವಾಮಿ ಮತ್ತು ಕೃಷ್ಣ) ನೇಮಕ ಮಾಡಿದಿರಿ. ಆ ಪ್ರದೇಶಕ್ಕೆ ಮಾನ್ಯ ಕೃಷ್ಣರವರು ಹೋಗಿದ್ದು ಡೆಪ್ಯೂಟಿ ಕಮೀಶನರ್‌ರವರ ಕಛೇರಿಯಲ್ಲಿ ಒಂದು ಮೀಟಿಂಗ್ ಮಾಡಿದರೇ ಹೊರತು ಯಾರೂ ಕ್ಷಾಮಪೀಡಿತ ಸ್ಥಳವನ್ನು ನೋಡುವುದಕ್ಕೆ ಹೋಗಲಿಲ್ಲ. ಹಾಸನ ಜಿಲ್ಲೆಯಲ್ಲಿ ಮಾತ್ರ ಎಷ್ಟು ಹಣ ಖರ್ಚು ಮಾಡಬೇಕಾಗಿತ್ತೋ ಅದಕ್ಕಿಂತ 4 ಪಟ್ಟು ಖರ್ಚು ಮಾಡಿದ್ದೀರಿ. ಅಲ್ಲಿ ತರಾತುರಿ ಕೆಲಸ ನಡೆದು ಅನೇಕ ಅವ್ಯವಹಾರಗಳು ನಡೆದವು. ಚನ್ನಪಟ್ಟಣ ಮತ್ತು ಮದ್ದೂರು ತಾಲ್ಲೂಕುಗಳು ನಮ್ಮ ತಾಲ್ಲೂಕಿಗಿಂತ ಅಭಿವೃದ್ಧಿ ಹೊಂದಿದ ಪ್ರದೇಶಗಳು. ಅಲ್ಲಿ 18 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ನಮ್ಮ ತಾಲ್ಲೂಕಿನಲ್ಲಿ ಕೇವಲ $2\frac{1}{2}$ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈ ತಾರತಮ್ಯವನ್ನು ತಾವು ಊಹೆ ಮಾಡಿ ತಿಳಿದುಕೊಳ್ಳಬೇಕಾಗಿದೆ. ಇದೇ ರೀತಿ ಚನ್ನರಾಯಪಟ್ಟಣ, ನಾಗಮಂಗಲ ತಾಲ್ಲೂಕುಗಳನ್ನು ತೆಗೆದುಕೊಂಡರೆ, ನಾಗಮಂಗಲ ಬೆಂಗಾಡು ಪ್ರದೇಶ. ಅದು ಕ್ಷಾಮಕ್ಕೆ ತುತ್ತಾದ ಕಾಲದಲ್ಲಿ ಜನಗಳ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ. ಅಂಥ ಸಂದರ್ಭದಲ್ಲಿ ಆ ಪ್ರದೇಶಕ್ಕೆ (ನಮಗೆ) ದೊರಕಿದ್ದು ಕೇವಲ 2 ಲಕ್ಷ ರೂಪಾಯಿಗಳು. ನಮಗಿಂತಲೂ ಮುಂದುವರಿದ ಪ್ರದೇಶಗಳಿಗೆ ಕೊಟ್ಟಿರತಕ್ಕ ಹಣ ಎಷ್ಟೆಂಬುದನ್ನು ನೋಡಿದರೆ ನೀವೇ ಈ ತಾರತಮ್ಯವನ್ನು ಅರ್ಥ ಮಾಡಿಕೊಳ್ಳಬಹುದು. ಆಮೇಲೆ ಮಂತ್ರಿಗಳು ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುವಾಗ ಜಾತಿ ಕಲಹ ವರ್ಗ ಕಲಹ ಇವುಗಳನ್ನು ಪ್ರಚೋದನೆ ಮಾಡುವ ಭಾಷಣಗಳನ್ನು ಮಾಡುತ್ತಾರೆ. ಅದನ್ನು ಬಹಳ ಕಟ್ಟುನಿಟ್ಟಾಗಿ ತಪ್ಪಿಸಬೇಕು. ನಿಜವಾಗಿಯೂ ಸಹ ನಮ್ಮ ದೇಶದಲ್ಲಿ ಸುಖ ಶಾಂತಿ ನೆಲಸಬೇಕಾದರೆ, ನಮ್ಮ ಜನಕ್ಕೆ ನೆಮ್ಮದಿ ಸಿಗಬೇಕಾದರೆ, ಒಪ್ಪತ್ತಿನ ಊಟ ಕೊಡದಿದ್ದರೂ ಚಿಂತೆಯಿಲ್ಲ ಕೋರ್ಟು ಕಛೇರಿಗಳಿಗೆ, ಪೋಲೀಸ್ ಸ್ಟೇಷನ್ನಿಗೆ ಹೋಗದಂತೆ ಕಾಪಾಡಬೇಕಾದರೆ, ಜನತೆ ಸೌಜನ್ಯತೆಯಿಂದ ನಡೆದುಕೊಳ್ಳಬೇಕಾದರೆ, ಸೌಹಾರ್ದತೆ ಬೆಳೆಯಬೇಕಾದರೆ ಇಂಥ ಮಾತುಗಳನ್ನು ಆಡಬಾರದು. ಅದರಲ್ಲಿಯೂ ಅಧಿಕಾರದಲ್ಲಿರತಕ್ಕ ಜನಗಳು ಇಂಥ ಮಾತುಗಳನ್ನಾಡಿದರೆ ಅದನ್ನೇ ಅನುಸರಿಸತಕ್ಕದ್ದು ಕೆಳಮಟ್ಟದ ಜನದ ಸ್ವಭಾವವಾಗಿರುವುದರಿಂದ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು, ಪ್ರತಿಯೊಂದು ಮಾತನ್ನೂ ತೂಗಿ ಮಾತನಾಡಬೇಕು.

ದುರ್ದೈವವಶಾತ್ ಪ್ರಕರಣಗಳನ್ನು ಹೇಳುವುದು ಬೇಡ, ಮಂತ್ರಿಗಳು ಹೋದ ಹೋದ ಕಡೆಗೆಲ್ಲೆಲ್ಲ ಈ ರೀತಿ ನಡೆಯುತ್ತದೆ. ಈ ರೀತಿ ಎಲ್ಲೂ ನಡೆಯದ ಹಾಗೆ ಕಟ್ಟುನಿಟ್ಟಾಗಿ ಸೂಚನೆಯನ್ನು ಕೊಟ್ಟು ಬಾಯಿ ಮುಚ್ಚಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ವರ್ಗ ಕಲಹ ಎಂದರೇನು ?

ಶ್ರೀ ಹೆಚ್. ಟಿ. ಕೃಷ್ಣಪ್ಪ —ತಮ್ಮ ಹಕ್ಕುಗಳಿಗೋಸ್ಕರ ಬೇರೆ ಬೇರೆ ವರ್ಗದವರೊಡನೆ ಹೋರಾಟ ಮಾಡತಕ್ಕದ್ದು. ಮಾನ್ಯ ಅಧ್ಯಕ್ಷರೆ, ತಾವು ಮೊನ್ನೆ ನೌಕರರ ಸಂಘದ ಕಟ್ಟಡದ ಪ್ರಾರಂಭೋತ್ಸವ ಮಾಡುವ ಕಾಲದಲ್ಲಿ ಒಂದು ಮಾತನ್ನಾಡಿದಿರಿ, ಅದು ಪತ್ರಿಕೆಯಲ್ಲಿ ವರದಿಯಾಗಿದೆ. ಅದರ ಉದ್ದೇಶ ಸರಿಯಾಗಿದೆ, ಅದನ್ನು ಸ್ವಾಗತಿಸುತ್ತೇನೆ. ನಿಜವಾಗಿ ಸಮಾಜವಾದ ದೇಶದಲ್ಲಿ ಬರಬೇಕಾದರೆ, ಎಲ್ಲ ವರ್ಗದ ಜನರೂ ಆರ್ಥಿಕವಾಗಿ ಸಮಾನತೆ ಪಡೆಯಬೇಕಾದರೆ, ಬಲಿಷ್ಠರಾಗಿರತಕ್ಕವರು ದುರ್ಬಲವರ್ಗದ ಜನಗಳಿಗೆ ತಮ್ಮ ಭಾಗದ ಹೊಣೆಗಾರಿಕೆಯನ್ನು ನಿರ್ವಹಿಸಲೇಬೇಕಾಗುತ್ತದೆ, ಕೊಡಲೇಬೇಕಾಗುತ್ತದೆ. ಆದರೆ ತಾವು ಮಾತನಾಡುವಾಗ .. "A day may come when the tenents will become the owners of the House" ಎಂದು ಹೇಳಿದಿರಿ. ಆ ಉದ್ದೇಶವನ್ನು ಒಪ್ಪಿದೆ, ಅದನ್ನು ಯಾವ ರೀತಿ ಜಾರಿಗೆ ತರಬೇಕೋ ವಿಚಾರವಮಾಡಿ ಅದನ್ನು ಕಾನೂನನ್ನಾಗಿ ಮಾಡಿ, ಅದನ್ನು ಸ್ವಾಗತಿಸೋಣ.

ಆದರೆ ಈಗ ಏನಾಗಿದೆ ಎಂದರೆ ಮನೆ ಮಾಲೀಕರೆಲ್ಲರೂ ಸಹ ಟೆನೆಂಟ್‌ಗಳನ್ನು ದೊಣ್ಣೆ ಗಂದಿಗೆ ತೆಗೆದುಕೊಂಡು ಓಡಿಸುವುದಕ್ಕೆ ಶುರು ಮಾಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಟೆನೆಂಟ್ ಆಗಿರುವವರು ಮನೆಯನ್ನು ಬಿಟ್ಟು ಕೊಡುವುದು ಬೇಡ ಎಂದು ಕುಳಿತುಕೊಂಡಿದ್ದಾರೆ.

2-30 P.M.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮನೆಯ ಮಾಲೀಕರು ಬಲಿಷ್ಠರಾಗಿದ್ದಾರೆ. ಆದ್ದರಿಂದ ಅನೇಕ ಕಡೆ ಮನೆಯ ಮಾಲೀಕರು ಟೆನೆಂಟ್‌ಗಳಿಗೆ ಬೇಕಾದಷ್ಟು ತೊಂದರೆಯನ್ನು ಕೊಟ್ಟಿದ್ದಾರೆ ಟೆನೆಂಟ್ ಮನೆಗಳಿಗೆ ಹಾವನ್ನು ತೆಗೆದುಕೊಂಡು ಹೋಗಿ ಎಸೆದಿದ್ದಾರೆ. ಆದ್ದರಿಂದ ಈ ರೀತಿ ಮಾನ್ಯ ಮುಖ್ಯ ಮಂತ್ರಿಗಳು ಹೇಳುವುದರಿಂದ ಸಮಾಜದಲ್ಲಿ ಅಸ್ತವ್ಯಸ್ಥ ಉಂಟಾಗುತ್ತದೆ. ಆದ್ದರಿಂದ ಹೇಳುವುದು ಬೇಡ ಅದನ್ನು ಕಾರ್ಯತಃ ಮಾಡಬೇಕು ಇಂಥಾ ಕೇಸುಗಳಿಗೆ ಸಂಬಂಧಪಟ್ಟಹಾಗೆ ನಮಗೆ ೨೦ ಅರ್ಜಿಗಳು ಬಂದಿವೆ. ಮನೆಯ ಮಾಲೀಕರು ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದು ತಮ್ಮ ಅರ್ಜಿಯಲ್ಲಿ ತಿಳಿಸಿದ್ದಾರೆ. ಆದ್ದರಿಂದ ಇದರ ಬಗ್ಗೆ ದಯ ವಿಟ್ಟು ಸ್ಪಷ್ಟೀಕರಣ ಕೊಡಬೇಕು ಸರ್ಕಾರಿ ನೌಕರರು ಹೆಚ್ಚಿಗೆ ಬಾಡಿಗೆ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ ಆದ್ದರಿಂದ ಬಾಡಿಗೆ ಮನೆಗಳನ್ನು ಬಿಡಿಸುವುದಕ್ಕೆ ಮನೆಯ ಮಾಲೀಕರು ಟೆನೆಂಟುಗಳಿಗೆ ಹಿಂಸೆ ಕೊಡುತ್ತಿದ್ದಾರೆ. ಅವರೆಲ್ಲಾ ಹೇಗೆ ಬದುಕಿಕೊಳ್ಳಬೇಕು ಎನ್ನುವ ಪರಿಸ್ಥಿತಿ ಉದ್ಭವವಾಗಿದೆ. ಇದರ ಉದ್ದೇಶ ಏನು ಎಂದರೆ ಇಂಥಾ ಹೇಳಿಕೆಗಳನ್ನು ಕೊಡುವುದರಿಂದ ಸ್ವಲ್ಪ ಎಚ್ಚರಿಕೆಯಿಂದ ಕೊಡಬೇಕಾಗುತ್ತದೆ. ಸದಸ್ಯರಿಗೆ ಅವರಿಗೆ ಏನೂ ತೊಂದರೆಯಾಗದಿದ್ದರೆ ಅವರು ಸುಮ್ಮನೆ ಇರುತ್ತಾರೆ. ಆದರೆ ಈಗ ಮಾನ್ಯ ಮುಖ್ಯ ಮಂತ್ರಿಗಳು ಬಾಡಿಗೆ ಮನೆಗಳ ಬಗ್ಗೆ ಕೊಟ್ಟಿರತಕ್ಕ ಹೇಳಿಕೆಯಿಂದ ಅಲ್ಲೋಲ ಕಲ್ಲೋಲ ಪರಿಸ್ಥಿತಿ ಉಂಟಾಗಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಲೋಕಸೇವಾ ಆಯೋಗದ ಬಗ್ಗೆ ಹೇಳುವುದಾದರೆ ಅರ್ಜಿಯನ್ನು ಕೊಟ್ಟು ೬ ತಿಂಗಳಾದರೂ ಸಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯುವುದಿಲ್ಲ. ನಾನು ಈ ಬಗ್ಗೆ ವಿಚಾರವನ್ನು ತಿಳಿದುಕೊಂಡಿರುವ ಹಾಗೆ ಲೋಕಸೇವಾ ಆಯೋಗ ಮಾಡಬೇಕಾದಂತಹ ಕೆಲಸ ಹಾಗೆಯೆ ನಿಂತಿದೆ. ಕೆಲಸಕ್ಕೆ ಅರ್ಜಿಯನ್ನು ಕೊಟ್ಟು ಸುಮಾರು ಒಂದು ವರ್ಷವಾದರೂ ಕೂಡ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆದಿಲ್ಲ. ಇದರ ಬಗ್ಗೆ ಒಂದು ಕಟ್ಟುನಿಟ್ಟಾದ ನಿಯಮವನ್ನು ಅನುಸರಿಸಬೇಕು. ಕಾಲಮಿತಿಯನ್ನು ಗೊತ್ತು ಮಾಡಬೇಕು. ಕಟ್ಟುನಿಟ್ಟಾಗಿ ಬೆಳಗಿನಿಂದ ಸಂಜೆಯವರೆಗೂ ಕೆಲಸ ಮಾಡಿದರೂಕೂಡ ಲೋಕಸೇವಾ ಆಯೋಗದವರ ಮುಂದಿರತಕ್ಕ ಕೆಲಸಗಳನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥಾದ್ದನ್ನು ನಾನು ತಿಳಿದುಕೊಂಡಿದ್ದೇನೆ. ಆ ಕೆಲಸವನ್ನು ಪೂರೈಸುವುದಕ್ಕೆ ಈಗ ಇರತಕ್ಕ ಸದಸ್ಯರಿಂದಲೇ ಸಾಧ್ಯ ಇದೆ. ಆದರೆ ಅದಕ್ಕೆ ಒಂದು ವ್ಯವಸ್ಥೆ ಆಗಬೇಕು ೭ ಜನ ಸದಸ್ಯರೂ ಕೂತ

ಒಂದೇ ಕಡೆ ಕುಳಿತುಕೊಂಡು ಅಧ್ಯಕ್ಷರಾದಿಯಾಗಿ ಒಬ್ಬೊಬ್ಬ ಅಭ್ಯರ್ಥಿಯನ್ನು ೨-೩ ಪ್ರಶ್ನೆಗಳನ್ನು ಕೇಳುತ್ತಾ, ಸತಾಯಿಸುತ್ತಾ ಕುಳಿತುಕೊಂಡರೆ ಕೆಲಸ ಆಗುವುದಿಲ್ಲ. ಅದಕ್ಕಾಗಿ ನನ್ನ ಒಂದು ಸಲಹೆ ಏನೆಂದರೆ ಈಗ ಇರತಕ್ಕ ೭ ಜನ ಸದಸ್ಯರನ್ನೂ ಉಪಯೋಗಿಸಿಕೊಂಡು ೨-೩ ಉಪಸಮಿತಿಗಳನ್ನು ಮಾಡಿ ಅವರು ಆ ಕೆಲಸವನ್ನು ನಿರ್ವಹಿಸಬೇಕು. ಅರ್ಜಿಯನ್ನು ಕೊಟ್ಟ ೬ ತಿಂಗಳಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ಪೂರೈಸಬೇಕು ಎಂದು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಲೋಕಸೇವಾ ಆಯೋಗದವರು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಆ ಅಭ್ಯರ್ಥಿಗಳ ಚಾರಿತ್ರ್ಯವನ್ನು ಆಧಾರವಾಗಿಟ್ಟುಕೊಂಡು ಅವರ ದಕ್ಷತೆಯನ್ನು ನೋಡಿ ಈ ಎರಡು ಅಂಶಗಳನ್ನು ಆಧಾರವಾಗಿಟ್ಟುಕೊಂಡು ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ಈ ಲೋಕಸೇವಾ ಆಯೋಗದ ಸದಸ್ಯರನ್ನು ನೇಮಿಸುವಾಗ ೪೫-೫೦ ವಯಸ್ಸಿನ ಒಳಗಡೆ ಇರತಕ್ಕವರನ್ನು ನೇಮಿಸಬೇಕು. ಬರೀ ಮುದುಕರನ್ನೇ ಅಲ್ಲಿಗೆ ಹಾಕಬಾರದು. ಅರ್ಧ ಮುದುಕರು, ಅರ್ಧ ಯುವಕರು ಈ ರೀತಿ ಪಬ್ಲಿಕ್ ಸರ್ವೀಸ್ ಕಮೀಷನ್ನಿನ ಸದಸ್ಯರಾಗಿ ನೇಮಿಸಿದರೆ ಒಳ್ಳೆಯದು. ಏತಕ್ಕೆಂದರೆ ಮುದುಕರು ಕೆಲವರು ಸಂಕುಚಿತ ಮನೋಭಾವನೆಯನ್ನು ಹೊಂದಿರುತ್ತಾರೆ. ಅವರು ಯಾವಾಗಲೂ ತಮ್ಮ ಮಕ್ಕಳು ಮೊಮ್ಮಕ್ಕಳು ಇತ್ಯಾದಿ ತಮ್ಮ ಫ್ಯಾಮಿಲಿಯ ಬಗ್ಗೆಯೇ ಹೆಚ್ಚು ಚಿಂತನೆ ಮಾಡುತ್ತಿರುತ್ತಾರೆ. ಅವರಿಗೆ ವೃದ್ಧಾಪ್ಯ ಜಾಸ್ತಿ ಇರುವುದರಿಂದ ಅವರು ಯಾವಾಗಲು ಸಂಕುಚಿತಭಾವನೆಯನ್ನು ಹೊಂದಿರುತ್ತಾರೆ. ಅವರು ಇತರೆ ಜನರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಅಷ್ಟಾಗಿ ಚಿಂತನೆ ಮಾಡುವುದಿಲ್ಲ. ಅನುಭವ ಶಾಲಿಗಳಾದವರಿಗೆ ವಿಶಾಲ ದೃಷ್ಟಿ ಬರಬೇಕು. ಆದರೆ ಬಹುತೇಕ ಅವರು ಸಂಕುಚಿತ ಭಾವನೆಯನ್ನು ಹೊಂದಿರುತ್ತಾರೆ. ಆದ್ದರಿಂದ ೪೫-೫೦ ವರ್ಷ ವಯಸ್ಸಾಗಿರತಕ್ಕ ಸ್ವಲ್ಪ ಅನುಭವ ಶಾಲಿಗಳನ್ನು ಪಬ್ಲಿಕ್ ಸರ್ವೀಸ್ ಕಮೀಷನ್ ಸದಸ್ಯರಾಗಿ ನೇಮಕ ಮಾಡಬೇಕು, ಮತ್ತು ಅವರಲ್ಲಿ ಕೆಲಸ ಮಾಡುವಂತಹ ಹುಮ್ಮಸ್ಸು ಇರಬೇಕು. ಮತ್ತು ಅದಕ್ಕೆ ಬೇಕಾದಂತಹ ಶಕ್ತಿಯೂ ಇರಬೇಕು. ಅಂಥಾ ವರನ್ನು ಅಲ್ಲಿಗೆ ನೇಮಕ ಮಾಡಬೇಕು.

ವಿವಾಸ್ಪದವಾಗಿದ್ದಂತಹ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ತಯಾರು ಮಾಡಿದ್ದಾರೆ. ಅದನ್ನು ಬಿಡುಗಡೆ ಮಾಡುವಾಗ ಅದನ್ನು ಬೈಬಲ್ ಗ್ರಂಥ ಎಂದು ಕರೆದಿದ್ದಾರೆ. ಅದರ ಪಾವಿತ್ರ್ಯತೆ ಅದರ ಪ್ರಯೋಜನ ಜನಗಳಿಗೆ ಇನ್ನೂ ತಲುಪಿಲ್ಲ. ಅದು ನಿಧಾನವಾಯಿತು. ಅದು ಎಷ್ಟರಮಟ್ಟಿಗೆ ಇದೆ ಎಂಬುದನ್ನು ಇನ್ನೂ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಅವಕಾಶವಾಗಿಲ್ಲ. ಆದ್ದರಿಂದ ಆ ಆಯೋಗದ ವರದಿಯನ್ನು ಸಭೆಯ ಮುಂದಿಟ್ಟು ಅದರ ಬಗ್ಗೆ ಆದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಜಾಗ್ರತಾ ಆಯೋಗದ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುವುದಾದರೆ ಜಾಗ್ರತಾ ಆಯೋಗಕ್ಕೆ ಅನೇಕ ವಿಚಾರಗಳನ್ನು ಆಗಾಗ್ಗೆ ಕಳುಹಿಸುತ್ತಾರೆ. ಅಲ್ಲಿಂದ ವರದಿಗಳೂ ಬರುತ್ತವೆ. ಆದರೆ ಅವುಗಳ ಬಗ್ಗೆ ಏನು ಕಾರ್ಯಕ್ರಮ ತಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ಬೆಳಕು ಚೆಲ್ಲಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಹಾಸನದಲ್ಲಿ ನಡೆದಂತಹ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಹಗರಣ; ಇದರಲ್ಲಿ ಎಷ್ಟು ಹಣ ದುರುಪಯೋಗವಾಗಿದೆ, ಯಾರು ಆ ದುರುಪಯೋಗಕ್ಕೆ ಕಾರಣಕರ್ತರು, ಮತ್ತು ಆ ಹಣವನ್ನು ವಾಪಸ್ಸು ಪಡೆಯುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ, ಹಾಗೆಯೇ ಚಿಕ್ಕಹೊಳೆ ಪ್ರಾಜೆಕ್ಟಿಗೆ ಸಂಬಂಧಪಟ್ಟ ಹಾಗೆ ಡಿಫೆಕ್ಟೀವ್ ಕನ್‌ಸ್ಟ್ರಕ್ಷನ್ ಮಾಡುವುದಕ್ಕೆ ಯಾರು ಜವಾಬ್ದಾರರು ಎಂಬುದನ್ನು ತನಿಖೆ ಮಾಡಿದ್ದೀರಾ? ಶ್ರೀಮಾನ್ ಚನ್ನಬಸಪ್ಪನವರಲ್ಲಿ ನನಗೆ ಅಪಾರ ಗೌರವ ಇದೆ. ಆದರೆ ಅಪಾದನೆಗಳು ಬಂದಾಗ ಅದನ್ನು ವಿಚಾರಣೆ ಮಾಡಿದ ಜಾಗ್ರತಾ ಆಯೋಗದ ವರದಿಯನ್ನು ಈ ಸಭೆಯ ಮುಂದೆ ಇಡದೆ ಹೋದರೆ ಏನು ಭಾವನೆ ಬರುತ್ತದೆ? ಅದು ಅನುಮಾನಕ್ಕೆ ಆಸ್ಪದ ಕೊಡುತ್ತದೆ. ಶ್ರೀಮಾನ್ ಚನ್ನಬಸಪ್ಪನವರು ಹೇಳಿಕೆ ಕೊಟ್ಟರು, ಅದನ್ನು ಒಪ್ಪಿ ಕೊಂಡದ್ದು ಆಯಿತು. ಆದರೆ ಅಲ್ಲಿ ಇದ್ದಂತಹ ಪದಾರ್ಥಗಳು ಗೈರುಹಾಜರಾಗಿರುವ ಬಗ್ಗೆ ವಿಜಿಲೆನ್ಸ್ ಕಮಿಷನ್ನಿಗೆ ರೆಫರ್ ಮಾಡಿದ್ದರು. ಇದು ಹೆಡ್ಕ್ವಾರ್ಟರ್ಸ್ ಹಾಸ್ಪಿಟಲಿಗೆ ಸಂಬಂಧಪಟ್ಟ ವಿಷಯವನ್ನು ನಾನು ಹೇಳುತ್ತಿದ್ದೇನೆ. ಆದ್ದರಿಂದ ಹೀಗೆ ಪದೇ ಪದೇ ಕೆಲವು ವಿಚಾರಗಳನ್ನು ತಿಳಿದುಕೊಳ್ಳುವ ಬಗ್ಗೆ ಸರ್ಕಾರ ತನಿಖೆಗೆ ಹುಕುಂ ಮಾಡುವುದು ತನಿಖೆಯಾದ ಮೇಲೆ ವರದಿ ಬರುತ್ತದೆ. ಆ ವರದಿ ಬಂದ ಮೇಲೆ ಹಾಗೆಯೇ ಇಟ್ಟುಕೊಂಡು ಕುಳಿತುಕೊಳ್ಳುವುದು ನನಗೆ ಅರ್ಥವಾಗುತ್ತಿಲ್ಲ. ಪ್ರತಿಸಾರಿಯೂ ಕೂಡ ಆಯೋಗದವರು ಏನು ವರದಿಯನ್ನು ಕಳುಹಿಸಿದರು ಅದನ್ನು ಈ ಸಭೆಯ ಮುಂದೆ ಇಡಬೇಕು. ಇದು ಮೂಲಭೂತವಾದ ಪ್ರಶ್ನೆ. ಹಲವಾರು ಪ್ರಕರಣಗಳ ಬಗ್ಗೆ ಇದೇ ರೀತಿ ಆಗುತ್ತದೆ. ಜಾಗ್ರತಾ ಆಯೋಗದವರು ಕೊಟ್ಟಂತಹ ವರದಿಯ

ಮೇಲೆ ನಮಗೆ ನಿಜವಾಗಿಯೂ ಕೂಡ ವಿಶ್ವಾಸ ಇದೆ. ಅವುಗಳನ್ನು ಸರ್ಕಾರದವರು ಕಾರ್ಯಗತ ಮಾಡಬೇಕು ಎನ್ನುವ ನಿಷ್ಠೆ ಸರ್ಕಾರದವರು ಇದ್ದರೆ ಅವುಗಳ ವಿಚಾರದಲ್ಲಿ ಉದಾಸೀನ ಭಾವನೆಯನ್ನು ತಾಳತಕ್ಕದ್ದು ಸರಿಯಲ್ಲ ಎಂದು ನಾನು ಹೇಳುತ್ತೇನೆ.

ಇನ್ನು ಡೆವಲಪ್‌ಮೆಂಟ್ ಅಥಾರಿಟಿಯ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಬಹಳ ವಿವಾದ ಇದೆ. ಇದರಲ್ಲಿ ಕೆಲವು ಐ.ಎ.ಎಸ್. ಅಧಿಕಾರಿಗಳನ್ನು ಉತ್ತಮವಾದ ಸ್ಥಾನದಲ್ಲಿ ಇಡಬೇಕಾಗುತ್ತದೆ. ಇದು ಅವರು ಸ್ವತಂತ್ರವಾಗಿ ವಾತಾವರಣದಲ್ಲಿ ಕೆಲಸ ಮಾಡುವುದಕ್ಕೆ ಮಾಡಿಕೊಡುವಂತಹ ವ್ಯವಸ್ಥೆ. ಇದರಿಂದ ಸಾರ್ವಜನಿಕರಿಗೆ ಯಾವ ಪ್ರಯೋಜನವಾಗುವುದಿಲ್ಲ. ಕಡಿಮೆ ಖರ್ಚಿನಲ್ಲಿ ಹೆಚ್ಚು ದಕ್ಷತೆಯಿಂದ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಈ ಕೆಲಸವನ್ನು ಮಾಡಬಲ್ಲರು.

ಲೋಕೋಪಯೋಗಿ ಇಲಾಖೆ ಕೆಲಸದಂತೆ ಪ್ರಾಜೆಕ್ಟ್ ಕೆಳಗೆ ಅಚ್ಚುಕಟ್ಟು ಡೆವಲಪ್ ಮಾಡತಕ್ಕ ಬಗ್ಗೆ ಒಂದು ಅಥಾರಿಟಿಯನ್ನು ಮಾಡಿದ್ದೀರಿ. ಅದಕ್ಕೆ ಒಂದು ಖಾತೆಯನ್ನು ಮಾಡಿದ್ದೀರಿ. ಅದು ಅನಾವಶ್ಯಕ ಎಂದು ಜನಾಭಿಪ್ರಾಯ ಇದೆ. ಈ ಅಥಾರಿಟಿ ಡೆವಲಪ್‌ಮಾಡುವ ಬಗ್ಗೆ ತಾಂತ್ರಿಕ ಸಲಹೆಗೆ ಮತ್ತು ಕಾರ್ಯನಿರ್ವಹಣೆ ಮಾಡಲು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಅವಲಂಬಿಸಬೇಕಾಗುತ್ತದೆ. ಅಂತಹ ಸಂದರ್ಭ ಇರುವಾಗ ಲೋಕೋಪಯೋಗಿ ಇಲಾಖೆಯೇ ಈ ಎಲ್ಲ ಕೆಲಸಗಳನ್ನು ಮಾಡಿ, ಸರ್ಕಾರಕ್ಕೆ ಆಗತಕ್ಕಂಥ ಇದರ ಲುಕ್ಸಾನನ್ನು ಏನೆ ತಪ್ಪಿಸಬಾರದು. ಆದುದರಿಂದ ತಾಂತ್ರಿಕ ಸಲಹಾ ಸಮಿತಿಗೆ ಈ ಇಲಾಖೆಯ ಒಳಿತು, ಕೆಡಕುಗಳ ಬಗ್ಗೆ ಒಂದು ವರದಿಯನ್ನು ಪಡೆಯುವ ಉದ್ದೇಶದಿಂದ ಈ ವಿಚಾರವನ್ನು ಕಳಿಸಿಕೊಟ್ಟು, ಅವರು ಏನು ವರದಿ ಕೊಡುತ್ತಾರೋ ಅದರ ಬಗ್ಗೆ ಕಾರ್ಯನಿರತರಾಗಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆಮೇಲೆ ಸರ್ಕಾರದವರು ದೇಶದಲ್ಲಿ ಸಮಾಜವಾದವನ್ನು ತರುವ ಉದ್ದೇಶದಿಂದ ಅನೇಕ ಸ್ತುತ್ಯವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅದು ಸ್ವಾಗತಾರ್ಹವಾದಂಥಾದ್ದು. ಈಗ ಬಹುಮುಖ್ಯವಾದಂಥ ಭೂಸುಧಾರಣೆಗೆ ಸಂಬಂಧಪಟ್ಟ ಹಾಗೆ ಹೇಳುವುದು ಬೇಕಾಗಿಲ್ಲ. ಬಾಂಡೆಡ್ ಲೇಬರರ್ಸ್ ಬಗ್ಗೆ ಹೇಳುವುದಾದರೆ, ಈಗ ಬಾಂಡೆಡ್ ಲೇಬರರ್ಸ್ ಅಲ್ಲ ಅವರು. ಆದರೂ ಅವರು ಬಾಂಡೆಡ ಲೇಬರರ್ ಎಂದು ತಪ್ಪು ಕಲ್ಪನೆಯನ್ನು ತಳೆದುಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗಿ ಅವರಿಗೆ ಈ ದಿವಸ ಜೀವನ ಮಾಡುವುದಕ್ಕೆ ಕಷ್ಟವಾಗಿ ಒಪ್ಪೊತ್ತಿನ ಊಟ ಕೂಡ ಸಿಕ್ಕುತ್ತಾ ಇಲ್ಲ. ನೀವು ಅವರಿಗೆ ನೆರೆಯಾಗಿ ನಿಂತು, ಸ್ವತಂತ್ರವಾಗಿ ಬದುಕತಕ್ಕಂಥ ಅನುಕೂಲ ಅವರಿಗೆ ಮಾಡಿಕೊಡಬೇಕು. ಕೂಲಿ ಮಾಡಿ ಜೀವನ ಮಾಡತಕ್ಕವರು ಲೇಬರ್ ಆಗುತ್ತಾರೆಯೇ ಹೊರತು ಬಾಂಡೆಡ್ ಲೇಬರ್ ಆಗುವುದಿಲ್ಲ. ಹಳೇ ಮೈಸೂರು ಭಾಗದಲ್ಲಿ ಇಂತಹ ಜನ ಇದ್ದಾರೆ. ಏಕೆಂದರೆ, ಅವರಿಗೆ ಮುಂಗಡವಾಗಿ ಹಣ ಕೊಟ್ಟಿರುತ್ತಾರೆ. ಅವರಿಗೆ ಬಟ್ಟೆಗಳನ್ನು ಕೊಡುತ್ತಾರೆ. ಅವರಿಗೆ ಏನಾದರೂ ಬೀಡಿ, ಸಿಗರೇಟು ಸೇದುವಂಥ ದುಶ್ಚಟಗಳಿದ್ದರೆ ಅದನ್ನು ಪೂರೈಸುತ್ತಾರೆ. ಮೂರು ಹೊತ್ತೂ ಊಟ ಹಾಕುತ್ತಾರೆ. ಇಷ್ಟೆಲ್ಲಾ ಮಾಡಿಕೊಂಡೂ, ಮದುವೆ ಮುಂಜಿ ಆದರೆ ವಿಶೇಷವಾಗಿ ಧನಸಹಾಯ ಮಾಡತಕ್ಕಂಥಾದ್ದು ಇದೆ. ಹೀಗೆ ಅನ್ಯೋನ್ಯತೆಯಿಂದ ಹೊಂದಿಕೊಂಡು ಹೋಗುತ್ತಾ ಇದ್ದರು. ಯಾವುದೋ ದುಡ್ಡು ಕೊಟ್ಟು, ಅದಕ್ಕೆ ಬಡ್ಡಿಗೋಸ್ಕರ ಮಗ, ಮೊಮ್ಮಗ, ಮೊಮ್ಮಕ್ಕಳನ್ನು ಗೇಯಿಸಿಕೊಳ್ಳತಕ್ಕ ಪದ್ಧತಿ ಏನು ಇತ್ತು, ಅದನ್ನು ಬಾಂಡೆಡ್ ಲೇಬರ್ ಎಂದು ನಾನು ತಿಳಿದುಕೊಂಡಿರುವುದು. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ವಿಮರ್ಶೆ ಮಾಡಬೇಕು. ಹಿಂದೆ ಪಟೇಲರು, ಶ್ಯಾನುಭೋಗರು ಕೆಲಸಮಾಡಿಸಿಕೊಳ್ಳುತ್ತಿದ್ದರು. ಈಗ ಅವರು ಇಲ್ಲ. ಮಾನ್ಯ ಶ್ರೀಕಂಠಯ್ಯನವರ ತಂದೆಯವರು 10 ಜನರ ಹತ್ತಿರ ಬಿಟ್ಟಿ ಕೆಲಸ ಮಾಡಿಸಿಕೊಂಡರು. ಅದರಲ್ಲಿ ಉತ್ಪ್ರೇಕ್ಷೆ ಏನಿಲ್ಲ. ಅದು ಬಾಂಡೆಡ್ ಲೇಬರ್ ಇತ್ತು. ಶ್ಯಾನುಭೋಗರು ಮತ್ತು ಪಟೇಲರ ಹತ್ತಿರ ಕುಲವಾಡಿಗಳು ಬಿಟ್ಟಿ ಗೇಯುತ್ತಿದ್ದರು. ಮಾನ್ಯ ಶ್ರೀಕಂಠಯ್ಯನವರ ತಂದೆಯವರು ಹೀಗೆ ಮಾಡುತ್ತಿದ್ದರು. ಅವರು ಲಕ್ಷಾಧೀಶ್ವರರಾಗಿದ್ದು — ಹೀಗೆಯೇ ಬೇರೆಯವರ ರಕ್ತ ಹೀರಿ. ಅವರು ಮೊದಲಿನಿಂದ ಹಾಗೆಯೇ ಇದ್ದಾರೆ, ನಾವು ಹೀಗೆಯೇ ಇದ್ದೇವೆ. ಅದಕ್ಕೆ ನಮಗೆ ವ್ಯಥೆ ಇಲ್ಲ.

ಆಮೇಲೆ ಡೆಟ್ ಆಕ್ಸಿಡೇಷನ್ ಸಂಬಂಧವಾಗಿ ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಪರಿಸ್ಥಿತಿ ಏನಾಗಿದೆಯೆಂದರೆ, ನೀವು ಹೋದಾಗ ಜನಗಳು ಹೇಳುವುದಿಲ್ಲ. ನಿಮ್ಮ ಮುಖ ನೇರಕ್ಕೇ ಹೇಳುತ್ತಾರೆ. ನೀವು ಮಾಡಿರತಕ್ಕ ಕಾನೂನು ಇದನ್ನೆಲ್ಲಾ ತಿಳಿದುಕೊಂಡು ಸರಿಯಾಗಿದೆಯೆಂದು ಹೇಳುತ್ತಾರೆ. ಒಂದು ದೃಷ್ಟಿಯಿಂದ ಅದು ಸರಿ. ನಾವು ಸೊಸೈಟಿ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳುತ್ತೀರಿ. ನೂರಕ್ಕೆ 50 ಆದರೂ ಸಹ ಅದರಲ್ಲಿ ಕುಲಗೆಟ್ಟಿವೆ. ಆ ಸೊಸೈಟಿಗಳ ಮೂಲಕ ಸಾಲ ಪಡೆಯಬೇಕಾದರೆ ಅವು ಜೀವಂತವಾಗಬೇಕು. ಸತ್ತಿರುವ ಸೊಸೈಟಿಗಳಿಗೆ ಜೀವ ತುಂಬುತ್ತೀರಾ. ರೂರಲ್ ಸೊಸೈಟಿ ಇಂಥಾದ್ದೆಲ್ಲಾ ಮಾಡಿ ಅದಕ್ಕೆ ತೀರ ಅವಶ್ಯಕವಾದಂಥ ಕೆಲಸಕಾರಗಳು ಅಂದರೆ ಮದುವೆ, ಮುಂಜಿ, ತಿಥಿ ಮಾಡುವುದಕ್ಕೆ ಹಣ ತೆಗೆದುಕೊಳ್ಳಿ ಎಂದು ಅಲ್ಲ, ಅಭಿವೃದ್ಧಿಗೆ ಸಂಬಂಧಪಟ್ಟಂಥ ವಿಚಾರಗಳಲ್ಲಿ ಕೂಡಲೆ ಅವರಿಗೆ ಸಾಲ ದೊರೆಯುವುದಾದರೆ ಒಂದು ವ್ಯವಸ್ಥೆ ಮಾಡಿ, ಕಾನೂನನ್ನು ಜಾರಿಗೆ ತಂದಿದ್ದರೆ ಬಹುಶಃ ತೊಂದರೆಯಾಗುತ್ತಾ ಇರಲಿಲ್ಲ. ಆದುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ, ಅಧಿಕಾರದಲ್ಲಿ ತಾವು ಇರುವ ಕಾಲದಲ್ಲಿ ತಮ್ಮನ್ನು ಮೆಚ್ಚಿಸಬೇಕಾದರೆ ಯಾವ ಯಾವ ಮಾತುಗಳನ್ನು ಹೇಳಿದರೆ ಸರಿಹೋಗುತ್ತದೆ ಎಂದು ಲೆಕ್ಕಾಚಾರ ಹಾಕಿಕೊಂಡೇ ಜನಗಳು ಮಾತನಾಡುತ್ತಾರೆ. ಅಂತಹ ಲೆಕ್ಕಾಚಾರದ ಮಾತುಗಳಿಗೆ ಮಾರುಹೋಗಬೇಡಿ. ವಸ್ತುಸ್ಥಿತಿಯನ್ನು ನೋಡಬೇಕಾದರೆ ನಿಮ್ಮ ಪಕ್ಷದ ನಾಲ್ಕೈದು ಜನ ಸದಸ್ಯರನ್ನು ಹಳ್ಳಿಗಳಿಗೆ ಕಳುಹಿಸಿ ಆದರೆ ಈ ವಿಚಾರದಲ್ಲಿ ಬಹಳ ತೊಂದರೆಯಾಗಿದೆ. ಹಳ್ಳಿಗಳಲ್ಲಿ ಏನಾದರೂ ಖಾಯಿಲೆಯಾದರೆ ಮನೆಯಲ್ಲಿ ಚಿಕಿತ್ಸೆ ಮಾಡಿಸಬೇಕಾದರೆ, ಅವರಿಗೆ ಹಣ ಇಲ್ಲದೇ ಹೋದರೆ, ಮನೆಯಲ್ಲಿರತಕ್ಕ ಪದಾರ್ಥಗಳನ್ನು ಮಾರಿ, ಹಣ ಪಡೆಯಬೇಕಾದ ದುರಸ್ತಿ ಇದೆ. ಮೊದಲು ಪರಸ್ಪರ ನಂಬಿಕೆ ಮೇಲೆ ಕೊಡುವುದು, ತೆಗೆದುಕೊಳ್ಳತಕ್ಕ ಸಂಬಂಧ ಇತ್ತೋ, ಅದು ಈಗ ಪೂರ್ಣವಾಗಿ ಮಾಯವಾಗಿದೆ.

ಪೊಲೀಸ್ ಇಲಾಖೆಯ ಬಗ್ಗೆ ಒಂದು ವಿಚಾರವನ್ನು ಹೇಳುತ್ತೇನೆ, ಪೋಲೀಸ್ ಇಲಾಖೆ ಎಷ್ಟರ ಮಟ್ಟಿಗೆ ಕುಲಗೆಟ್ಟಿದೆ ಎನ್ನುವುದಕ್ಕೆ ನಮ್ಮ ಮಾವ ಪೋಲೀಸ ಆಫೀಸರ್ ಆಗಿದ್ದರು. ನಮ್ಮ ಅತ್ತೆ ಏನು ಹೇಳುತ್ತಿದ್ದರು ಎಂದರೆ, ಯಾರಿಗೆ ಹೆಣ್ಣು ಕೊಟ್ಟರೂ ಪೋಲೀಸರಿಗೆ ಮಾತ್ರ ಹೆಣ್ಣು ಕೊಡಬೇಡಿ ಎಂದು ಹೇಳುತ್ತಿದ್ದರು. ನಮ್ಮ ಮಾವನವರಿಗೆ ಅವರು ಪ್ರಸಿದ್ಧ ಪತ್ತೆದಾರರು ಎಂದು ಗೋಲ್ಡ್ ಮೆಡಲ್ ಬಂದಿತ್ತು. ನನ್ನ ಒಂದು ವಿಚಾರ ಏನೆಂದರೆ, ಪೋಲೀಸರಿಗೂ ಪೋಲಿಗಳಿಗೂ ಏನೂ ವ್ಯತ್ಯಾಸ ಇಲ್ಲ. ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಪೋಲೀಸರಿಗೆ ಸರ್ಕಾರದಿಂದ ಸಂಬಳ ಕೊಡುತ್ತಾರೆ. ಪೋಲಿಗಳಿಗೆ ಸಂಬಳ ಇಲ್ಲ. ಈ ಪೋಲಿಗಳನ್ನು ಅಪರಾಧಿಗಳು ಎಂದು ಪೋಲಿಸರು ಕಂಡುಹಿಡಿಯುತ್ತಾರೆ. ಸಂಬಳ ತೆಗೆದುಕೊಳ್ಳತಕ್ಕವರು ಪೋಲೀಸರು. ಸಂಬಳ ತೆಗೆದುಕೊಳ್ಳದೇ ಇರತಕ್ಕವರು ಪೋಲಿಗಳು. ಪೋಲೀಸರಲ್ಲಿ ಒಂದು ಕೆಟ್ಟ ಪ್ರವೃತ್ತಿ ಬೆಳೆದು ಬಂದಿದೆ. ಇದು ಪೋಲೀಸ್ ಇಲಾಖೆಗೆ ಕಳಂಕ ತರುವಂಥಾದ್ದು. ಮೇಲ್ಮಟ್ಟದಲ್ಲಿ ಒಳ್ಳೆಯ ಆಫೀಸರ್ ಇರಬಹುದು. ಜನಗಳಿಗೆ ಸಂಬಂಧಪಟ್ಟ ಕೆಳಮಟ್ಟದ ಅಧಿಕಾರಿಗಳು ತಾನೇ ಮುಖ್ಯ. ಇವರಲ್ಲಿ ತೀವ್ರವಾದಂಥ ಬದಲಾವಣೆಯಾಗಬೇಕು. ಅವರ ಆಚಾರವಿಚಾರಗಳಲ್ಲಿ ಬದಲಾವಣೆಯಾಗಬೇಕು. ಅದಕ್ಕೆ ಅನುಕೂಲವಾದಂಥ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಮುಖ್ಯ ಮಂತ್ರಿಗಳಿಗೆ ತಿಳಿಸಿ, ಈ ಸಂದರ್ಭದಲ್ಲಿ ಇಷ್ಟು ಹೇಳಲು ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† SRI NAZEER AHMED SIDDIQUI (Raichur).—Madam Speaker, while supporting this demand I would like to speak a few words. After more than a quarter century of independence we find the increase in the number of police men and the amount that is being spent has also increased. What is the reason behind this? Is it because the Society has a large number of criminals or is it because there is much of deterioration in our Society? These are certain instances for which we have to find answers. Apparently this steady increase in the expenditure for a large number of Police Force every

year shows that there was a necessity for expansion of Police Force. But what is the result? After increasing the Police Force there must be some perceptible change and there must be fall in the crimes. On the contrary, as we keep on increasing the police force, the crimes also keep on increasing. It has become a cycle. We appoint our police people and they instead of curbing the number of crimes or suppressing the crimes, they are helping to increase the crimes. So, it becomes a cycle—more crimes and more expansion of police force. It looks as if the police is capable of procreative. I do not think our Society is so bad that it justifies more number of police people to be appointed. I have nothing to say about the amount spent. These Police Officers, they are a class by themselves. They turn themselves into a class. There are 1001 Sub-inspectors and 216 Inspectors. These people while solving so many problems they convert themselves into another problem. They have become a menace. Perhaps this may be unpalatable. Madam Speaker, you might have read an advertisement which is very apt to be quoted here. It says' that God has created men but we make them gentlemen'. This is the advertisement of Tailors and out-fitters. This Police uniform makes them Policemen. They are anti-social while performing even their legitimate duties. They have not been treating the commonman with respect. Hundreds and hundreds of people and the Hon'ble Members on the floor of this Assembly have criticised the behaviour of these people. Perhaps every member of this Assembly has criticised the police people. It looks as though it has become the exercise of the Hon'ble Members. But what is the result? Nothing. It has become the futile criticism of the Hon'ble Members. The opposition Members keep on talking and we have to sometimes defend and sometimes accept their criticisms. Is there any improvement? No. This Assembly, the 5th Session, has a very short span of life and we are at the end. I do not find any marked improvement in eradicating malpractices or other evils in the Society. While going through this Police Department Report, page-10, I find very interesting entry. Review and functioning of the Department is the heading. Under this the law and order, communal situation, labour activities and the Crime come. It is very interesting to note that the Police people have failed to understand the labour movement. There was probably a lull in the labour activities. They look to the labour problem with suspecion. They have not understood the nature and struggle of the labour class They have not tried to understand the collective bargaining and they are totally unaware of it. They look on these strikes as one of the problems of law and order. If there is no strike, they attribute it to their credit and pose themselves that they themselves are responsible for peace. On page 17 I find the training

programme. During the year various training courses for various officers are opened. I would rather suggest we should have a separate corps and the Police Officers should properly be trained. They should know what is the history of the Trade Union Movement and they should know what is collective bargaining and they should know how the capital class is exploiting the labour.

SRI M. S. KRISHNAN.—You are expecting too much from the Police.

SRI NAZEER AHAMED SIDDAQUI.—Unless and until these officers are properly trained they will never be able to look at these problems with impartial mind, let alone with sympathy. They think the labour people are servants working in factories. They are under the impression they should not misbehave and they should be obedient to the owners.

They are totally ignorant of the struggle of the working class. I wish some more courses are added in this training programme. There must be some method of teaching them how to be polite and courteous to the people. In my own constituency I have faced so many problems. In Raichur, after emergency I found that not a single R S S. man was arrested. A very important R.S.S. man who working in Raichur was tipped off and fled Raichur and subsequently, after a long time he was arrested, when I brought it to the notice of the I.G.P. Naturally, I had to accuse the local police, especially some of the Sub Inspectors, who had tipped him off.

3-00 P.M.

As regards gambling dens, the Police have very strong vested interests in the continuance of the crime, because, they thriveon these anti-social crimes. The larger the number of gambling dens and brothel houses, the larger will be their share of the lot. If any one tries to interfere, it will be resented by the anti-social elements and it will be rejected by the Police who are benifited by them. From Dy. S.P. to the Constable-of course, the S. P. is a very nice man-every body gets his share. We have to watch this helplessly When I tried to put in more heat upon these people, they retaliated. One day, in October, two people with masks on their faces, came to my house at about one O' Clock. I was supposed to be in Raichur but I was not there. A small servant boy was sleeping in the outside room They asked him to open the room. I was not there and so, he did not. They threatened that they will break open the door. They inserted the fingers in the door and tried to open it. When my brother got up, these people ran away. The next day I informed the Police. Though the rickshaw-wallah was identified no arrest was made for four days.

Then, personally I had to make a trunk call and afterwards the ricks-hawwalla was arrested.The other two colleagues were never discovered Even the I.G.P. knows this case. They caught hold of a bogus man-a poor man-and made him agree. They said. We will arrest you and we will see nothing happens to you. Then the case went on. Only recently, this case has been either dismissed or a small penalty has been given. And that rickshawalla makes a highly political statement that Mr. Siddique is a tyrant and he ill-treats people He has been briefed by these Police-wallahs.

Even before this, one gambling den owner came to my house in search of his brother thinking that his brother was being protected by us. He came fully drunk with a dagger in his hand. He wanted our people to send that boy out. Actually, that boy had not taken shelter in my house. So our people made him sit in the house. I was not there. After 2-3 hours my brother went to the Police Station and lodged a complaint that a man with a dagger in hand had come to my house fully drunk, The Police people said : 'You come after one hour'. They had already taken a complaint from the person who dad come to my house saying that fellow had come to my house to collect some dues that my brother had borrowed. Now, in the records of the Police we are the guilty persons, not the gambling ben owner. This is the condition of the Police. Even M.L.As. feel helpless. They have grown into such monstrous proportions They have become something like Cyclop. Whatever we talk or criticise, is not going to make it up.

When you talk of C.I.D.'s working and so many crimes being detected, there are hundreds of crimes in which Police were involved. For example, last year, 27 cart loads of foodgrains and three lorries were caught at the border. It was being smuggled across the border into Sholapur District. That caravan was being escorted by three P.Cs. It was a regular smuggling gang and the P.Cs. used to escort them These PCs. I am told were suspended. In so many murder cases, we have seen the Police-sometimes, Police Inspectors-have actually participated in the blue-prints of murders. They are shown how to plan murder cases. This is something most abominable.

I have got one or two small suggestions to make. You must have a separate Police force-especially Police Officers-to handle these trade union movements. You should not send all types of Police Officers to those factories or where working class people live. A separately trained Police cadre must be there. There are very few lady Sub-Inspectors in our State Wherever we have seen, even in Revenue Department, women have proved to be not only equally

successful and efficient but in certain cases, they are much more efficient than men. We don't have women I.P.S. Officers. Our State requires women I.P.S. Officers.

About I.G.Ps. in Centre, they are having people from all the States. There are 6 people from Kerala and 8 from Andhra Pradesh and so on. But, our State is very inadepuately reqresenced in Centre. So, I request our Hon'ble Chief Minister to take necessary action.

With these words, I thank the Chair for giving me an opportunity to speak a few words and conclude.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷಣಿಯವರೇ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಯನ್ನು ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳಲು ಅಪೇಕ್ಷೆಪಡುತ್ತೇನೆ. ಮೊದಲನೆಯದಾಗಿ ಆಡಳಿತದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತಾ, ನಾನು ಅನೇಕ ಬಾರಿ ಈ ಮನೆಯಲ್ಲಿ ಆಡಳಿತದ ಬಗ್ಗೆ ಅನೇಕ ಟೀಕೆಗಳನ್ನು ಮಾಡಿದ್ದೇವೆ ಈ ಟೀಕೆಗಳನ್ನು ಮಾಡುವಂಥ ಕಾಲದಲ್ಲಿ, ಟೀಕೆಗಳು ಯಾವಾಗಲೂ ಸಹ ಒಂದೇ ದಾಟಿಯಲ್ಲಿ ಹೋಗುತ್ತಿರುತ್ತದೆ. ಮುಖ್ಯವಾಗಿ ಆಡಳಿತದಲ್ಲಿ ಬಿಗಿ ಇಲ್ಲ, ಆಡಳಿತ ಸಡಿಲವಾಗಿದೆ, ಆಡಳಿತದಲ್ಲಿ ದಕ್ಷತೆ ಇಲ್ಲ ; ಆಡಳಿತ ಲಂಚಗುಳಿತನ ಸ್ವಜನಪಕ್ಷಪಾತ ಮತ್ತು ಇತರ ಹವ್ಯಾಸಗಳಿಂದ ಕೂಡಿದೆ, ಆದುದರಿಂದ ಆಡಳಿತವನ್ನು ಪೂರ್ತಿಯಾಗಿ ಬಿಗಿ ಮಾಡಬೇಕೆಂದು ಒತ್ತಾಯಪಡಿಸಿ ಮೇಲಿಂದ ಮೇಲೆ ಹೇಳುತ್ತಲೇ ಬಂದಿದ್ದೇವೆ. ಇವತ್ತಿಗೂ ಕೂಡ ಇದನ್ನೇ ಪುನರುಚ್ಚರಿಸಬೇಕಾಗಿದೆ. ಈಗ ಶ್ರೀಮತಿ ಇಂದಿರಾಗಾಂಧಿಯವರು 20 ಅಂಶದ ಕಾರ್ಯಕ್ರಮವನ್ನು ದೇಶದ ಮುಂದೆ ಇಟ್ಟಿದಾರೆ. ಈ 20 ಅಂಶದ ಕಾರ್ಯಕ್ರಮ ಬಂದನಂತರ ಮತ್ತು ತುರ್ತುಪರಿಸ್ಥಿತಿ ಘೋಷಣೆಯಾದ ನಂತರ ಆಡಳಿತ ಸ್ವಲ್ಪ ಮಟ್ಟಿಗೆ ಬಿಗಿಯಾಗಿದೆ ಎಂದು ನಾವು ತಿಳಿದುಕೊಳ್ಳಬಹುದು. ಅದೇನೆಂದರೆ ತುರ್ತುಪರಿಸ್ಥಿತಿ ಬಂದನಂತರ ಸರ್ಕಾರಿ ನೌಕರರು ತಡವಾಗಿ ಬರುತ್ತಿದುದು ಹೋಗಿ ವೇಳೆಗೆ ಸರಿಯಾಗಿ ಕಚೇರಿಗೆ ಬರುತ್ತಿದ್ದಾರೆ. ಅದು ಒಂದಾಗಿದೆ ನಿಜ. ಮತ್ತೇ ಅದೇ ರೀತಿಯಲ್ಲಿ ಕ್ಯಾಂಟಿನ್‌ಗೆ ಹೋಗಿ ಕಾಫಿಯನ್ನು ಕುಡಿಯುತ್ತಿದ್ದರು. ಅದು ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಇಷ್ಟು ಮಾತ್ರದಿಂದಲೇ ಆಡಳಿತ ಬಿಗಿಯಾಗಿದೆ ಎಂದು ತೀರ್ಮಾನಕ್ಕೆ ಬಂದರೆ ಅದು ತಪ್ಪಾಗುತ್ತದೆಂದು ನನ್ನ ಅಭಿಪ್ರಾಯ, ಏತಕ್ಕೆಂದರೆ ಒಬ್ಬ ಸಾಮಾನ್ಯ ಪ್ರಜೆಯ ಅರ್ಜಿ ಅಹವಾಲು ಏನು ಇದೆ ಅದು ಇಷ್ಟೇ ದಿವಸಗಳಲ್ಲಿ ಅಷ್ಟರು ತೀರ್ಮಾನ ಆಗುತ್ತದೆ ಎಂದು ಹೇಳುವುದು ಮುಖ್ಯವಾದ ಅಂಶವಾಗಿರುತ್ತದೆ. ಗತಿಸಿದ ಶ್ರೀ ಎ. ಜಿ. ರಾಮಚಂದ್ರರಾಯರು ಮಂತ್ರಿಗಳಾಗಿದ್ದಾಗ ಒಂದು ವರದಿಯನ್ನು ಸಲ್ಲಿಸಿದ್ದರು "ರಿಸೋರ್ಸಸ್ ಎಕನಾಮಿಕ್" ಕಮಿಟಿ ರಿಪೋರ್ಟ್ ಎಂದು ಶ್ರೀ ಘೋರ್‌ವಾಲ ಕಮೀಟಿಯವರೂ ಸಲ್ಲಿಸಿದ್ದರು. ಇವರಿಬ್ಬರೂ ಹೇಳಿರುವುದು ಏನೆಂದರೆ ಒಂದು ಕೇಸ್ ಇತ್ಯರ್ಥವಾಗ ಬೇಕಾದರೆ ಕನಿಷ್ಟ ಪಕ್ಷ 365 ದಿವಸಗಳಾದರೂ ಬೇಕಾಗುತ್ತದೆ ಎಂದು. ಈಗ ಏನಾಗಿರುತ್ತದೆ ಎಂದು ನೋಡಿದರೆ ಸಾಮಾನ್ಯ ಜನರ ವಿಷಯ ತೀರ್ಮಾನವಾಗಬೇಕಾದರೆ ಅದು ಹಿಂದಿನ ದಾಟಿಯನ್ನೆ ಅನುಸರಿಸಿಕೊಂಡು ಹೋಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಉದಾಹರಣೆ ಹೇಳುವುದಾದರೆ ಒಬ್ಬ ಕಾರ್ಮಿಕ ನೌಕರಿಯಲ್ಲಿದ್ದುಕೊಂಡೇ ಬಿ.ಎ. ಪಾಸ್ ಮಾಡಿರುತ್ತಾರೆ. ಅವನ ಹೆಸರು ಎ. ವಿ ನಾಗೇಶ್ ಎಂದು. ಅವನಿಗೆ ಸರ್ಟಿಫಿಕೇಟ್ ಕೊಡುವಾಗ ಬಿ. ಎಸ್. ನಾಗೇಶ್ ಎಂದು ತಪ್ಪು ಸರ್ಟಿಫಿಕೇಟ್ ಕೊಟ್ಟಿರುತ್ತಾರೆ. ಇದನ್ನು ಬದಲಾವಣೆ ಮಾಡಿಕೊಡಬೇಕೆಂದು ಹೇಳಿ ಅವರು ಮನವಿಯನ್ನು ಸಲ್ಲಿಸಿ ಒಂದು ವರ್ಷವಾದರೂ ಕೂಡ ಇದುವರೆಗೂ ತಿದ್ದಿಲ್ಲ. ಇದು ಒಂದು ಇಲಾಖೆಯ ಆಡಳಿತದ ವೈಖರಿಯಾಗಿರುತ್ತದೆ. ಆತನ ಕೆಲಸಮಾಡಿಕೊಂಡಿರುವುದರಿಂದ ಏನೋ ಪರವಾಗಿಲ್ಲ. ಯಾರೋ ಹೊಸದಾಗಿ ಪರೀಕ್ಷೆಯಲ್ಲಿ ಪಾಸ್ ಮಾಡಿಕೊಂಡ ವಿದ್ಯಾರ್ಥಿಗೆ ಈ ರೀತಿಯಾದ ಒಂದು ತೊಂದರೆಯಾಗಿದ್ದರೆ ಅವನು ಉದ್ಯೋಗವನ್ನು ಬಯಸುವ ಬಗೆಯಾದರೂ ಹೇಗೆ ಎಂದು ಕೇಳಬೇಕಾಗಿದೆ. ಈರೀತಿ ಕಾಲ ವಿಳಂಬವಾಗುವುದು ನ್ಯಾಯವೇ ? ಇಂಥಾ 108 ನಿದರ್ಶನಗಳನ್ನು ಹೇಳಬಹುದು. ಇವತ್ತಿನ ದಿವಸ ಬೆಳಿಗ್ಗೆ ಕಂಪಲ್ಸರಿ ರಿಟೈರ್‌ಮೆಂಟ್ ಬಗ್ಗೆ ಪ್ರಸ್ತಾಪ ಮಾಡಿದರು. 285ನೇ ವಿಧಿಯ ಪ್ರಕಾರವಾಗಿ ಅನೇಕ

ಜನ ನೌಕರರನ್ನು ರಿಟೈರ್ ಮಾಡಿದ್ದೇವೆಂದು ಹೇಳಿರುತ್ತೀರಿ. ಸುಮಾರು 580 ಜನ ಎಂದು ಸ್ಪಷ್ಟವಾಗಿ ಹೇಳಿದ್ದೀರಿ. ಇದರಲ್ಲಿ ಐ. ಎ. ಎಸ್. ಮತ್ತು ಐ. ಪಿ. ಎಸ್ ಮೇಲೆ ಅಧಿಕಾರಿಗಳು ಎಷ್ಟು ಜನರಿದ್ದಾರೆಂದು ಕೇಳಿದ್ದಕ್ಕೆ ಕೆಲವು ಜನರಿದ್ದಾರೆಂದು ಹೇಳಿದ್ದೀರಿ ? ಅವರು ಯಾರು ಎನ್ನುವುದು ಗೊತ್ತಾಗಲಿಲ್ಲ. ನಾನಾದರೂ ತಮ್ಮ ಮುಂದೆ ಸ್ಪಷ್ಟವಾಗಿ ಹೇಳಬೇಕಾದರೆ ಆಡಳಿತದಲ್ಲಿ ಜನಗಳಿಗೆ ನಂಬಿಕೆ ಮೂಡಬೇಕಾದರೆ ಮಂತ್ರಿಗಳು. ಮುಖ್ಯಮಂತ್ರಿಗಳು ಯಾರು ಆಡಳಿತ ಸೂತ್ರವನ್ನು ಇಟ್ಟುಕೊಂಡಿದ್ದಾರೆ, ಅಂಥವರು ಆಡಳಿತದಲ್ಲಿ ನಂಬಿಕೆ ಬರುವ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ. ಒಂದು ವಿಷಯದಲ್ಲಿ ಅವರು ತಪ್ಪು ಮಾಡಿದ್ದರೆಂದು ನಾನಾದರೂ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ 20 ಅಂಶದ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೋಸ್ಕರವಾಗಿ ರಾಜ್ಯಮಟ್ಟದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೀರಿ. ಆ ರಾಜ್ಯಮಟ್ಟದ ಕಮಿಟಿಯಲ್ಲಿ ನನ್ನನ್ನು ಒಬ್ಬ ಸದಸ್ಯನಾಗಿ ನೇಮಿಸಿರುವುದಕ್ಕೆ ನಾನು ಆಭಾರಿಯಾಗಿದ್ದೇನೆ. ರಾಜ್ಯಮಟ್ಟದ ಸಮಿತಿಯ ಕಾರ್ಯದರ್ಶಿಯವರ ಮೇಲೆ ಒಂದು ಗುರುತರವಾದ ಆರೋಪಣೆ ಬಂದಿರುತ್ತದೆ. ಅವರ ಮನೆಯನ್ನು ರೈಡ್ ಮಾಡಿದರು. 26 ಲಕ್ಷ ರೂಪಾಯಿ ಸಿಕ್ಕಿತು, ಮಕ್ಕಳ ಹೆಸರಿನಲ್ಲಿ ಆಸ್ತಿ ಮಾಡಿಕೊಂಡಿರುತ್ತಾರೆ, ಹೆಂಡತಿಯ ಹೆಸರಿನಲ್ಲಿ ಹಣ ಇಟ್ಟಿದ್ದಾರೆಂದೆಲ್ಲ ''ಪ್ರಜಾವಾಣಿ'' ಪತ್ರಿಕೆಯಲ್ಲಿ ವಿವರಗಳೆಲ್ಲ ಬಂದಿರುತ್ತದೆ. ಈರೀತಿ ಏನಕ್ಕೆ ಬಂದಿದೆ ಎಂದು ಕೇಳಿದರೆ ಪತ್ರಿಕೆಗಳಲ್ಲಿ ಬಂದಿರುವುದನ್ನೆಲ್ಲ ನಂಬಿಕೆ ಇಡಕೂಡದೆಂದು ಮಾನ್ಯ ಮಂತ್ರಿಗಳು ಒಂದೇ ಮಾತಿನಲ್ಲಿ ಮಾತನಾಡಿ ಹೇಳಿಬಿಟ್ಟರು. ಪತ್ರಿಕೆಗಳಲ್ಲಿ ಬಂದಿರುವುದು ತಪ್ಪು, ಅದು ಸರಿಯಲ್ಲವೆಂದು.

ಶ್ರೀ ಡಿ. ದೇವರಾಜ ಅರಸ್.—ಹಾಗೆ ನಾನು ಹೇಳಿಯೇ ಇಲ್ಲ. ಹೀಗೆ ನೀವು ಹೇಳುವುದರಿಂದ ತಪ್ಪು ಅರ್ಥ ಬರುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಂಥ ಒಂದು ಪ್ರೈಮ ಫೇಸಿ ಕೇಸ್ ಒಬ್ಬ ಉನ್ನತ ಅಧಿಕಾರಿಯ ಮೇಲೆ ಇರಬೇಕಾದರೆ ಅವರ ಮೇಲೆ ಏತಕ್ಕೆ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಕೇಳಬೇಕಾಗುತ್ತದೆ. ಕೊನೆಪಕ್ಷ ಅವರನ್ನು ಸಸ್ಪೆಂಡ್ ಆದರೂ ಮಾಡಬೇಕಿತ್ತು. ಈಗ ಹೇಳುತ್ತೀರಿ ಸಿ. ಬಿ. ಐ. ಗೆ ಅದನ್ನು ಒಪ್ಪಿಸುವುದಕ್ಕೆ ಯೋಚನೆ ಮಾಡುತ್ತಿದ್ದೇವೆಂದು. ಬಹಳ ಸಂತೋಷ. 20 ಅಂಶದ ಕಾರ್ಯಕ್ರಮ ಜಾರಿಗೆ ತರಬೇಕಾದರೆ ಅಧಿಕಾರಿಗಳಮೇಲೆ ಮಸುಕು ಇದ್ದರೆ ಕಂಡಿತವಾಗಿಯೂ ಯಾರೂ ನಂಬಿಕೆ ಜನರಿಗೆ ನಂಬಿಕೆ ಬರಬೇಕಾದರೆ, ಬರುವ ಹಾಗೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಂಬಿಕೆ ಬರುವುದು ಕಷ್ಟ. ಆದ್ದರಿಂದ ಈ ಸಮಿತಿಯ ಕಾರ್ಯದರ್ಶಿಸ್ಥಾನದಿಂದಾದರೂ ಈ ಅಧಿಕಾರಿಯನ್ನು ಕಿತ್ತುಹಾಕಬೇಕು ಅದನ್ನಾದರೂ ಮಾಡಬೇಕೆಂದು ಒತ್ತಾಯಪಡಿಸುತ್ತೇನೆ. ತಪ್ಪುಮಾಡಿದ್ದಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳದಿದ್ದರೆ ಏನು 20 ಅಂಶಗಳ ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತೀರಿ ಅದನ್ನು ಅಡ್ಮಿನಿಸ್ಟ್ರೇಟಿವ್‌ನಲ್ಲಿ ಜಾರಿಗೆ ತರುತ್ತಿಲ್ಲವೆನ್ನುವ ಅಪಾದನೆಗೆ ಒಳಗಾಗಬೇಕಾಗುತ್ತದೆಂದು ಹೇಳಬೇಕಾಗುತ್ತದೆ.

ಇನ್ನೊಂದು ಮುಖ್ಯವಾದ ವಿಷಯ ; ಮಂತ್ರಿಗಳ ವಿಷಯದಲ್ಲಿ ಒಂದು ಕೋಡ್ ಅಫ್ ಕಾಂಡಕ್ಟ್ ಇಟ್ಟುಕೊಂಡಿರಬೇಕೆಂದು ಹೇಳುತ್ತಲೇ ಇದ್ದೇವೆ. ಯಾರು ಎಲ್ಲಿ ಹೋಗುತ್ತಾರ, ಅದಲ್ಲ ಪ್ರಶ್ನೆ. ಅದಲ್ಲೆ ಪ್ರವೇಟ್ ಅಫೇರ್ಸ್ ಎಂದು ಹೇಳುತ್ತಾರೆ. ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಮಂತ್ರಿಗಳಾದಮೇಲೆ ಅವರು ಮೆಚ್ಚುಗೆಯನ್ನು ಗಳಿಸಬೇಕಾದರೆ ಖಂಡಿತವಾಗಿಯೂ ಅವರ ಕೈ, ಬಾಯಿ ಎಲ್ಲವೂ ಶುದ್ಧವಾಗಿರಬೇಕು ಎಂಬುದೇ ನನ್ನ ಅಭಿಪ್ರಾಯವಾಗಿರುತ್ತದೆ. ಅದು ಒಂದು ಕಡೆ ಇರಲಿ. ಅವರಲ್ಲಿ ಒಂದು ಪ್ರಶ್ನೆ ಏನೆಂದರೆ ಅನೇಕ ಮಂತ್ರಿಗಳು ನಮ್ಮನ್ನೂ ಈ ಮನೆಯ ಸದಸ್ಯರನ್ನೂ ಬಹಳ ತುಚ್ಛವಾಗಿ ನೋಡುತ್ತಿದ್ದಾರೆಂದು ಒಂದು ಗುರುತರವಾದ ಅಪಾದನೆಯನ್ನು ಮಾಡುತ್ತೇನೆ. ಅನೇಕ ಮಂತ್ರಿಗಳು ಬಜೆಟ್ ಸೆಷನ್ ಇದ್ದರೂ ಸಹ ಸಭೆಗೆ ಬರುವುದಿಲ್ಲ. ಬಜೆಟ್ ಸೆಷನ್ ಇರುವಾಗ ಅಧ್ಯಕ್ಷರು ಎಷ್ಟೋಸಾರಿ ಹೇಳಿದ್ದಾರೆ ಊರಿನಲ್ಲಿಯೇ ಇರಬೇಕು ಎಂದು. ಆದರೆ ಅವರು ಊರಿನಲ್ಲೇ ಇರುವುದಿಲ್ಲ ಅವರು ಹೊರಗಡೆ ಟೂರು ಹಾಕಿಕೊಳ್ಳುತ್ತಾರೆ. ಅವರು ಏತಕ್ಕೆ ಟೂರ್ ಹಾಕಿಕೊಳ್ಳಬೇಕು ? ಮಾನ್ಯ ಮುಖ್ಯಮಂತ್ರಿಯವರು ಅಂತಹ ಮಂತ್ರಿಗಳ ಕಿವಿ ಹಿಂಡಿ ಮೂಗು ಹಿಡಿದು ಇವರನ್ನು ಏತಕ್ಕೆ ಸರಿಮಾಡಬಾರದು ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕಪಾಲಕ್ಕೆ ಹೊಡೆಯಬೇಕಾಗಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಪೈಲ್ವಾನ್ ಇದ್ದಾರೆ, ಅವರಿಗೆ ಶಕ್ತಿ ಇದೆ. ಆದರೆ ಇದನ್ನು ಮಾಡಬೇಕಾಗಿಲ್ಲ. ಅದನ್ನಾದರೂ ಮಾಡಬೇಕು. ಮೊನ್ನೆ ದಿವಸ ಈ ಮನೆಯಲ್ಲಿ ಒಂದು ಕೋಲಾಹಲ ನಡೆಯಿತು. ಮಾನ್ಯ ಗುಂಡೂರಾಯರು ಅವರ ಡಿಮ್ಯಾಂಡನ್ನು ಮೂವ್ ಮಾಡುವುದಕ್ಕೆ ಬರಲಿಲ್ಲ. ಡಿಮ್ಯಾಂಡನ್ನು ಮೂವ್ ಮಾಡುವುದಕ್ಕೆ ಅವರೇ ಇಲ್ಲದೆ ಹೋದರೆ ಅವರ ಪರವಾಗಿ ಬೇರೆಯವರು ಡಿಮ್ಯಾಂಡನ್ನು ಮೂವ್ ಮಾಡುವುದಕ್ಕೆ ಸ್ಪೆಷಲ್ ಪರ್ಮಿಷನ್ ಕೊಡಬೇಕೆನ್ನುವವರೆಗೆ ಈ ಶಾಸನಸಭೆಯನ್ನು ತೆಗೆದುಕೊಂಡು ಬಂದಿದ್ದಾರೆ. ನನಗೆ ಅನ್ನಿಸುತ್ತದೆ ಇದು ಬಹಳ ಅವಮಾನಕರವಾದ ಪ್ರಸಂಗ. ನಾನು ವೈಯುಕ್ತಿಕವಾಗಿ ಟೀಕೆ ಮಾಡುವ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಮಾನ್ಯ ಗುಂಡೂರಾಯರು ನಮ್ಮ ಸ್ನೇಹಿತರು, ಎನರ್ಜಿ ಮತ್ತು ಡೈನಮಿಸಂನಲ್ಲಿ ನೋಡಿದರೆ ಡೈನಾಮಿಕ್ ಪರ್ಸನಾಲಿಟಿ ಅವರಿಗೆ ಇದೆ. ಆದರೆ ಈ ಒಂದು ವಿಷಯದಲ್ಲಿ ಯಾವ ಯಾವ ಮಂತ್ರಿಗಳು ತಿದ್ದಿಕೊಳ್ಳುವುದಿಲ್ಲವೋ ಅವರು ತಿದ್ದಿಕೊಳ್ಳುವಂತೆ ಬಂದೋಬಸ್ತು ಮಾಡಬೇಕು. ಮಂತ್ರಿಗಳಾದಮೇಲೆ ಎಷ್ಟು ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ನಾವು ವಿವರಗಳನ್ನು ಕೇಳಿದ್ದೇವೆಂದು ಹೇಳಿದ್ದೀರಿ; ಅವರು ಏನು ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ಅವರು ಏನು ಹೇಳಿದ್ದಾರೆಯೋ ಅದೂ ಗೊತ್ತಿಲ್ಲ. ಅದೂ ಕೂಡ ನಮಗೆ ಬಹಳ ಮುಖ್ಯವಾದುದು. ಇವರು ಜನಗಳ ಮಧ್ಯೆ ಯಾವ ರೀತಿ ವರ್ತಿಸುತ್ತಾರೆ, ಇಲ್ಲದೇ ಇವರು ಯಾವ ರೀತಿ ದುಡ್ಡು ಮಾಡಿಕೊಂಡಿದ್ದಾರೆ, ಮಹಡಿ ಮನೆ ಕಟ್ಟಿಸಿಕೊಂಡಿದ್ದಾರೆ ಎಂದು ವಿನಾಕಾರಣ ಅಪಾದನೆ ಇರುವುದನ್ನು ತಪ್ಪಿಸಬೇಕು. ಅನ್ಯಾಯವಾಗಿದ್ದರೆ ಶಿಕ್ಷೆ ತೆಗೆದುಕೊಳ್ಳಬೇಕು. ಈ ವಿಷಯದಲ್ಲಿ ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಷಯ ಏನೆಂದರೆ ತಾವು ಒಂದು ಕಡೆ ಮಾತನಾಡುತ್ತಾ ಏನು ಹೇಳಿದ್ದೀರಿ ಎಂದರೆ ಅಡ್ಮಿನಿಸ್ಟ್ರೇಷನ್ ವಿಷಯವಾಗಿ "tyranny of seniority must be done away with'' ಎಂದು ಪತ್ರಿಕೆಯಲ್ಲಿ ತಾವು ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ತಾವು ಏತಕ್ಕೆ ಹೇಳಿದ್ದೀರಿ ಎಂದರೆ 28ನೇ ತಾರೀಖು ಡೆಕ್ಕನ್‌ಹೆರಾಲ್ಡ್‌ನಲ್ಲಿ ಕೌನ್ಸಿಲ್ ಆಫ್ ಮಿನಿಸ್ಟರ್ ಸೇರಿ ತಾವು ಮತ್ತು ಫೋರ್ಪಡೆಯವರೂ ಮಾತನಾಡಿದ್ದೀರಿ. ಅದರಲ್ಲಿ ಏನು ಹೇಳಿದ್ದೀರಿ ಎಂದರೆ ಸೀನಿಯಾರಿಟಿ ಆಧಾರದಮೇಲೆ ಅವರಿಗೆ ಪ್ರಮೋಷನ್ ಕೊಡುವುದು ಸರಿಯಾದುದಲ್ಲ, ಬೇರೆ ಆಧಾರ ಇರಬೇಕು ಎಂದು ಹೇಳಿದ್ದೀರಿ. ನನಗೆ ಅನ್ನಿಸುತ್ತದೆ ಇದು ನೋಡುವುದಕ್ಕೆ ಚೆನ್ನಾಗಿ ಕಂಡರೂ ಸಹ ಕಾರ್ಯರೂಪಕ್ಕೆ ತರುವಾಗ it bristles with terrific difficulties. ಅದರಲ್ಲೂ ಈ ವಿಷಯದಲ್ಲಿ ಸ್ಕಿಲ್ಡ್, ಅನ್‌ಸ್ಕಿಲ್ಡ್, ಹೈಲಿಸ್ಕಿಲ್ಡ್ ವರ್ಕರ್ಸ್ ಎಂದು ಸುಲಭವಾಗಿ ಮಾಡಿಬಿಡುತ್ತಾರೆ. ಇಲ್ಲಿ ಮಾಡುವುದು ಕಷ್ಟ. ಇವತ್ತು ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಮೇಲೆ ಶಿಫಾರ್ಸು ಮಾಡುವುದಕ್ಕೆ ಹೊರಟಿದ್ದೀರಿ. It is never objective. ತಮ್ಮಗೆ ಗೊತ್ತಿದೆ it is mostly subjective ಆದ್ದರಿಂದ ನಾವು ಈ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಬೇಡ ಎಂದು ಹೇಳುತ್ತಾ ಇರುವುದು. ಎನ್. ಜಿ. ಒ. ಅಸೋಷಿಯೇಷನ್‌ನವರು ಸಹ ಈ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಮೇಲೆ ಶಿಫಾರ್ಸು ಮಾಡಬೇಡಿ ಎಂದು ಹೇಳುತ್ತಾರೆ. ಇದು ಮೋಸ್ಟಲಿ ಸಬ್ಜೆಕ್ಟಿವ್ ಆಗಿದೆ, ಸಬ್ಜೆಕ್ಟಿವ್ ವಿಷಯ ಇಟ್ಟುಕೊಂಡು ಟೈರಾನಿ ಆಫ್ ಸೀನಿಯಾರಿಟಿ ಎಂದು ಹೇಳಿದರೆ ತೊಂದರೆ ಆದೀತು.

SRI D DEVARAJ URS.—It is with reference to certain Department.

ಶ್ರೀ. ಎಮ್. ಎಸ್. ಕೃಷ್ಣನ್.—ಇಲ್ಲಿ ಹೇಳಿರುವುದು ಏನೆಂದರೆ it is in connection with 11 main points which the Prime Minister has brought to the notice of the State Government, on the basis of which you must streamline the administration ಎಂದು ಹೇಳಿದ್ದಾರೆ. I don't want to read this. 11 ಮೈನ್ ಪಾಯಿಂಟ್ ಬಗ್ಗೆ ಡಿಸ್‌ಕಸ್ ಮಾಡುತ್ತಾ, one is tyranny of seniority, another is confidential report arising out of it ಎಂದು ಹೇಳಿದ್ದಾರೆ. ನನಗನ್ನಿಸುತ್ತದೆ it is not so easy. ತಾವು ಇಷ್ಟು ಸುಲಭವಾಗಿ ಮಾಡಿಬಿಟ್ಟು ಹಾಗೆಂದೆ ಹೋದರೆ

ತೊಂದರೆಗೆ ಈಡಾಗಬಹುದು ಇನ್ನೂ ಹೆಚ್ಚು ಲಿಟಿಗೇಷನ್ ಆಗಬಹುದು, ಹೆಚ್ಚು ಕಷ್ಟಕ್ಕೆ ಈಡಾಗಬಹುದು ಎಂದು ನನ್ನ ಅಭಿಪ್ರಾಯ. ಇದನ್ನು ಪರಿಶೀಲನೆ ಮಾಡಿಸಬೇಕು. ಪರ್‌ಫಾರ್‌ಮೆನ್ಸ್ ಪರಿಶೀಲಿಸ ಕೂಡದು ಎಂದು ನಾನು ಹೇಳುವುದಿಲ್ಲ. ಇನ್ನೊಂದು ಕಡೆ 10-15 ಪರ್ಸೆಂಟ್ ಆದರೂ ಕೂಡ ಜಾಸ್ತಿ ಜನಕ್ಕೆ ಯಾರು ಚೆನ್ನಾಗಿ ಕೆಲಸ ಮಾಡುತ್ತಾರೆ ಅವರಿಗೆ ಉತ್ತೇಜನ ಕೊಡುವುದಕ್ಕೆ ಸಹ ಯೋಜನೆ ಮಾಡಬೇಕು ಎಂದು ಹೇಳಿದ್ದಿರಿ. ಅದು ಒಳ್ಳೆಯದು. ಹಾಗೆ ಅವರಿಗೆ ಉತ್ತೇಜನ ಕೊಡುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಪ್ರಮೋಷನ್ ಕೊಡುವಾಗ ಸರಿಯಾಗಿ ನಿಖರವಾದ ರೂಲ್ಸ್ ಇಲ್ಲದೇ ಹೋದರೆ ಅಬ್ಜೆಕ್ಟಿವಿಟಿ ಇಲ್ಲದೆ ಸಬ್ಜೆಕ್ಟಿವಿಟಿ ಮಾಡಿದರೆ ಸುಪ್ರಿಂ ಕೋರ್ಟಿಗೆ, ಹೈಕೋರ್ಟ್‌ಗೆ ಹೋಗ ಬೇಕಾಗುತ್ತದೆ ಅಡ್ಮಿನಿಸ್ಟ್ರೇಷನ್ ಪೂರ್ತಿಯಾಗಿ ನಾಶವಾಗುತ್ತದೆಂದು ಹೇಳುತ್ತೇನೆ. ಇದರ ಬಗ್ಗೆ ಹುಷಾರು ಆಗಿರಬೇಕೆಂದು ಹೇಳುತ್ತೇನೆ. ಇನ್ನೊಂದು ಬಹಳ ಮುಖ್ಯವಾದ ವಿಷಯವೇನೆಂದರೆ ಇದರಲ್ಲಿ ಒಂದು ಅಂಶ ತಮಗೆ ಗೊತ್ತಿದೆ. ಈ ರಾಷ್ಟ್ರದಲ್ಲಿ ಅಡ್ಮಿನಿಸ್ಟ್ರೇಷನ್‌ನನ್ನು ಗಮನಕ್ಕೆ ತೆಗೆದುಕೊಂಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ರಾಜ್ಯದಲ್ಲಿ ಅನೇಕ ಜನ ಇಂಜಿನಿಯರ್ಸ್ ಇದ್ದಾರೆ, ಡಾಕ್ಟರ್ಸ್ ಇದ್ದಾರೆ, ಐ.ಎ.ಎಸ್. ಅಧಿಕಾರಿಗಳು ಇದ್ದಾರೆ. ಇವತ್ತು ಏನಾಗಿದೆ ಎಂದರೆ ಐ.ಎ.ಎಸ್. ಅಧಿಕಾರಿಗಳು ಎಲ್ಲಾ ವಿಷಯಗಳನ್ನೂ ತಿಳಿದುಕೊಂಡಿದ್ದಾರೆ ಹಾಗೆ ಎನ್ನುವ ಅಭಿಪ್ರಾಯ ಇದೆ. ಅವರು ಒಂದು ತರಹ ಪರಬ್ರಹ್ಮರು, ಸರ್ವಜ್ಞಮೂರ್ತಿಗಳು ಆ ತರಹದಲ್ಲಿ ಯಾವ ಡಿಪಾರ್ಟ್‌ಮೆಂಟಿನಲ್ಲೂ ಅವರಿಗೆ ಗೊತ್ತಿಲ್ಲದ ವಿಷಯವೇ ಇಲ್ಲ ಎನ್ನು ಅಭಿಪ್ರಾಯ ಕಲ್ಪನೆ ದೇಶದಲ್ಲಾಗಿದೆ. ಐ.ಎ.ಎಸ್. ಅಧಿಕಾರಿಗೆ ಲೇಬರ ವಿಷಯ ಗೊತ್ತು, ರೆವೆನ್ಯೂ ವಿಷಯ ಗೊತ್ತು, ಪೋಲೀಸ್ ವಿಷಯ ಗೊತ್ತು, ಎಲ್ಲಾ ವಿಷಯವು ಗೊತ್ತು, ಅವರಿಗೆ ಗೊತ್ತಿಲ್ಲದಿರುವ ವಿಷಯವೇ ಇಲ್ಲವೆಂದು ತಿಳಿದುಕೊಂಡಿದ್ದಾರೆ. ಅವರು ಎಲ್ಲಾ ರೀತಿಯಲ್ಲೂ ಎಲ್ಲವನ್ನು ತಿಳಿದುಕೊಂಡಿದ್ದಾರೆ ಎನ್ನುವ ಅಭಿಪ್ರಾಯದ ಮೇಲೆ ಅವರು ಎಲ್ಲಾ ಕಡೆಯೂ ಸೆಕ್ರೆಟರಿಗಳು ಆಗಿದ್ದಾರೆ, ಮುಖ್ಯವಾಗಿ ಸರ್ಕಾರವನ್ನು ನಡೆಸುತ್ತಿರುವವರೇ. ಅನೇಕ ಮಂತ್ರಿಗಳು ಅವರು ಹೇಳುವುದಕ್ಕೆ ರುಜು ಮಾಡುತ್ತಾರೆ ತಮ್ಮ ಬುದ್ಧಿಗೆ ತಿಳಿದಂತೆ ಮಾಡುವಂತಹ ಮಂತ್ರಿಗಳು ಸ್ವಲ್ಪ ಜನ ಇದ್ದಾರೆ. ಎಲ್ಲರೂ ಒಂದೇ ರೀತಿಯಾಗಿ ಇದ್ದಾರೆ ಎಂದು ನಾನು ಹೇಳುವುದಕ್ಕೆ ಇಷ್ಟಪಡವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಹೀಗೆ ಏತಕ್ಕೆ ಇದನ್ನು ಅಸೆಸ್ ಮಾಡಿದ್ದೀರಿ ?

ಶ್ರೀ. ಎಂ. ಎಸ್. ಕೃಷ್ಣನ್.—ಅದನ್ನು ಪ್ರೈವೈಟಾಗಿ ಹೇಳುತ್ತೇನೆ. ಏತಕೆಂದರೆ..........

ಶ್ರೀ ಡಿ. ದೇವರಾಜ ಅರಸ್.—ಸೀನಿಯಾರಿಟಿ ವಿಷಯವನ್ನು ಹೇಳಿದರೆ ನೀವು ಮಂತ್ರಿಗಳನ್ನು ಹೇಗೆ ಅಸಸ್ ಮಾಡುತ್ತಿರೋ ಹಾಗೇ ನಾವು ಅಧಿಕಾರಿಗಳನ್ನು ಅಸಸ್ ಮಾಡುವುದು.

SRI M. S KRISHNAN.—My submission is that quite a number of them do not have wisdom. They just act on what the Secretary says, I, the Minister is only dependent on the Secretary, then he may quit and the Secretary may become the Minister. If he makes use of the advice and acts on his own wisdom, it does not matter. But he does not make use of his wisdom. You lose your wisdom rightly or wrongly. ಬಹಳ ಮುಖ್ಯವಾದ ಕ್ವೆಶ್ಚನ್ ಏನೆಂದರೆ ಈ ತರಹ ಸರ್ವಜ್ಞಮೂರ್ತಿಗಳನ್ನು ಮಾಡಿ ಅವರೇ ಇವತ್ತು ಸರ್ಕಾರದಲ್ಲಿ ಇರಬೇಕು ಎಂದು ಮಾಡುತ್ತಾರೆ. ಬೇರೆ ಡಾಕ್ಟರುಗಳಿಗೆ ಇಂಜಿನಿಯರ್‌ಗಳಿಗೆ, ಚೀಫ್ ಇಂಜಿನಿಯರುಗಳಿಗೆ ಅಂತಹವರಿಗೆ ಉತ್ತೇಜನ ಕೊಡಬೇಕಾಗಿದೆ ಎನ್ನುವ ವಿಷಯದಲ್ಲಿ ಹಿಂದೆ ಬಿದ್ದಿದ್ದೀರಿ. ಜನರಾಲಿಸ್ಟ್ಸ್ ಮತ್ತು ಟೆಕ್ನೀಷಿಯನ್ಸ್ ಎನ್ನುವ ವಿಷಯ ಬಗ್ಗೆ ವಿವಾದ ನಮ್ಮ ದೇಶದಲ್ಲಿ ಇದೆ. ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಐ.ಎ.ಎಸ್. ಅಧಿಕಾರಿಗಳನ್ನು ಜನರಾಲಿಸ್ಟ್ ಎಂದು ಹೇಳುತ್ತಾರೆ. ಟೆಕ್ನೀಷಿಯನ್ಸ್ ವಿಷಯ ತಿಳಿದುಕೊಂಡಿರುವವರು, ಇಂಜನಿಯರ್ ವಿಷಯ ತಿಳಿದುಕೊಂಡಿರುವವರು ಡಾಕ್ಟರ್ ವಿಷಯ ತಿಳಿದುಕೊಂಡಿರುವವರು ಮೇಲಕ್ಕೆ ಬರುತ್ತಿದ್ದಾರೆ. ಜನರಲಿಸ್ಟ್‌ಗಿಂತಲೂ ಉನ್ನತವಾಗಿ ದಕ್ಷರಾಗಿರುವವರೂ ಇದ್ದಾರೆ. ಅವರಿಗೆ ಮಾನ್ಯತೆ ಇಲ್ಲ, ಅವರ ಪೇ ಸ್ಕೇಲ್ ಕಡಿಮೆ ಇದ್ದು ಅವರು ಮೇಲಕ್ಕೆ ಬರುವುದಕ್ಕೇ ಆಗುವುದಿಲ್ಲ. ಅವರಲ್ಲಿ ಎಲ್ಲರೂ ಒಳ್ಳೆಯವರು ಎಂದು ಹೇಳುವುದಿಲ್ಲ; ಇವರೆಲ್ಲ ಕೆಟ್ಟವರು ಎಂದು ಹೇಳುವುದಿಲ್ಲ. ಅವರಲ್ಲಿ ಒಳ್ಳೆಯವರೂ

ಇದ್ದಾರೆ, ಕೆಟ್ಟವರೂ ಇದ್ದಾರೆ. ಇವರಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ ನಮ್ಮ ಬೆಂಗಳೂರಿನಲ್ಲಿ ಜಿಲ್ಲಾಧಿಕಾರಿಗಳು ಒಳ್ಳೆಯವರು ಇದ್ದಾರೆ. ಹೊಸದಾಗಿ ಐ. ಎ. ಎಸ್ ಅಧಿಕಾರಿಗಳು ಕೆಲವರು ಬಂದಿದ್ದಾರೆ ಅವರು ಅನೇಕರು ಒಳ್ಳೆಯವರಾಗಿ ಇದ್ದಾರೆ. ಅವರಿಗೆ ಈ 20 ಅಂಶದ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಹುಮ್ಮಸ್ಸು, ಉತ್ಸಾಹ ಇದೆ ಅವರಿಗೆ ಮೇಲಕ್ಕೆ ಬರುವುದಕ್ಕೆ ಅವಕಾಶ ಕೊಡಬೇಕೆಂದು ಕೇಳುತ್ತೇನೆ. ಆದರೆ ಟೆಕ್ನೀಷಿಯನ್‌ಗೂ ಅವಕಾಶ ಕೊಡದಿದ್ದರೆ ಅದು ತಪ್ಪು ಎಂದು ಹೇಳುತ್ತೇನೆ. ಅವರಿಗೆ ಅವಕಾಶ ಕೊಡಕೂಡದು ಎಂದು ಈ ಜನರಾಲಿಸ್ಟ್ಸ್ ಐ. ಎ. ಎಸ್. ಅಧಿಕಾರಿಗಳ ಅಭಿಪ್ರಾಯ ಅದು ತಪ್ಪು. ಆದ್ದರಿಂದ ಟೆಕ್ನೀಷಿಯನ್ಸ್ ಕೂಡ ಸೆಕ್ರೆಟರಿಗಳು ಆಗಬೇಕು. ಅವರಿಗೂ ಅದೇ ರೀತಿಯ ಪೇಸ್ಕೇಲ್ ಇರಬೇಕು.

SRI H. M. CHANNABASAPPA .—I agree that they should also be given opportunity in their own fields.

3-30 P.M.

SRI D. DEVARAJ URS .—Can I make a Chief Engineer as a Chief Secretary ?

ಶ್ರೀ ಎಂ. ಎಸ್. ಕೃಷ್ಣನ್.—ಈಗ ಇಂಜನಿಯರಿಂಗ್ ಸರ್ವೀಸ್ ಮಾಡಬಹುದು. ಅಥವಾ ಇಂಡಿಯನ್ ಮೆಡಿಕಲ್ ಸರ್ವೀಸ್ ಮಾಡಬಹುದು. ಇಂಡಿಯನ್ ಫಾರೆಸ್ಟ್ ಸರ್ವೀಸ್ ಮಾಡಿದ್ದಾರೆ. ಅಂತಹವರಿಗೆ ಜವಾಬ್ದಾರಿ ಕೊಡಬಹುದು.

SRI H. M. CHANNABASAPPA .—That I agree.

SRI D. DEVARAJ URS.—With regard to Engineers and Medical man, we have agree for All India Servic.

ಶ್ರೀ ಎಂ. ಎಸ್. ಕೃಷ್ಣನ್.—ಮತ್ತೆ ಸಂಬಳ ಸಾರಿಗೆ ವಿಷಯದಲ್ಲಿ ಕೂಡ ಐ.ಎ. ಎಸ್. ಅಧಿಕಾರಿಗಳಿಗೂ ಮತ್ತು ಅವರಿಗೂ ತಾರತಮ್ಯತವಿದೆ. ಆ ವಿಷಯದಲ್ಲೂ ಸಹ ಪುನರ್ವಿಮರ್ಶೆ ಮಾಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಲ್ ಇಂಡಿಯಾ ಸರ್ವೀಸ್ ಬಂದರೆ ಒಂದೇ ಆಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅದು ಬರುತ್ತದೋ ಇಲ್ಲವೋ ಗೊತ್ತಿಲ್ಲ. ಬಂದರೆ ಸರಿಹೋಗಬಹುದು. ನಿಮ್ಮ ಡೈರೆಷನ್ ಆಫ್ ಥಿಂಕಿಂಗ್ ಆ ಕಡೆಗೆ ಹೋಗಬೇಕು ಎಂದು ಹೇಳಬೇಕಾಗಿದೆ. ನಾನು ಮ್ಯಾನ್ ಪವರ್ ಬಗ್ಗೆ ಒಂದೇ ಒಂದು ವಿಷಯ ಹೇಳುತ್ತೇನೆ. The Man power in Central Government Administration, ICS is 0 5 per cent: Specialists, Doctors, Engineers 6 4%, Clerical 17 7%, Production Process Workers 20.5%, unskilled 54 7%. out of 100 persons, 0 5 per cent is elite of the Secretariat Administration is the ICS people: they control rest of them. That is the present situtation in the Central Government. The same situtation prevails here also. That is why the Prime Minister took up very seriously this time and also made a very important remark.

The Prime Minister's observation was "She says, it is odd that the great Doctors and Engineers who could be rated as the leaders of the profession who save lives or add Permanent assets to the nation can rarely hope to receive they pay or status of secretaries of Ministers. The brightest of our young men and women choose engineering and medicine. If they happen to go into government, they are very soon overtaken by the general administrators. This must change and I am trying to change it."

This is from Focus Fortnightly Digest for the Law maker-page No. 29.

ನಾನು ಆ ವಿಷಯವನ್ನು ಅಷ್ಟಕ್ಕೇ ಬಿಡುತ್ತೇನೆ. ತಾವು ಆ ಬಗ್ಗೆ ಸ್ವಲ್ಪ ಗಮನ ಕೊಡಬೇಕು. ಇನ್ನೊಂದು ವಿಷಯ ಈ ಸಂರ್ಭದಲ್ಲಿ ಹೇಳಬೇಕೆಂದರೆ ತಮ್ಮ ಅಡ್ಮಿನಿಸ್ಟ್ರೇಷನ್ ಇನ್ನೂ ಬಲಪಡಿಸಬೇಕು ಈ ಒಂದು ಸಂದರ್ಭದಲ್ಲಿ ಇಪ್ಪತ್ತು ಅಂಶದ ಕಾರ್ಯಕ್ರಮಕ್ಕನುಗುಣವಾಗಿ ಕೆಲಸ ಮಾಡಿ ಅದನ್ನು ಕಾರ್ಯರೂಪಕ್ಕೆ ತರಬೇಕಾದರೆ ಹೆಚ್ಚು ಹೆಚ್ಚು ಜನಸಾಮಾನ್ಯರ ಪ್ರತಿನಿಧಿಗಳನ್ನು ಅಂದರೆ ಜನಗಳ ಪ್ರತಿನಿಧಿಗಳನ್ನು ಕೂಡ ಸೇರಿಸಿ ಸರ್ಕಾರದ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಹೆಚ್ಚಿನ ರೀತಿಯಲ್ಲಿ ಅವಕಾಶ ಮಾಡಿಕೊಡಬೇಕು. ಕನ್‌ಸೆಲ್ಟೇಟಿವ್ ಕಮಿಟೀಸ್ ಮಾಡಬೇಕು ಎಂದು ಯೋಚನೆ ಮಾಡಿದ್ದೀರಿ ಎಲ್ಲಾ ಇಲಾಖೆಗಳಿಗೂ ಸಂಬಂಧಪಟ್ಟಂತೆ 20 ಅಂಶದ ಕಾರ್ಯಕ್ರಮಕ್ಕೆ ಬೆಂಬಲ ಕೊಡುವಂತಹ ಎಲ್ಲಾ ಎಂ ಎಲ್.ಎ ಗಳನ್ನು ಸೇರಿಸಿ ಕಮಿಟಿಗಳನ್ನು ಮಾಡಬೇಕು ಎಂದು ನನ್ನ ಅಭಿಪ್ರಾಯ. ಇದನ್ನು ಯೋಚನೆ ಮಾಡಬೇಕು. ಕೆಳಗಿನ ಮಟ್ಟದಲ್ಲಿ ಅಂದರೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲೂ ಇಂಪ್ಲಿಮೆಂಟೇಷನ್ ಕಮಿಟಿಗಳನ್ನು ಮಾಡಿದ್ದೀರಿ. ತಾಲ್ಲೂಕು, ಮತ್ತು ಜಿಲ್ಲಾ ಮಟ್ಟದ ಸಮಿತಿಗಳಲ್ಲಿ ರಾಜಕೀಯವನ್ನು ತರಕೂಡದು. ಯಾರು ಯಾರು ಇಪ್ಪತ್ತು ಅಂಶದ ಕಾರ್ಯಕ್ರಮಕ್ಕೆ ಬೆಂಬಲ ಕೊಡುತ್ತಾರೆ ಅಂಥವರೆಲ್ಲರನ್ನೂ ಸಮಿತಿಗಳಲ್ಲಿ ಸೇರಿಸಬೇಕು. ವಿರೋಧ ಮಾಡುವವರನ್ನು ಸೇರಿಸಿಕೊಳ್ಳಿ ಎಂದು ಹೇಳುವುದಕ್ಕಾಗುವುದಿಲ್ಲ. ಯಾರು ಯಾರು ಪರವಾಗಿದ್ದಾರೆ ಅವರನ್ನು ಸೇರಿಸಿಕೊಳ್ಳಿ. ಹೈಯೆಸ್ಟ್ ಲೆವೆಲ್ ಕಮಿಟಿ ಆಗಲೀ ಲೋಯೆಸ್ಟ್ ಲೆವೆಲ್ ಕಮಿಟಿಯಾಗಲಿ ಸಮಿತಿಗಳನ್ನು ಮಾಡುವಾಗ ಇಪ್ಪತ್ತು ಅಂಶದ ಕಾರ್ಯಕ್ರಮಕ್ಕೆ ಬೆಂಬಲ ಕೊಡುವಂತಹ ಜನರನ್ನು ಸೇರಿಸಿಕೊಂಡರೆ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ. ಬ್ಯೂರಾಕ್ರಸಿ ಅಡ್ಡಿ ಆತಂಕ ತರುತ್ತಾರೆ. ಅದನ್ನು ಎದುರಿಸುವುದಕ್ಕೂ ಸಾಧ್ಯವಾಗುತ್ತದೆ. ನಿಮಗೂ ಒಳ್ಳೆಯ ಹೆಸರೂ ಕೂಡ ಬರುತ್ತದೆ. ಆ ದೃಷ್ಟಿಯಲ್ಲಿ ತಾವು ನಡೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ಮುಖ್ಯವಾದ ವಿಚಾರ ಏನೆಂದರೆ ದೊಡ್ಡ ನೀರಾವರಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಬಹಳ ದೀರ್ಘವಾಗಿ ಎಲ್ಲ ವಿಷಯಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಎರಡು ವಿಷಯಗಳ ಬಗ್ಗೆ ಮಾತ್ರ ಹೇಳುತ್ತೇನೆ. ಮೊದಲನೆಯದು ನಮ್ಮ ಈ ಮನೆಯಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಮಾನ್ಯ ಪಾಟೀಲರು ಕೇಳಿದ್ದು ಕೇಳಿದ್ದೇ, ಪ್ರತಿ ಸಾರಿಯೂ ಕೇಳುತ್ತಿದ್ದಾರೆ, ಒತ್ತಾಯ ಮಾಡುತ್ತಲೇ ಇದ್ದಾರೆ, 12 ವರ್ಷದಿಂದ ಈ ಮಾತನ್ನು ಹೇಳುತ್ತಿದ್ದಾರೆ. ನಮಗೆ ಗೊತ್ತಿರುವಹಾಗೆ ಅಲ್ಲಿ ಫಸ್ಟ್ ಸ್ಟೇಜ್ ಕೂಡ ಪೂರ್ತಿಯಾಗಿಲ್ಲ. ಅದಕ್ಕೆ ಒಟ್ಟು 15. ಕೋಟಿ ರೂಪಾಯಿ ಬೇಕಾಗಿದೆ ಎಂದು ತಿಳಿದುಬಂದಿದೆ. ಮತ್ತೆ ಕೊನೆಗೆ 220 ಕೋಟಿ ರೂಪಾಯಿ ಆಗುತ್ತದೆ. ನಾನಾದರೂ ಕೇಳುತ್ತೇನೆ ಮೊದಲನೇ ಸ್ಟೇಜ್ ಮುಗಿಸುವುದಕ್ಕೆ ಬೇಕಾದ ಹಣವನ್ನು ಮುಗಿಸುವುದಕ್ಕೆ ಬೇಕಾದ ಹಣವನ್ನು ಒದಗಿಸುವುದಕ್ಕೆ ಯಾತಕ್ಕೆ ಕೇಂದ್ರವನ್ನು ಒತ್ತಾಯ ಮಾಡಲಿಲ್ಲ ಬಿಜಾಪುರ, ಗುಲ್ಬರ್ಗ, ರಾಯಚೂರು ಎಲ್ಲ ಜಿಲ್ಲೆಗಳಿಗೂ ಸಹ ಬರಗಾಲಪೀಡಿತ ಪ್ರದೇಶಕ್ಕೆ ಆ ಯೋಜನೆಯಿಂದ ಅನುಕೂಲವಾಗುತ್ತದೆ. ನಾರಾಯಣಪುರ ಡೈವರ್‌ಷನ್ ಡ್ಯಾಮ್ ಮಾತ್ರ ಕಟ್ಟಿಸಿದ್ದಾರೆ. ಬೇರೆ ಏನು ಮಾಡಲಿಲ್ಲ ಎಂದು ನನಗೆ ತಿಳಿದು ಬಂದಿದೆ. ಕೆನಾಲ್ಸ್ ಏನಾಗಿದೆ ಎಂದರೆ ಅದು ಅರ್ಧ ಮಾಡಿದ್ದೀರಿ. ಕೆನಾಲ್ಸ್ ಮಾಡಬೇಕು ಎಂಬ ಯೋಜನೆ ಪೂರ್ತಿ ಮುಗಿಯಲಿಲ್ಲ. ಹಾಗೆಯೇ ಉಳಿದಿದೆ. ಮುಖ್ಯವಾಗಿ ಪ್ರಾಜೆಕ್ಟ್‌ಗೆ ಗಮನ ಕೊಟ್ಟಿಲ್ಲ. ಅದಕ್ಕೆ ಪೂರ್ತಿಯಾಗಿ ಗಮನ ಕೊಡಬೇಕು, ಕೇಳಿದಾಗಲೆಲ್ಲಾ ಹಣ ಇಲ್ಲ ಎಂಬ ಮಾತನ್ನು ಹೇಳುತ್ತಿದ್ದಾರೆ. ಈ ರೀತಿ ಸಬೂಬನ್ನು ಹೇಳಿ ಪ್ರಯೋಜನವಿಲ್ಲ. ಒತ್ತಾಯಪೂರಕವಾಗಿ ಮಾಡಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಈಗ ಎಷ್ಟು ಹಣ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್ —ಆಗ 150 ಕೋಟಿ ರೂಪಾಯಿ ಆಗಿತ್ತು ಈಗ 220 ಕೋಟಿ ರೂಪಾಯಿ ಆಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಈಗ ಎಷ್ಟು ಒದಗಿಸೋಣ ?

ಶ್ರೀ ಎಂ. ಎಸ್. ಕೃಷ್ಣನ್.—ಹಂತಹಂತವಾಗಿ ಮಾಡಬೇಕು. ಒಂದೇ ಸಾರಿಗೆ 150 ಕೋಟಿ ರೂಪಾಯಿ ಒದಗಿಸುವುದಕ್ಕಾಗುವುದಿಲ್ಲ. 12 ವರ್ಷದಿಂದ ಏನು ಮಾಡುತ್ತಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಏನು ಮಾಡುತ್ತಿದ್ದಿರಿ ಎಂದು ಆಗಿದ್ದ ಸರ್ಕಾರವನ್ನು ಕೇಳ ಬೇಕು. ನನಗೆ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಬರೀ ನಾರಾಯಣಪುರ ಡೈವರ್‌ಷನ್ ಡ್ಯಾಂ ಮಾತ್ರ ಮಾಡಿದ್ದೀರಿ. ಅದಕ್ಕೆ ಸರಿಯಾಗಿ ಎಲ್ಲಾ ಪ್ರಾಜೆಕ್ಟ್ ಬಗ್ಗೆ ಮುಂತಿನವರ್ಷ ವಹಿಸಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ವಿಷಯ ಸರಿಯಾಗಿ ತಿಳಿದುಕೊಂಡು ಮಾತನಾಡಿ. 12 ವರ್ಷದಿಂದ ಏನು ಮಾಡುತ್ತಿದ್ದೀರಿ ಎಂದರೆ, ಅದು 63-64ಕ್ಕೆ ಹೋಯಿತು. ಈಗ 76ನೇ ಇಸವಿಯಲ್ಲಿದ್ದೇವೆ. ಡ್ಯಾಂ ಎಲ್ಲಿ ಕಟ್ಟಬೇಕು ಎಂಬುದೇ ವರ್ಷಗಟ್ಟಲೆ ಹಿಡಿಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಈ ವರ್ಷ ಮೂರು ಕೋಟಿ ರೂಪಾಯಿ ಮಾತ್ರ ಒದಗಿಸಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ಅದೊಂದೇ ಅಲ್ಲ ಇರತಕ್ಕದ್ದು. ಅದೊಂದಕ್ಕೇ 6 ಕೋಟಿ ರೂಪಾಯಿ ಒದಗಿಸಿದರೆ ಇನ್ನೊಂದಕ್ಕೆ ಕಡಿಮೆಯಾಗುತ್ತದೆ. ಬೇಕಾದಷ್ಟು ಡ್ಯಾಂಗಳಿವೆ. There are several dams viz., the ghataprabha, Malaprabha, and upper Krishna, Almatti and Narayanapur dams. Ghataprabha is completed: Should I not make available the resources to see that the water is utilised both under Malaprabha and Ghataprabha Projects? I have also made provision of Rs. 6 Crores for the Krishna Project. Immediately I cannot use water from there. I must provide more and more money for the completed projects and see that the water is utilised. I want the House kindly to anderstand this aspect. The Hon'ble member should not make a bald statement.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳುವುದು ಏನೆಂದರೆ ಈಗ ನೀವು ಬೇರೆ ಬೇರೆ ಪ್ರಾಜೆಕ್ಟ್‌ಗಳಿಗೆ ಹಣ ಕೊಟ್ಟಿದ್ದೀರಿ, ಇದಕ್ಕೆ ಕೊಟ್ಟಿಲ್ಲ ಎಂದು ಹೇಳುತ್ತಿಲ್ಲ. ನನ್ನ ಪ್ರಶ್ನೆ ಏನೆಂದರೆ what are the efforts that this government has made in order to see that enough funds are provided for the particular project itself. This is most important. ಅದರ ಬಗ್ಗೆ ನಮಗೆ ಸಮಜಾಯಿಷಿ ಕೊಡಬೇಕು. ಬರೀ ಎಸ್ಟಾಬ್ಲಿಷ್ ಮೆಂಟ್ ಖರ್ಚಿಗೇ ಎಲ್ಲಾ ಹಣ ಹೋಗುತ್ತಿದೆ. ಬೇರೆ ಏನೂ ಮಾಡುವುದಕ್ಕಾಗಿಲ್ಲ. ಎಂದು ತಿಳಿದುಬಂದಿದೆ. ಘಟಪ್ರಭ ಬಗ್ಗೆ ತಾವು ಹೇಳಿದಿರಿ ಅದರ ಬಗ್ಗೆ ಒಂದು ವಿಷಯ ನನಗೆ ತಿಳಿದು ಬಂದಿರುವುದು, Ghataprabha project seems to be going on some irrational lines.

ಈಗ ನನಗೆ ತಿಳಿದುಬಂದಿರುವ ವಿಷಯವೇನೆಂದರೆ, vested interests any sugarcane grower and particularly some of those sugar mill owners are trying to see that the whole water is made use of by them. ಡ್ಯಾಮ್ ಕಟ್ಟುವಾಗ ಹೆಚ್ಚು ಜನಕ್ಕೆ ಅನುಕೂಲವಾಗುವಂತೆ ಕಟ್ಟಬೇಕು. ಆದರೆ ನನಗೆ ತಿಳಿದು ಬಂದಿರುವ ಹಾಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಡ್ಯಾಮ್ ಕಟ್ಟಿದರೂ ಬಹಳ ಜನಕ್ಕೆ ಅನುಕೂಲವಾಗುತ್ತಿಲ್ಲ. ಪಟ್ಟಭದ್ರ ಹಿತಾಶಕ್ತಿಗಳು, ಶ್ರೀಮಂತರು ಮತ್ತು ಸಕ್ಕರೆ ಕಾರ್ಖಾನೆಯ ಮಾಲೀಕರು ತಮಗೆ ಅನುಕೂಲ ಮಾಡಿಕೊಂಡು ನೀರನ್ನು ತಾವೇ ಬಳಸುತ್ತಿದ್ದಾರೆ. ಈ ರೀತಿ ನೀರನ್ನು ಬಳಸುವುದಕ್ಕೆ ಪ್ರಯತ್ನ ಪಟ್ಟರೆ ರಾಜ್ಯಕ್ಕೆ ಮತ್ತು ದೇಶಕ್ಕೆ ಹಾನಿಯಾಗುತ್ತದೆ. ಈ ಸಂದರ್ಭದಲ್ಲಿ ಶ್ರೀ ಧರ್ಮವೀರರು ಕಬ್ಬು ಬೆಳೆಯುವವರಿಗೆ ಏಕೆ ನೀರು ಬಿಡಕೂಡದೆಂದು ಅವರಿಗೆ ಸಂಕಷ್ಟ ನೀಡಿದ್ದನ್ನೊದಗಿಸಿ ಪುಣ್ಯ ಕಟ್ಟಿಕೊಂಡರೆಂದೂ, ಶ್ರೀ ಮೋಹನ್‌ಲಾಲ್ ಸುಖಾಡಿಯ ಅವರು ಈ ಪ್ರಾಜೆಕ್ಟ್‌ಗಳಿರುವುದು ಒಬ್ಬರಿಗೋಸ್ಕರ ಮಾತ್ರವಲ್ಲ ಈ ಧೋರಣೆ ಬದಲಾಗಬೇಕೆಂದು ಹೇಳಿದರೆಂದು ತಿಳಿದು ಬಂದಿದೆ. ತಾವು ಈ ಬಗ್ಗೆ ಅದು ನಿಜವೇ, ಸುಳ್ಳೇ ಎಂದು ಪರಿಶೀಲನೆ ಮಾಡಿ, ಇದರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ ಈ ಪ್ರಾಜೆಕ್ಟಿನಿಂದ ಲಕ್ಷಾಂತರ ಜನಕ್ಕೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ನೀವು ಬರೀ ಒಂದೇ ಭಾಗದ ಕಥೆ ಹೇಳಿದಿರಿ. ಆದರೆ ಪೂರ್ತಿ ಕಥೆ ಕೇಳದೆ ಹೋದರೆ ಹೇಗಾಗುತ್ತದೆ ? ನೀವು ವಿಷಯವನ್ನು ಸರಿಯಾಗಿ ತಿಳಿದು ಕೊಳ್ಳದೆ ಇರುವುದರಿಂದ ಕ್ಲಾರಿಫೈ ಮಾಡುವುದು ಒಳ್ಳೆಯದು. ನಾವು ಇದನ್ನು ಫ್ಯಾಕ್ಟರಿಗಳ ದೊಡ್ಡ ಮನುಷ್ಯರಿಗೆ ರೆಫರ್ ಮಾಡುತ್ತಿದ್ದೇವೆ. ಸರ್ಕಾರದವರು ಈ ಬಗ್ಗೆ 7-8 ವರ್ಷಗಳ ಹಿಂದೆಯೇ ಒಂದು ಕಮಿಟಿ ಮಾಡಿದ್ದಾರೆ. ನಾವು ಅವರಿಗೆ ಏನಾದರೂ ನೀರು ಕೊಟ್ಟರೆ ಯಾವ ಒಂದು ರೀತಿಯಲ್ಲೂ ಹೆಚ್ಚಿಗೆ ಸಹಾಯ ಮಾಡುವ ದೃಷ್ಟಿಯಿಂದ ಕೊಡುವುದಿಲ್ಲ ; ಇತ್ತೀಚೆಗಂತೂ ಕೊಟ್ಟಿಲ್ಲ. ಬೇರೆ ಯಾವುದೋ ಲೆಕ್ಕಾಚಾರದಿಂದ ಹಿಂದಿನ ಸರ್ಕಾರದವರು ಕೊಟ್ಟಿದ್ದಾರೆ.

The justification or otherwise is another matter Rightly or wrongly commitment has been made by the previous Government permanently viz. that as and when this factory comes up, we will give water for the sugarcane required by the factory. If at all I am to do anything now, I have to modify it. Please don't be under the impression that somebody is trying to push the Government in favour of a particular factory or a particular set of farmers. In the initial stage itself, when the Government allowed this factory to come up, a commitment has been made. Strictly speaking, you have to honour that commitment now. If the commitment is honoured, these are the difficulties which have been just now described by the hon'ble Member. All our efforts are now directed towards how to modify it.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿದ್ದು ಸಂತೋಷ. ಹಿಂದಿನವರು ಕಮಿಟ್ ಮಾಡಿಕೊಂಡಿದ್ದರು, ಆದುದರಿಂದ ನಾವು ಏನು ಮಾಡುವ ಹಾಗಿಲ್ಲ. ಕಮಿಟ್ ಮಾಡಿಕೊಂಡಿರುವುದರಿಂದ ಅದನ್ನು ಕಾರ್ಯರೂಪಕ್ಕೆ ತೆಗೆದುಕೊಂಡು ಬರಬೇಕೆಂದು ಯೋಚನೆ ಮಾಡುತ್ತಿದ್ದೀರಿ. ಆದರೆ ಅದನ್ನು ಬದಲಾವಣೆ ಮಾಡುವುದಕ್ಕಾದರೆ ಬಹಳ ಒಳ್ಳೆಯದೆಂದು ಹೇಳಬಲ್ಲೆ. ಅದೇ ರೀತಿ ಮಲಪ್ರಭಾ ಪ್ರಾಜೆಕ್ಟಿನಲ್ಲೂ ಸಹ ಒಂದು ಪ್ರಾಬ್ಲಮ್ ಬಂದಿದೆ ಎಂದು ಕೇಳಿದ್ದೇನೆ. ಅದು 3 ಕೋಟಿ ರೂಪಾಯಿ ವೆಚ್ಚದ ಪ್ರಾಜೆಕ್ಟು. ಅದು 1963ರಲ್ಲಿ ಶುರುವಾದರೂ ಇನ್ನೂ ಅದರ ಕೆಲಸ ಬಹಳ ನಿಧಾನವಾಗಿ ಸಾಗುತ್ತಿದೆ. ಆದರೆ ಅಲ್ಲಿ ಇವತ್ತಿನ ದಿವಸ ಬಹಳ ಮುಖ್ಯವಾದ ಒಂದು ಪ್ರಶ್ನೆ ಬಂದಿದೆ ಎಂದು ತಿಳಿದು ಬಂದಿದೆ, ಅದೇನೆಂದರೆ,

There is a problem which, I hope, the technical people will solve. I do not know how it is being solved. The problem is one of instability of the soil itself. Whatever water you want to send through the canal, it cannot be done, If it is true, then it is a very serious and a challenging question as to how exactly the technicians particularly, the engineers could get over the problems of water—logging, salinity of the water, etc. and see that it is properly constructed. Otherwise, the peasants of the area will not get the benefit.

ಕೊನೆಯದಾಗಿ, ಕಾವೇರಿ ಪ್ರಾಜೆಕ್ಟು ವಿಷಯ ಹೇಳಿ ಮುಗಿಸುತ್ತೇನೆ ಕಾವೇರಿಯ ಪ್ರಾಜೆಕ್ಟಿನ ಜೊತೆಗೆ ಈಗಾಗಲೇ ಹೇಮಾವತಿ, ಕಬಿನಿ, ಹಾರಂಗಿ ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದೀರಿ. ಅವುಗಳನ್ನು ನಿಮ್ಮ ಶಕ್ತಿಗನುಗುಣವಾಗಿ ಮತ್ತು ರಾಜ್ಯದ ರಿಸೋರ್ಸಸ್‌ಗಳ ಆಧಾರದ ಮೇಲೆ ಕಟ್ಟುತ್ತಿದ್ದೀರಿ ; ಆ ಕಾರ್ಯ ಇವತ್ತಿನ ದಿವಸ ನಡೆಯುತ್ತಿದೆ ; ಆದರೆ ನಮ್ಮ ರಿಸೋರ್ಸಸ್ಸಿನ ಆಧಾರದ ಮೇಲೆ ನಡೆಯುತ್ತಿರುವುದರಿಂದ ಬಹಳ ನಿಧಾನವಾಗಿ ಸಾಗುವಂತೆ ಕಾಣುತ್ತಿದೆ. ಏಕೆಂದರೆ ಈಗ ಕಬಿನಿಯಲ್ಲಿ ಕ್ಯಾನಾಲ್ ವರ್ಕ್ ಏನು ನಡೆಯುತ್ತಿದೆ ಅದು ಪೂರ್ಣಗೊಳ್ಳಬೇಕಾದರೆ ಇನ್ನೂ 10-15 ವರ್ಷಗಳು ಬೇಕಾಗುತ್ತದೆ ಎಂದು ಇಂಜಿನಿಯರುಗಳು ಹೇಳುತ್ತಿದ್ದಾರೆ.

ಅದಕ್ಕೆ ಸರ್ಕಾರದವರು ಏನು ವ್ಯವಸ್ಥೆ ಮಾಡುತ್ತಾರೆಂದು ಕೇಳಬಯಸುತ್ತೇನೆ. ಇದನ್ನು ಕಂಪ್ಲೀಟ್ ಮಾಡಿದರೆ 60 ಸಾವಿರ ಎಕರೆಯಷ್ಟು ಜಮೀನಿಗೆ ನೀರನ್ನೊದಗಿಸಬಹುದೆಂದು ಮೊದಲು ತೀರ್ಮಾನಿಸಿತ್ತು, ಆದರೆ ಇವತ್ತು ಸುತ್ತಮುತ್ತ ಎರಡೂವರೆ ಲಕ್ಷ ಎಕರೆಯಷ್ಟು ಗದ್ದೆಗಳಾಗುವ ನಿರೀಕ್ಷೆ ಇದೆ ಅದಕ್ಕೆಲ್ಲ ನೀರನ್ನೊದಗಿಸಲು ಹೇಗೆ ಹಣವನ್ನು ಹೊಂದಿಸುವುದು ಎಂಬ ಪ್ರಶ್ನೆ ಉದ್ಭವವಾಗಿದೆ. ಇದಕ್ಕೆಲ್ಲ ಹಣವನ್ನು ಹೊಂದಿಸಿ ನಂತರ ಕೆಲಸವನ್ನು ಪ್ರಾರಂಭ ಮಾಡಬೇಕಾಗುತ್ತದೆ. ಈಗ ಜನರಲಿಸ್ಟ್‌ಗಳ ಮತ್ತು ಟೆಕ್ನಿಶಿಯನ್‌ಗಳ ಮಧ್ಯೆ ಕಾಂಟ್ರೊವರ್ಸಿ ಬಂದಿದೆ ಎಂದು ನನಗೆ ತಿಳಿದು ಬಂದಿದೆ. ಅದೇನೆಂದರೆ ಇಂಜಿನಿಯರ್‌ಗಳು ಕ್ಯಾನಾಲ್ ಕೆಲಸವನ್ನು ಮೊದಲು ಮತ್ತು ಜಾಗ್ರತೆಯಾಗಿ ಮಾಡಬೇಕೆಂದು ಹೇಳುತ್ತಾರೆ. There is a serious difference of opinion between the generalist and the technicians. The engineers say that the canal must be built but your Secretariat people ask them to go slow in regard to canal work.

SRI D. DEVARAJ URS.—I have great respect for his suggestions and the so many criticisms that he is making. The only point is that he himself being an engineer, I think he is getting only one-sided version of the whole thing. Let him not be merely guided by what the engineers say. I am sorry they do not understand. An engineer may be good at his job but he cannot look at things from the angle of a generalist. The very fact that the Hon'ble Member is mentioning that some engineers have given him this opinion goes to show......

SRI M. S. KRISHNAN.—It is not a question of some engineers giving their opinion or not giving their opinion. The Hon'ble Chief Minister will agree that the mere construction of reservoirs alone will not help. Why don't the Secretaries ask them to take up the canals also ?

SRI D. DEVARAJ URS.—Why does the hon'ble Member think that the Secretaries are not for it. Whatever the Secretaries have said is in accordance with the direction given by the Chief Minister. The engineers would like to have Rs. 200 crores put into their hands. May be, they are prepared to build the dam within three years. But where is the money ? Are we in a position to utilise all our financial resources only for the construction of dams and canals ? If that is done, there will be criticism from the members themselves and they will ask what about other thinges which concern the people immediately.

Therefore, we have the responsibility to equitably distribute whatever resources we have on hand for major irrigation or a particular dam or a canalora minor irrigation work or a road I would say, why not we say in this House that all the moneys we are spending on on the roads and repairs be stopped say for six years and let us spend that irrigatian ? Are the hon'ble Members prepared to accept ? The entire money of 8 to 10 crores we are spending on repairs and new roads, supposing we invest it on irrigation for six years, all these works will be over. Can we do it ? Otherwise, if you say 'somehow', how can we do it ? With all our efforts, we have been increasing the allotment from

year to year. In the matter of mobilisation of resources, I think Karnataka has done in a most commendable way. I am not trying to pat on my back. This is the opinion of the Central Government, Planning Commission and all those who understand the economics. Such being the case, if a few engineers say we can build immediately, yes we can. But where is money to come from ? There is no money.

ಶ್ರೀ ಎಚ್ ಟಿ. ಕೃಷ್ಣಪ್ಪ.—ಸದಸ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಅದು ಕಷ್ಟ ಇದೆ. ಅದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಕಳೆದ ವರ್ಷ ತಾವು ಈ ಬೃಹತ್ ಯೋಜನೆಗಳಿಗೆ ಸಂಬಂಧಪಟ್ಟಹಾಗೆ ಯಾವ ಕೆಲಸವನ್ನು ನಿಲ್ಲಿಸಿದರೂ ಈ ಯೋಜನೆಗಳ ಕೆಲಸವನ್ನು ನಿಲ್ಲಿಸುವುದಿಲ್ಲ, ಯಾವ ಕಡೆಯಿಂದಲಾದರೂ ಬೆಗ್ ಭಾರೋ ಆರ್ ಸ್ಟೀಲ್ ಹಣ ತಂದೇ ತರುತ್ತೇವೆ ಈ ಕೆಲಸವನ್ನು ಮಾಡುತ್ತೇವೆ ಎಂದು ತಾವು ಭರವಸೆಯನ್ನು ಕೊಟ್ಟಿದ್ದೀರಿ.

MR. DEPUTY SPEAKER.—That was in a different context.

SRI H. T. KRISHNAPPA.—It was in a the same context.

ಶ್ರೀ ಎಂ. ಎಸ್ ಕೃಷ್ಣನ್.—ಮಾನ್ಯ ಕೃಷ್ಣಪ್ಪನವರು ಹೇಳಿದ ಹಾಗೆ ತಾವು ಹೋದವರ್ಷ ಈ ಬಗ್ಗೆ ಭರವಸೆಯನ್ನು ಕೊಟ್ಟಿದ್ದೀರಿ ಶತಾಯ ಗತಾಯ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತೇವೆ, ಅದು ಸರ್ಕಾರದ ಜವಾಬ್ದಾರಿ ಅದನ್ನು ನಾವು ಮಾಡುತ್ತೇವೆ ಎಂದು ಹೇಳಿದ್ದೀರಿ.

SRI D. DEVARAJ URS.—From year to year with all the difficulties we have, we are making increased allocation to all these projects. I would request them to look into the budgetary figures, what was provided last year, previous to last year and this year.

SRI H. T KRISHNAPPA.—At this rate even one generation may not be sufficient.

SRI D. DEVARAJ URS.—Quite, right, I understand. From all the speches made here we can understand that not even one has spelt out how to generate money.

SRI H. T. KRISHNAPPA.—You should do it.

SRI D. DEVARAJ URS.—Because we have been able to do it we have raised the allotments from year to year,

ಶ್ರೀ ಎಂ, ಎಸ್. ಕೃಷ್ಣನ್.—ಎಲ್ಲಾ ಪ್ರಾಜೆಕ್ಟ್‌ಗಳನ್ನೂ ಸ್ಟೇಟ್ ರಿಸೋರ್ಸಸ್‌ನಿಂದ ಮಾಡುವುದು ಕಷ್ಟ: ಬೇರೆ ಕಡೆ ಯಾರು ಯಾರು ಇದಕ್ಕೆ ಹಣ ಸಹಾಯ ಒದಗಿಸುವುದಕ್ಕೆ ಸಾಧ್ಯ ಇದೆ, ಯಾರು ಯಾರಿಂದ ಹಣಸಹಾಯವನ್ನು ಪಡೆಯುವುದಕ್ಕೆ ಸಾಧ್ಯವಿದೆಯೋ ಅವರುಗಳಿಂದ ಪಡೆಯುವುದಕ್ಕೆ ಸದಾ ಪ್ರಯತ್ನ ಮಾಡಬೇಕು ಇದು ರಾಷ್ಟ್ರೀಯ ಪ್ರಶ್ನೆ. ಆದ್ದರಿಂದ ಈ ಬಗ್ಗೆ ಕೇಂದ್ರದಲ್ಲಿ ಚರ್ಚೆಮಾಡಿ ಯಾವ ರೀತಿ ಇದಕ್ಕೆ ಹಣವನ್ನು ಪಡೆಯಬೇಕು ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಡಿ ದೇವರಾಜ್ ಅರಸ್;—ಈ ವರ್ಷ ಮಲಪ್ರಭಾ ಯೋಜನೆಗೆ 3 ಕೋಟಿ ರೂಪಾಯಿಗಳನ್ನು ಎಕ್ಸ್ಟ್ರ ಕೊಟ್ಟಿದ್ದಾರೆ. ಇದರ ಜೊತೆಗೆ ಅಪ್ಪರ್ ಕೃಷ್ಣಾ ಮತ್ತು ಕಾವೇರಿ ವ್ಯಾಲಿಯ ಯೋಜನೆಗಳನ್ನು ಏತಕ್ಕೆ ಮಾಡಲಲ್ಲ ಎಂದರೆ ಅವುಗಳ ಡಿಸಪ್ಯೂಟ್ ಮುಗಿದಿಲ್ಲ ಅದು ಇನ್ನು ಕರೆಸ್ಪಾಂಡೆನ್ಸ್‌ನಲ್ಲಿದೆ. ನಮಗೆ ಹೆಚ್ಚಿಗೆ ಹಣ ಬರುವುದಾದರೆ ಅದನ್ನು ಈ

ಕೆಲಸಕ್ಕೆ ಡೈವರ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಒಂದೊಂದು ಮುಗಿಸಿಕೊಂಡು ಹೋಗಬೇಕು. We shall contract on that serious and hard work is necessary and time also is necessary. ನೀವು ಒಂದು ಕಡೆ ಮೇಜರ್ ಇರಿಗೇಷನ್ ಪ್ರಾಜೆಕ್ಟಿಗೆ ಪೂರ್ತಿ ಮಾಡಬೇಕಾದರೆ ಎಷ್ಟು ಕಾಲವಾಗುತ್ತದೆ ಎಂದು ಹೇಳುತ್ತೀರಿ. ಹಾಗಾದರೆ ನಾನು ಒಂದು ಕೆಲಸ ಮಾಡುತ್ತೇನೆ. ಈಗ 13 ಕೋಟಿ ರೂಪಾಯಿಗಳನ್ನು ಎಕ್ಸ್‌ಕ್ಲೂಸಿವ್ ಕಾವೇರಿ ವ್ಯಾಲಿ ಪ್ರಾಜೆಕ್ಟಿಗೆ ಕೊಟ್ಟಿದ್ದೇವೆ. ಅದಕ್ಕೆ 23 ಕೋಟಿ ರೂಪಾಯಿಗಳನ್ನು ಕೊಡೋಣ ನಾನು ಬಜೆಟ್ ರೀ ಅಜ್ಜಸ್ಟ್ ಮಾಡುವುದಕ್ಕೆ ತಯಾರಾಗಿದ್ದೇನೆ.

MR DEPUTY SPEAKER.—The Hon'ble Members time is up and he may Please conclude.

MR. M. S. KRISHNAN.—Unfortunately my time has been taken up others.

MR. DEPUTY SPEAKER.—I have noted the time taken by others also

SRI D. DEVARAJ URS.—I interrupted because I would like the House to be properly apprised of the situation. I want the Hon'ble members and especially a senior member like Sri Krishnan to understand, If they come out with any suggestion it will be helpful to me to mobilise resources or even to readjust and reallocate the budget, I will be happy.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಏನು ಮಾಡಬೇಕು ಎಂದು ಹೇಳಿದರೆ ಅದನ್ನು ಮಾಡುವುದಕ್ಕೆ ನಾವು ತಯಾರಾಗಿದ್ದೇವೆ, ಆದರೆ ತಾವು ಏನು ಮಾಡಬೇಕಾದರು ಕೂಡ ಮೂಲ ಭೂತವಾದ ಕಾರ್ಯಕ್ರಮಗಳನ್ನು ದೇಶಾದ್ಯಂತ ತೆಗೆದುಕೊಳ್ಳಬೇಕಾಗುತ್ತದೆ. ರಾಷ್ಟ್ರ ಮಟ್ಟದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. For example the question of taking over of the monoply houses in the Country and implements radical programmes. These have to be taken by the centre for speady implementation. I do not want to go into all that now ಈ ಕೆಲವು ಮೂಲಭೂತ ಕ್ರಮಗಳನ್ನು ತೆಗೆದುಕೊಂಡರೆ ರಿಸೋರ್ಸಸ್ ಸಿಕ್ಕುತ್ತದೆ ಅದು ಸಿಕ್ಕಿದರೆ ಒಳ್ಳೆಯದು.

ಕೃಷ್ಣಾ ನದಿಯ ನೀರಿನ ವಿಷಯ. ಕೃಷ್ಣಾ ನದಿಯಲ್ಲಿ ನಮಗೆ 695 ಟಿ.ಎಂ.ಸಿ.ಎಫ್.ಟಿ ನೀರು ಬರಬೇಕು, ಅದನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಹಕ್ಕು ಇದೆ. ಈಗ ನನಗೆ ತಿಳಿದಿರುವ ಪ್ರಕಾರ 400 ಟಿ.ಎಂ.ಸಿ.ಎಫ್.ಟಿ. ನೀರನ್ನು ನಾವು ಉಪಯೋಗ ಮಾಡುತ್ತಿದ್ದೇವೆ. ಇನ್ನು 295 ಎಂ. ಟಿ. ಎಫ್ ಟಿ. ನೀರನ್ನು ಉಪಯೋಗ ಮಾಡಿಕೊಳ್ಳಲು ಏನು ಯೋಜನೆಯನ್ನು ಹಾಕಿದ್ದಾರೆ, ಅದನ್ನು ಯಾವ ರೀತಿ ಉಪಯೋಗಮಾಡಬೇಕು ಎಂದು ಯೋಜನೆಯನ್ನು ಹಾಕಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಸ್ವಲ್ಪ ಸ್ಪಷ್ಟೀಕರಣ ಮಾಡಬೇಕು. If you have no plan to utilise that water I am sure other States that want to take water from our State will say, these people are not utilising even the water allotted. What is the use of giving it to them ಎಂದು ಹೇಳುವಂತಹ ಪರಿಸ್ಥಿತಿ ಬರುತ್ತದೆ. ಅದು ಆಗದ ಹಾಗೆ ನೋಡಿಕೊಳ್ಳಬೇಕು. ಅಪ್ಪರ್‌ಕೃಷ್ಣಾ ಯೋಜನೆಗೆ 150 ಟಿ.ಎಂ.ಸಿ.ಎಫ್.ಟಿ ನೀರನ್ನು ಉಪಯೋಗಮಾಡಿಕೊಳ್ಳಬಹುದು. ಘಟಪ್ರಭಾ ಯೋಜನೆಗೆ 40-45 ಟಿ.ಎಂ.ಸಿ.ಎಫ್.ಟಿ ಬೇಕಾಗುತ್ತವೆ. ಇನ್ನು ಉಳಿದ ನೀರನ್ನು ಯಾವರೀತಿ ಉಪಯೋಗ ಮಾಡಿಕೊಳ್ಳುತ್ತಾರೆಯೋ ಗೊತ್ತಾಗುವುದಿಲ್ಲ. ಇದಕ್ಕೆ ಯೋಜನೆಯನ್ನು ತಯಾರು ಮಾಡಬೇಕು. ಎಂದು ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಎಮರ್ಜನ್ಸಿ ಬಂದಮೇಲೆ ಪೋಲೀಸಿನವರು ಅವಕಾಶವನ್ನು ಮಿಸ್‌ಯೂಜ್ ಮಾಡದ ಹಾಗೆ ನೋಡಿಕೊಳ್ಳಬೇಕು. ನಾವು ಇದುವರೆಗೂ ಈ ಸರ್ಕಾರದ ನೀತಿಗೆ ಮತ್ತು ಅವರ ಕಾರ್ಯಕ್ರಮಕ್ಕೆ ಬೆಂಬಲವನ್ನು ಕೊಟ್ಟುಕೊಂಡು ಬಂದಿದ್ದೇವೆ. ಸರಿಯಾಗಿರುವುದನ್ನು ಸರಿ ಎಂದು ಹೇಳಿದ್ದೇವೆ. ಸರಿ ಇಲ್ಲದೆ ಇರುವುದನ್ನು ಟೀಕೆ ಮಾಡಿದ್ದೇವೆ. ಮೂಲಭೂತವಾಗಿ ಸರ್ಕಾರದ ಕಾರ್ಯಕ್ರಮಗಳಿಗೆ ನಮ್ಮ ಪೂರ್ಣ ಬೆಂಬಲವನ್ನು ಕೊಟ್ಟಿದ್ದೇವೆ. ಆ ರೀತಿ ಬೆಂಬಲ ಕೊಟ್ಟಿರುವ ನಮ್ಮ ಪಕ್ಷದ ಕಾರ್ಯಕರ್ತರನ್ನು ಜಮಖಂಡಿಯಲ್ಲಿ ಜೈಲಿಗೆ ಹಾಕಿದ್ದಾರೆ. ಇದು ಸಮಂಜಸವಲ್ಲ. ಸರ್ಕಾರದ ಮತ್ತು ಶ್ರೀಮತಿ ಇಂಧಿರಾಗಾಂಧಿಯವರ 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರುವುದರಲ್ಲಿ ಬೆಂಬಲ ಕೊಟ್ಟಿದ್ದೇವೆ. ಈ 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಕಾಂಗ್ರೆಸ್ ಕಾರ್ಯಕರ್ತರ ಜೊತೆಯಲ್ಲಿ ಸೇರಿಕೊಂಡು ಕಾರ್ಯಗತ ಮಾಡುವುದಕ್ಕೆ ಹೋದಾಗ ನಮ್ಮ ಪಕ್ಷದವರನ್ನು ಪೋಲೀಸಿನವರು ಹಿಡಿದುಕೊಂಡು ಹೋಗಿ ಡಿ ಐ.ಆರ್. ಪ್ರಕಾರ ಬಿಜಾಪುರದಲ್ಲಿ 25 ಜನಗಳನ್ನು ಜೈಲಿನಲ್ಲಿ ಹಾಕಿದ್ದಾರೆ. ನಮ್ಮ ಪಾರ್ಟಿಯವರಿಗೆ ಪಬ್ಲಿಕ್ ಮೀಟಿಂಗ್ ಮಾಡುವುದಕ್ಕೆ ಮೆರವಣಿಗೆ ಹೋಗುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ, ಶ್ರೀಮಾನ್ ಸಂಜಯ ಗಾಂಧಿಯವರು ಇಲ್ಲಿಗೆ ಬಂದಿದ್ದಾಗ ಮೆರವಣಿಗೆ ಮಾಡಲು ಅವಕಾಶ ಕೊಡಲಾಯಿತು. ಆದರೆ ರಾಷ್ಟ್ರೀಯ ಇಂಜಿನಿಯರಿಂಗ್ ಕಾರ್ಮಿಕರ ಸಮ್ಮೇಳನದ ಸಂದರ್ಭದಲ್ಲಿ ನಡೆಸಬೇಕೆಂದಿದ್ದ ಕಾರ್ಮಿಕರ ಮೆರವಣಿಗೆಗೆ ಅನುಮತಿ ಸಿಗಲಿಲ್ಲ ಇದರ ಬಗ್ಗೆ ತಾರತಮ್ಯ ತೋರಿಸಕೂಡದು ಅಫ್ ಕೋರ್ಸ್, ಮೆರವಣಿಗೆ ಮಾಡುವುದು ಮೂಲಭೂತ ಹಕ್ಕು ಆಗಿರುವುದರಿಂದ ನೀವು ಯೋಚನೆಮಾಡಿ, ಯಾವ ಮೆರವಣಿಗೆ ಎಂದು ತೀರ್ಮಾನಮಾಡಿ. ಸರ್ಕಾರಕ್ಕೆ ವಿರೋಧವಾಗಿ ಮೆರವಣಿಗೆ ಮಾಡಿದರೆ ತಡೆಯಿರಿ. ಕಾರ್ಮಿಕರ ಮೆರವಣಿಗೆಯನ್ನು ತಡೆಯುವುದರಲ್ಲಿ ಸರಿಯಾದ ಧೋರಣೆ ಇಲ್ಲ ಮಾನ್ಯ ಸಿದ್ದಿಕಿಯವರ ಇವರ ಮನೋಭಾವ ಬದಲಾವಣೆಯಾಗಬೇಕು ಎಂದು ಅನೇಕ ನಿದರ್ಶನಗಳನ್ನು ಕೊಟ್ಟು ಹೇಳಿದ್ದಾರೆ, ಆ ರೀತಿ ಮಾಡಬೇಕು ಎಂದು ಕೇಳಿಕೊಂಡು. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ 1976-77ನೇ ಸಾಲಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತಾ ಇದೇ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದುವರೆಗೆ ಎಂದರೆ ನನ್ನ ಹಿಂದಿನ ಭಾಷಣಕಾರರು ಏನೋ Police Rajya ಬಂದುಬಿಟ್ಟಿದೆ- ಅನೇಕ ಅನಾಹುತಗಳು ಆಗಿಬಿಟ್ಟಿವೆ ಎನ್ನುವ ಧಾಟಿಯಲ್ಲಿ ಹೇಳಿದರು. ಗೌರವ ಮರಿಯಾದೆ ಇದೆಲ್ಲಾ ಇದ್ದರೇನೇ ಮನುಷ್ಯ ಎನ್ನುವುದು. ಈ ಇಲಾಖೆಯ ಹೆಸರೇ ''ಯಮಧರ್ಮ'' ಎಂದು, ಇದರಲ್ಲಿ ನ್ಯಾಯವೂ ಇರುತ್ತದೆ, ಧರ್ಮವೂ ಇರುತ್ತದೆ ಸತ್ಯವೂ ಇರುತ್ತದೆ. ಅಶಾಂತಿ ಮತ್ತು ಆಶಿಸ್ತು ದೇಶದಲ್ಲಿದ್ದಾಗ ಇದು ಯಾವ ಅಂಗಡಿಯಲ್ಲೂ ಸಿಕ್ಕುವುದಿಲ್ಲ. ಯಮಧರ್ಮ ಕಪ್ಪಾಗಿದ್ದರೆ ಕಪ್ಪು ಎಂದು ಹೇಳುತ್ತಾರೆ, ಬೆಳ್ಳಗಿದ್ದರೆ ಬೆಳ್ಳಗಿದೆ ಎಂದು ಹೇಳುತ್ತಾರೆ. 1975ರಲ್ಲಿ ಎಷ್ಟು ಕ್ರೈಮ್ಸ್ ಇತ್ತು. 1976ಕ್ಕೆ ಎಷ್ಟಾಗಿದೆ 1974ರಲ್ಲಿ 48,921 ಕ್ರೈಮ್ಸ್ ಇದ್ದದ್ದು 1975ಕ್ಕೆ 45,274 ಆಗಿದೆ, ಇದಕ್ಕೆ ಏನು ಉತ್ತರ. ಎಮರ್ಜನ್ಸಿಯಲ್ಲಿ 50 ಪರ್ಸೆಂಟ್ ಒಪ್ಪಿಕೊಂಡರೂ ಸಹ ಇನ್ನು 50 ಪರ್ಸೆಂಟ್ ಇಲಾಖೆ ಚೆನ್ನಾಗಿ ಕೆಲಸ ನಡೆಸಿದೆ ಎಂದು ಒಪ್ಪಿಕೊಳ್ಳುತ್ತೀರಾ ? It requires a man of iron will and power ಎನ್ನುವುದನ್ನು ಮರೆಯಬಾರದು. ನಿಮ್ಮ ಪಕ್ಷದವರೇ ಆಗಲಿ, ನಮ್ಮ ಪಕ್ಷದವರೇ ಆಗಲೀ ಸರ್ಕಾರ ನಡೆಸಲಿಕ್ಕೆ ಶಿಸ್ತು ಮತ್ತು ಡಿಸಿಪ್ಲಿನ್ ಮಾಡಬೇಕಾದರೆ ಐರನ್ ಮ್ಯಾನ್ ಆಗಲೇಬೇಕು. ನಮ್ಮ ದೇಶದಲ್ಲಿ ಇಂತಕ್ಕ 3ಕೋಟಿ ಜನಕ್ಕೆ 32 ಸಾವಿರ ಚಿಲ್ಲರೆ ಪೋಲೀಸರು ಇದ್ದಾರೆ. ಪ್ರಧಾನಿಯವರು 20 ಅಂಶಗಳ ಕಾರ್ಯಕ್ರಮವನ್ನು ಕಾರ್ಯಗತ ಮಾಡಬೇಕಾಗಿದೆ. ಪ್ರೈಸಸ್ ಕಂಟ್ರೋಲ್ ಮಾಡುವುದು, ಲ್ಯಾಂಡ್ ರಿಫಾರ್ಮ್ ಬಾಂಡೆಡ್ ಲೇಬರರ್ಸ್. ರೂರಲ್ ಇಂಡೆಟೆಡ್‌ನೆಸ್, ಸ್ಟೂಡೆಂಟ್ ಇನ್‌ಡಿಸಿಪ್ಲಿನ್

ಸಿವಿಲ್ ರೈಸ್—ಇದೆಲ್ಲಾ ಕ್ರಾಂತಿಕಾರವಾದ ಕಾರ್ಯಕ್ರಮಗಳು. ವೆಸ್ಟೆಡ್ ಇಂಟರೆಸ್ಟ್ ಮುಂತಾದವರು ದೊಂಬಿ ಎಬ್ಬಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇರುತ್ತಾರೆ. ಮಾನ್ಯ ದೇವೇಗೌಡರನ್ನು 11 ಗಂಟೆ ರಾತ್ರಿಯಲ್ಲಿ ಅರೆಸ್ಟ್ ಮಾಡಿದರು ಎಂದು ಹೇಳಿದರು. ಲಾ ಅಂಡ್ ಆರ್ಡರ್ ಮೇಂಟೈನ್ ಮಾಡಬೇಕಾದರೆ, ನೆಹರೂರವರನ್ನು ಸಹ ರಾತ್ರೋರಾತ್ರಿ ಅರೆಸ್ಟ್ ಮಾಡುತ್ತಿದ್ದರು, ಹಗಲಿನಲ್ಲಿ ಜನಗಳ ಮುಂದೆ ಅರೆಸ್ಟ್ ಮಾಡುತ್ತಿರಲಿಲ್ಲ. ಅದು ನೈಜಕ್ಕೆ ದೂರವಾದದ್ದು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಲಾ ಅಂಡ್ ಆರ್ಡರ್ ಪೊಸಿಷನ್ ಏನಾಯಿತು ?

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು —ಲಾ ಅಂಡ್ ಆರ್ಡರ್ ಪ್ರಶ್ನೆ ಬಂದಾಗ ಶಾಂತಿ ಪರಿಪಾಲನೆ ಮಾಡತಕ್ಕ ಕಾಲದಲ್ಲಿ ಈ ರೀತಿ ಮಾಡಲೇಬೇಕು. ಈಗಿರತಕ್ಕ ಪೋಲೀಸ್ ಫೋರ್ಸ್ ಸಾಲದು ಅದಕ್ಕೋಸ್ಕರ ನಮ್ಮ ಲೋಯರ್ ಕಾನ್‌ಸ್ಟೇಬಲರಿಯನ್ನು ಇನ್ನೂ ಹೆಚ್ಚು ಮಾಡಬೇಕು. ಮಂತ್ರಿ ಮಿನಿಸ್ಟೀರಿಯಲ್ ಸ್ಟಾಫನ್ನು ಹೆಚ್ಚು ಮಾಡಬೇಕು. ಬರವಣಿಗೆ ಕೆಲಸ ಜಾಸ್ತಿಯಾಗಿದೆ ಈಗ ಕಾನ್‌ಸ್ಟೇಬಲಾಗಿ ತೆಗೆದುಕೊಳ್ಳಬೇಕಾದರೆ ಎಸ್. ಎಸ್ ಎಲ್. ಸಿ. ಆದವರನ್ನು ತೆಗೆದುಕೊಳ್ಳುತ್ತಿದ್ದಾರೆ. ಮೊದಲು ಎಸ್. ಎಸ್. ಎಲ್. ಸಿ. ಆಗದೇ ಇದ್ದರೂ ತೆಗೆದುಕೊಳ್ಳುತ್ತಿದ್ದರು. ಇವರಿಗೆ ಟ್ರೈನಿಂಗ್ ಕೊಡುತ್ತಿದ್ದರು. ಇವರಿಗೆ ಹೆಚ್ಚಿನ ಅನುಕೂಲತೆಗಳನ್ನು ಮಾಡಿಕೊಡಬೇಕು ಬೆಂಗಳೂರು ಸಿಟಿಯಲ್ಲಿ ೩೮ ಪೋಲೀಸ್ ಸ್ಟೇಷನ್‌ಗಳಿವೆ ಮತ್ತು ೧೭ ಪೋಲೀಸ್ ಔಟ್ ಪೋಸ್ಟ್ ಇವೆ. ಪೋಲೀಸ್ ಇಲಾಖೆಯನ್ನು ರೀ ಆರ್ಗನೈಸ್ ಮಾಡಬೇಕು ಮತ್ತು ಯೂನಿಫಾರಂ ಪ್ಯಾಟರ್ನ್ ಮಾಡಬೇಕು ಎಂದು ನಾನು ಸಲಹೆ ಕೊಡುತ್ತೇನೆ. ಈಗ ೩ ಯೂನಿಫಾರಂ ಕೊಡುತ್ತಾರೆ. ಒಂದು ಅಗಸನ ಹತ್ತಿರ ಇರುತ್ತದೆ. ಒಂದು ಮನೆಯಲ್ಲಿ ' ರುತ್ತದೆ, ಇನ್ನೊಂದು ಮೈಮೇಲೆ ಇರುತ್ತದೆ. ಈಗ ಕೊಡುವ ಯೂನಿಫಾರಂ ಸಾಲದು. ನಮ್ಮಲ್ಲಿ ಸಿವಿಲ್ ಪೋಲೀಸ್ ೨೧ ಸಾವಿರ ಚಿಲ್ಲರೆ ಇದೆ. ಆರ್ಮ್ಡ್ ಪೋಲೀಸ್ ೧೦ ಸಾವಿರ ಚಿಲ್ಲರೆ ಇದೆ. ೩ ಕೋಟಿ ಜನಕ್ಕೆ ಇದು ಸಾಲದು ಹೆಚ್ಚಿನ ರೀತಿಯಲ್ಲಿ, ಅಧಿಕ ಸಂಖ್ಯೆಯಲ್ಲಿ Batathon ತಯಾರು ಮಾಡಬೇಕು. ಯೂನಿಫಾರಂನಲ್ಲಿ ಖಾಕಿ ಖಾವಿ, ಖಾದಿ—ಈ ಮೂರಕ್ಕೂ ಒಂದು ಪ್ರಾಮುಖ್ಯತೆ ಇದೆ. ಖಾಕಿ ಮಾತ್ರ ಪೂರ್ತಿಯಾಗಿ ಪೋಲೀಸ್ ಆಫಿಷಿಯಲ್ಸ್‌ಗೆ ಅವರ ಕೆಲಸಕ್ಕೆ ಒಳ್ಳೆಯದು. ಬಿ ಟಿ ಎಸ್. ಡ್ರೈವರ್ ಮತ್ತು ಕಂಡಕ್ಟರ್ಸ್ ಖಾಕಿ ಬಟ್ಟೆಯನ್ನು ಹಾಕಿಕೊಳ್ಳುತ್ತಾರೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಕಾಕಿ ಬಟ್ಟೆಯನ್ನು ಹಾಕಿಕೊಂಡಿರುತ್ತಾರೆ ಪೋಲೀಸ್ ಅಧಿಕಾರಿಗಳೂ ಕಾಕಿ ಬಟ್ಟೆಯನ್ನು ಹಾಕಿಕೊಂಡಿರುತ್ತಾರೆ. ಆದುದರಿಂದ ಪೋಲೀಸ್ ಇಲಾಖೆಯವರು ಮಾತ್ರ ಕಾಕಿ ಬಟ್ಟೆಯನ್ನು ಹಾಕಿಕೊಳ್ಳುವಂತೆ ಬದಲಾವಣೆ ಮಾಡಬೇಕು. ಸಿವಿಲ್ ಪೋಲೀಸ್‌ಗೆ ಸಂಪಾದನೆ ಬರುತ್ತದೆ. ರಿಜರ್ವ್ ಪೋಲೀಸ್‌ಗೆ ಏನೂ ಇರುವುದಿಲ್ಲ ಅವರಿಗೆ ಟಿ. ಎ. ಡಿ. ಎ. vehicle ಮೇಂಟನೆನ್ಸ್‌ಗೆ ಎಂದು ೪೦—೫೦ ರೂಪಾಯಿ ಕೊಡುತ್ತಿದ್ದಾರೆ, ಇದು ಸಾಲದು ಎಂದು ಅವರು ಕೇಳುತ್ತಿದ್ದಾರೆ. ಅದನ್ನು ಜಾಸ್ತಿ ಮಾಡುವುದು ಒಳ್ಳೆಯದು ಎಂದು ನಾನು ಒತ್ತಿ ಹೇಳುತ್ತೇನೆ. ಸಿ. ಎ. ಆರ್: ಆಡುಗೋಡಿ ಹತಿರ ಪೋಲಿಸ್ ಲೇನ್ ಇದೆ ಅಲ್ಲಿ ನೀರಿನ ಸೌಲಭ್ಯ ಇಲ್ಲದೆ ತೊಂದರೆ ಪಡುತ್ತಿದ್ದಾರೆ. ಇದುವರೆಗೆ ಪಿ ಡಬ್ಲ್ಯು ಡಿ ಯವರು ಮಾಡುತ್ತಾ ಇದ್ದರು ಅದುದರಿಂದ ಸಾಧ್ಯವಾದಮಟ್ಟಿಗೆ ಬೆಂಗಳೂರು ವಾಟರ್ ಸಪ್ಲೈನವರು ಕನೆಕ್ಷನ್ ಕೊಟ್ಟು ಲೈನನ್ನು ರಿಪೇರಿ ಮಾಡಬೇಕು ರೋಡು ರಿಪೇರಿ ಮಾಡಬೇಕು ಲೈಲ್ಲಿನಿನ ಟಾರು ವಗೈರೆ ಹಾಕಿಸಿ ಸಹಾಯ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಪೋಲೀಸ್ ಹೌಸಿಂಗ್ ಸ್ಕೀಮಿನಲ್ಲಿ ೫೦ ಪರ್ಸೆಂಟ್ ಆಗಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಅನುಕೂಲತೆ ಮಾಡಕೊಡಬೇಕು ಮತ್ತೆ ಆರ್ಮಿಗೆ ಸೇರಿದವರಿಗೆ ಜಮೀನು ಕೊಡುತ್ತಾರೆ. ಮರಣ ಹೊಂದಿದರೆ ಬೆನ್‌ವಲೆಂಟ್ ಫಂಡ್ ಎಂದು ಮಾಡಿರುತ್ತಾರೆ, ಅದರಲ್ಲಿ ಹಣ ಕೊಡುತ್ತಾರೆ. ಈ ರೀತಿ ಕೊಡತಕ್ಕ ಹಣ ಸಾಲದು ಇನ್ನೂ ಹೆಚ್ಚು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪೋಲೀಸ್ ಸೆಂಟ್ರಲ್ ಮೋಟಾರು ಟ್ರಾನ್ಸ್‌ಪೋರ್ಟ್ ವರ್ಕ್‌ಷಾಪ ಬೆಳಗಾಂನಲ್ಲಿ ಇದೆ. ಅದೇರೀತಿ ಬೆಂಗಳೂರಿನಲ್ಲೂ ಮಾಡಬೇಕು ಎಂದು ನಾನು ಹೇಳುತ್ತೇನೆ. ಹಾಗೆಯೇ ಎಕ್ಸ್ ಸರ್ವಿಸ್ ಮನ್ ಮಕ್ಕಳಿಗೆ ವಿದ್ಯಾಭ್ಯಾಸ ಮುಂತಾಗಿ ಕೊಡತಕ್ಕ ಸವಲತ್ತುಗಳನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಈ ಪೋಲೀಸರು ನಿವೃತ್ತರಾದ ಮೇಲೆ ಒದಗಿಸಬೇಕು ಜೊತೆಗೆ ಹಿಂದೆ ಒಂದು ಕಾಲದಲ್ಲಿ ಕ್ರಿಮಿನಾಲಜಿ ಸ್ಟಡಿ ಮಾಡುವುದಕ್ಕೆ Sandut ಡೆಹರಾಡೂನ್ ಮುಂತಾದ ಕಡೆ ಟ್ರೈನಿಂಗ್ ಗೋಸ್ಕರ ಕಳುಹಿಸುತ್ತಿದ್ದರು. ಇನ್ನು ಮುಂದೆಯೂ ಸಹ ಅದೇರೀತಿ ಕಳಿಸಬೇಕು. ಮೊದಲು ಒಬ್ಬ ಸ್ಪೆಷಲ್

ಆಫೀಸರ್ ಹೋಗಿ ಬರುತ್ತಿದ್ದರು. ಈಗ ಆದೂ ಕೂಡ ಕಡಿಮೆಯಾಗಿದೆ. ಪೋಲೀಸ್ ಅಡ್ಮಿನಿಸ್ಟ್ರೇಷನ್ ದಕ್ಷತೆಯಿಂದ ಕೆಲಸ ಮಾಡಬೇಕಾದರೆ ಹೆಚ್ಚಿನ ವಸತಿ ಸೌಕರ್ಯ ಕೊಡಬೇಕು. ಪೋಲೀಸ್ ಅಡ್ಮಿನಿಸ್ಟ್ರೇಷನ್‌ಗೆ ಸಾರ್ವಜನಿಕರೂ ಕೂಡ ಕೋಅಪರೇಟ್ ಮಾಡಬೇಕು. ಜಿ. ಎ. ಡಿ. ಏನು ಇದೆ, ಇದರಲ್ಲಿ ಸಾಕಷ್ಟು ಹೆಚ್ಚಿನ ಅಧಿಕಾರಿವರ್ಗದವರು ಇದ್ದಾರೆ. ಇವರಿಗೆ ನಮ್ಮ ಸ್ಟೇಟ್ ರೆವಿನ್ಯೂವಿನಲ್ಲಿ 1/3 ಭಾಗ ಕೊಡುತ್ತಾ ಇದ್ದೇವೆ. ಅವರೂ ಸಹ ಪ್ರಮೋಷನ್ಸ್, ಟ್ರಾನ್ಸ್‌ಫರ್ಸ್. ಅಪಾಯಿಂಟ್‌ಮೆಂಟ್ ಆಗತಕ್ಕಂಥಾದ್ದು ಕಡಿಮೆಯಾಗಿಲ್ಲ. ಕೆಲವು ಕಡೆ ಲೋಪದೋಷಗಳಿವೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಅಪ್ ಟು ಡೇಟ್ ಮಾಡಿ ಎಂದು ಹೇಳಿದಿರೂ ಕೆಲವು ಕಡೆ ಇನ್ನೂ ಆಗಿಲ್ಲ. ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ಮಾಡುವುದರಲ್ಲೂ ಕೂಡ ಬೇಕಾದಷ್ಟು ತೊಂದರೆಯಾಗಿದೆ. ಎಲ್ಲಾ ಇಲಾಖೆಗಳಿಗೂ ಒಂದು ಕಾಲಮಿತಿಯನ್ನು ಕೊಟ್ಟು ಕೇಡರ್‌ಅಂಡ್ ರೆಕ್ರೂಟ ಮೆಂಟ್ ರೂಲ್ಸನ್ನು ಅಪ್ ಟು ಡೇಟ್ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನೂ ಸರ್ವಿಸ್ ಮ್ಯಾನುವಲ್ಸ್ ಇದೆ. ಇದನ್ನು ಅಪ್ ಟು ಡೇಟ್ ಮ್ಯಾನುವಲ್ಸ್ Manuals ಮಾಡಬೇಕು. ರೆವಿನ್ಯೂ, ಎಕ್ಸೈಸ್ ಮುಜರಾಯಿ ಮ್ಯಾನುವಲ್ಸ್ ಮುಂತಾದುವನ್ನು ಅಪ್ ಟು ಡೇಟ್ ಮಾಡಬೇಕು.

ಇನ್ನು ಸರ್ವಿಸ್ ಟ್ರಿಬ್ಯುನಲ್ ಮಾಡಬೇಕು. ಲ್ಯಾಂಡ್ ಟ್ರಿಬ್ಯೂನಲ್ co-operative ಎಂದು ಪ್ರತಿಯೊಂದಕ್ಕೂ ಒಂದು ಟ್ರಿಬ್ಯುನಲ್ ಇದೆ. ಅದೇರೀತಿ ಸರ್ವಿಸ್ ಮ್ಯಾಟರ್ಸ್‌ಗೆ ಒಂದು ಟ್ರಿಬ್ಯುನಲ್ ಮಾಡಬೇಕು. ಕೋರ್ಟಿಗೆ ಹೋಗಿ, ರಿಟ್ ಪಿಟಿಷನ್ ಹಾಕುವುದಕ್ಕೆ ಬದಲಾಗಿ ಸರ್ವಿಸ್ ಟ್ರಿಬ್ಯುನಲ್ ಮಾಡಬೇಕು. ಮತ್ತು ಜುಡಿಶಿಯಲ್ ಬೋರ್ಡ್ಸ್ ಮಾಡಬೇಕು ಉನ್ನತ ಮಟ್ಟದ ಅಧಿಕಾರಿಯನ್ನು ನೇಮಿಸಬೇಕು ಸಾಧ್ಯವಾದರೆ ಪ್ರತಿಯೊಂದು ರೆವಿನ್ಯೂ ಡಿವಿಜನ್‌ಗಾದರೂ ಒಂದೊಂದು Service Tribunal ಇದ್ದರೆ ಸಾಕು ಸರ್ಕಾರಿ ಅಧಿಕಾರಿಗಳು ಕೋರ್ಟಿಗೆ writ ಹಾಕುವುದು ಕಮ್ಮಿಯಾಗುತ್ತದೆ. ಅಂದರೆ writ ಹಾಕಲು ೬೦೦ ರೂಪಾಯಿಗಳು ಬೇಕಾಗುತ್ತದೆ ಕೆಲವರಿಗೆ ಆ ಹಣ ಒದಗಿಸಿಕೊಳ್ಳುವುದು ಬಹಳ ಕಷ್ಟವಾಗಿರುತ್ತದೆ. ಇಲಾಖೆಯಲ್ಲಿ ವೈಷಮ್ಯ ಉಂಟಾಗುವುದು ಕಮ್ಮಿಯಾಗುತ್ತದೆ ಮೇಲಿನ ಅಧಿಕಾರಿಗಳ ಮೇಲೆ ವಿಶ್ವಾಸಸೌಹಾರ್ದ ಬೆಳೆಯಲು ಸಾಧ್ಯವಾಗುತ್ತದೆ. ಒಟ್ಟಿನಲ್ಲಿ ಸರ್ಕಾರಿ ಕೆಲಸ ಸುಗಮವಾಗಿ ನಡೆಯುತ್ತದೆ ಎಂದು ಹೇಳಲು ಇಚ್ಛಿಸುತ್ತೇನೆ. ಆದ್ದರಿಂದ ಘನ ಸರ್ಕಾರದವರು ಈ Service Tribunal ನ್ನು ಸ್ಥಾಪಿಸಲು ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ A minist ative ಖಾತೆ ಇರುವುದರಿಂದ ಈ ಸಲಹೆಗೆ ಹೆಚ್ಚು ಗಮನ ಕೊಟ್ಟು ಕಾರ್ಯರೂಪಕ್ಕೆ ತರಬೇಕೆಂದು ಸಲಹೆ ಮಾಡುತ್ತೇನೆ

ಹಾಗೆಯೇ ರೆಕ್ರೂಟ್‌ಮೆಂಟ್ ಪಾಲಿಸಿ ವಿಚಾರದಲ್ಲಿ ೧.೪ ಇದ್ದುದನ್ನು ಈಗ ಅದನ್ನು ೧.೧೦ ಎಂದು ಮಾಡಿದ್ದಾರೆ ಇದು ಬಹಳ ಸಂತೋಷದ ವಿಷಯ ಹಿಂದುಳಿದವರಿಗೂ ಒಂದು ಅವಕಾಶ ಸಿಕ್ಕಲಿ, We ghtage ಇವರಿಗೂ ವೇಟೇಜ್ ಕೊಟ್ಟು, ಪಬ್ಲಿಕ್ ಸರ್ವೀಸ್ ಕಮಿಷನ್, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್, ಮತ್ತು ಡಿಸ್ಟ್ರಿಕ್ಟ ರೆಕ್ರೂಟ್‌ಮೆಂಟ್ ಕಮಿಟಿಗಳು ಏನು ಇವೆ, ಅವುಗಳ ಆಯ್ಕೆಯಲ್ಲಿ ಇವರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿದ್ದಾರೆ. ಇದು ಬಹಳ ಸಂತೋಷ. ವಾದವಿಷಯ ಅದರೂ ಸಹ ಸ್ಪೀಡಿ ಇಂಪ್ಲಿಮೆಂಟೇಷನ್ ಆಫ್ ದಿ ಪ್ರೋಗ್ರಾಂ ಆಫ್ ದಿ ಗವರ್ನಮೆಂಟ್ ಗೋಸ್ಕರ ಇವರಿಗೂ ಸಹಾಯಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಫಸಲ್ ಆಲಿ ಕಮಿಷನ್ ಪ್ರಕಾರ ಆಲ್ ಇಂಡಿಯ ಸರ್ವೀಸಸ್ ನವರನ್ನು ೫೦ ಪರ್ಸೆಂಟ್, ನಮ್ಮವರು ಪರ್ಸೆಂಟ್ ಇರಬೇಕು ಎನ್ನುವುದನ್ನು ತಾವು ಒಪ್ಪಿಕೊಂಡಿದ್ದೀರಿ. ಇದರಲ್ಲಿ ತಾವು ಪ್ರೆಷರ್‌ಗೆ ಯೀಲ್ಡ್ ಆಗಬೇಕಾಗುತ್ತದೆ, ನಿಷ್ಪಕ್ಷಪಾತದಿಂದ ಇರುವುದಕ್ಕೆ ಆಗುವುದಿಲ್ಲ. ಅದ್ದರಿಂದ ಇಲ್ಲಿ ಹೆಚ್ಚಿನ ರೀತಿಯಲ್ಲಿ ಕನ್ನಡಿಗರಿಗೆ ಅನುಕೂಲವಾಗುವ ಹಾಗೆ, ಕರ್ನಾಟಕ ಸರ್ವೀಸ್ ಕಮಿಷನ್‌ಗೆ ಉತ್ತೇಜನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪೆನ್‌ಷನ್ ಪೇಪರ್ಸ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಮೊದಲು ಈ ಪೆನ್‌ಷನ್ ಪೇಪರ್ಸ್ ಅನ್ನು Anticipation ಮಾಡಿ ಇಡುತ್ತಿದ್ದರು ಅದರೆ ಇತ್ತೀಚೆಗೆ ಒಬ್ಬ ಅಧಿಕಾರಿ ರಿಟೈರ್ ಆಗಿ ಮೂರು ವರ್ಷವಾದರೂ ಸಹ ಪೆನ್‌ಷೆನ್ ಪೇಪರ್ಸ್ ರೆಡಿಯಾಗಿರುವುದಿಲ್ಲ ಆದರಿಂದ ಅಧಿಕಾರಿಗಳ ಸರ್ವೀಸ್ ಮುಗಿಯುವುದರೊಳಗಾಗಿ ಅವರವರ ಪೆನ್‌ಷನ್ ಪೇಪರ್ಸ್ ಸೆಟಲ್ ಆಗಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಂಕೌಂಟ್ಸ್ ಮತ್ತು ಆಡಿಟ್ ಇವು ಸಾಮಾನ್ಯ ಆಡಳಿತದಿಂದ ಸಪರೇಟ್ ಇರಬೇಕು ಎಂದು ಅನೇಕ ಸಂದರ್ಭದಲ್ಲಿ ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ಇದನ್ನು ಬಿಟ್ಟರೆ ಆಡಿಟರ್ ಜನರಲ್ ಆಫ್ ಇಂಡಿಯಾ ತರಹ ಸಪರೇಟ್ ಮಾಡಿದರೆ ಒಳ್ಳೆಯದು. ಇದರಿಂದ ನಿಷ್ಪಕ್ಷಪಾತವಾಗಿ, ನಿರ್ದಿಷ್ಟ ಕಾಲದಲ್ಲಿ ಒಂದು ತೀರ್ಮಾನ ಬರಲಿಕ್ಕೆ ಸಾಧ್ಯವಾಗುತ್ತದೆ. ಇಂಥ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ.

ಎಂಪ್ಲಾಯಮೆಂಟ್ ಎಕ್ಸ್‌ಚೇಂಜಿನಲ್ಲಿ ೧.೮೦ ಸಾವಿರ ಜನ ರಿಜಿಸ್ಟರ್ ಮಾಡಿದ್ದಾರೆ. ಅದರಲ್ಲಿ ಕೇವಲ ೧೫ ಸಾವಿರ ಜನರಿಗೆ ಮಾತ್ರ ಕೆಲಸಗಳನ್ನು ಕೊಡಲಾಗಿದೆ. ಪ್ರತಿನಿತ್ಯ ನಿರುದ್ಯೋಗಿಗಳು ಕಾಲೇಜುಗಳಿಂದ ಹೊರ ಬೀಳುತ್ತಿದ್ದಾರೆ. ಸರ್ವೀಸಸನ್ನು, ಕಂಟ್ರಾಕ್ಟ್ ಸರ್ವೀಸಸ್ ಎಂದು ಏಕೆ ಮಾಡಬಾರದು ? ಒಂದು ಸಾರಿ ಕೆಲಸಕ್ಕೆ ಸೇರಿದರೆ ಸುಮಾರು ೩೦ ವರ್ಷಗಳವರೆಗೆ ಕೆಲಸದಲ್ಲಿ ಉಳಿಯಬೇಕಾಗುತ್ತದೆ. ಅವರಿಗೆ ೩೦ ವರ್ಷದವರೆಗೆ ಅನ್ನ ಸಿಕ್ಕುತ್ತದೆ ಎನ್ನುವ ಗ್ಯಾರಂಟಿ ಇರುತ್ತದೆ ಮತ್ತು Armed force ಇರುತ್ತದೆ. ಆದ್ದರಿಂದ ಈ ಸರ್ವೀಸಸನ್ನು ಕಂಟ್ರಾಕ್ಟ್ ಆಧಾರದ ಮೇಲೆ ಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಹಾಗೆಯೇ ಬಿ. ಡಿ. ಎ. ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಮಾಡಿರುವುದು ಬಹಳ ಸಂತೋಷ. ಇದಕ್ಕೆ ಹೆಚ್ಚಿನ ಜವಾಬ್ದಾರಿ ಇದೆ. ಬೆಂಗಳೂರು ಬೃಹದಾಕಾರವಾಗಿ ಬೆಳೆಯುತ್ತಿದೆ. ದಿವಂಗತ ಮಾನ್ಯ ಕೆಂಪೇಗೌಡರ ಕನಸನ್ನು ನನಸು ಮಾಡಬೇಕಾಗಿದೆ. ಆದರೆ ಬಿ ಡಿ ಎ ಗೆ ಸರಿಯಾದ ಹಣವನ್ನು ಕೊಟ್ಟಿಲ್ಲ. ಹೆಚ್ಚಿನ ಹಣವನ್ನು ಕೊಡದೆ ಏನೂ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿಯನ್ನು ಮಾಡಿದಂಥ ಕಾಲದಲ್ಲಿ ಸರ್ಕಾರದವರು ಐದು ಕೋಟಿ ರೂಪಾಯಿಗಳನ್ನು ಕೊಟ್ಟರು. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೂ ಸಹ ಎರಡು ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ೩ ಕೋಟಿ ರೂಪಾಯಿಗಳ ಸಾಲವನ್ನೂ ಕೊಟ್ಟರೆ ಇನ್ನು ೧೦ ವರ್ಷಗಳಲ್ಲಿ ತೀರಿಸುತ್ತೇವೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ಸಿಟಿ ಏನು ಇದೆ ಅದು, ಸಿ ಐ ಟಿ ಬಿ ಮತ್ತು ಕಾರ್ಪೊರೇಷನ್ ಏರಿಯಾದಲ್ಲಿ ಪ್ರೈವೇಟ್ ಲ್ಯಾಂಡ್, ರೆವಿನ್ಯೂ ಲ್ಯಾಂಡ್ ಇದೆ. ಇವರಿಗೆಲ್ಲಾ ಕಾಂಪನ್ಸೇಷನ್ ಕೊಡಬೇಕಾದರೆ ನಮಗೆ ಬಹಳ ಹಣ ಕೊಡಬೇಕಾಗುತ್ತದೆ. ಆಮೇಲೆ ಟ್ರಾನ್ಸ್‌ಪೋರ್ಟೇಷನ್, ಕಮ್ಯೂನಿಕೇಷನ್ ಫೆಸಿಲಿಟೀಸ್ ಕೊಡಬೇಕಾಗುತ್ತದೆ. ಇದಕ್ಕೆ ರಿಂಗ್ ರೋಡ್ ಮಾಡಬೇಕಾಗುತ್ತದೆ. ನ್ಯಾಷನಲ್ ಹೈವೇಸ್, ರಿಂಗ್ ರೋಡ್ ಮೊದಲಾದ ಅವಕಾಶಗಳನ್ನು ಕೊಡಬೇಕಾಗುತ್ತದೆ. ಬರೀ ಬಾಯಲ್ಲಿ ನಾವು ಇಲ್ಲಿ ಹೇಳಿದರೆ ಏನೂ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಸರ್ಕಾರದಲ್ಲಿ ಈಗ ಮೂರು ಏಜನ್ಸಿಗಳು ಇವೆ. ಒಂದು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್, ಕಾರ್ಪೊರೇಷನ್ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್, ಮತ್ತು ಸಿ ಐ ಟಿ. ಈ ಮೂರು ಏಜನ್ಸಿಗಳನ್ನು ಒಂದು ಮಾಡಿ ಬೆಂಗಳೂರು ಸಿಟಿ ಗ್ರೀನ್ ಏರಿಯಾ ಬೋರ್ಡ್ ಎಂದು ಮಾಡಿ, ಅದಕ್ಕೆ ಒಬ್ಬರು ಒಳ್ಳೆಯ ಅಧಿಕಾರಿಯನ್ನು ಹಾಕಬೇಕು ಎಂದು ಸಲಹೆ ಮಾಡುತ್ತೇನೆ. ಎರಡು ಮೂರು ಏಜನ್ಸಿಯಿಂದ ಇದನ್ನು ಮಾಡಬೇಕಾದರೆ, ಅಷ್ಟು ಸರಿಯಾಗಿ ಕಾಣುವುದಿಲ್ಲ. ಆದರಿಂದ ಒಂದೇ ಏಜನ್ಸಿಯಿಂದ ಈ ಕೆಲಸ ಮಾಡಬೇಕು ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇದೇ ತರಹ ಪ್ಲಾನಿಂಗ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಪ್ಲಾನಿಂಗ್ ನಮಗೆ ಹೊಸದೇನೂ ಅಲ್ಲ. ಸರ್ ಎಂ ವಿಶ್ವೇಶ್ವರಯ್ಯನವರು ೧೯೩೦ ರಲ್ಲಿಯೇ ನಮ್ಮಗೆ ಪ್ಲಾನಿಂಗ್ ಅನ್ನು ಹೇಳಿಕೊಟ್ಟಿದ್ದಾರೆ. ನಮ್ಮ ಪ್ಲಾನಿಂಗ್‌ನಲ್ಲಿ ಬೇಕಾದಷ್ಟು ಡಿಫೆಕ್ಟ್ಸ್ ಇವೆ. ಇದು ಲ್ಯಾಂಡ್ ರಿಫಾರಮ್ಸ್‌ನಲ್ಲಿ ಆಗಬಹುದು, ಬಾಂಡೆಡ್ ಲೇಬರ್ ವಿಷಯದಲ್ಲಿ ಆಗಬಹುದು, ರಿವರ್ ವಾಟರ್ ಡಿಸ್ಪ್ಯೂಟ್‌ನಲ್ಲಿ ಆಗಬಹುದು. ಇದು ಕೇವಲ ಬೆಂಗಳೂರು ಮೈಸೂರಿಗೆ ಅನ್ವಯಿಸದೆ, ತಾಲ್ಲೂಕು ಮಟ್ಟಕ್ಕೂ ಡೈವರ್ಟ್ ಆಗಬೇಕು. ನಮ್ಮ ಪ್ಲಾನ್‌ಗಳು ಕೆಳಮಟ್ಟದಿಂದ Gross Root Plan ಮೇಲ್ಮಟ್ಟಕ್ಕೆ ಬರಬೇಕು ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡಲು ಇಷ್ಟಪಡುತ್ತೇನೆ. ಹಾಗೆ ತಾವು ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿ ಅದನ್ನು ಜಾರಿಗೆ ತಂದು ನಮ್ಮ ಕರ್ನಾಟಕವನ್ನು ಮಾಡಬೇಕು ಒಂದು ಮಾದರಿ ರಾಜ್ಯವನ್ನಾಗಿ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನೂ ಜೈಲು ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇದನ್ನು ನಗರದ ಮಧ್ಯ ಭಾಗದಿಂದ ತೆಗೆದು ಹೊರಗೆ ಕಳುಹಿಸಬೇಕು. ಇದು ನಗರ ಮಧ್ಯದಲ್ಲಿ ಇರಬೇಕಾಗಿಲ್ಲ ಅಲ್ಲಿರತಕ್ಕ ಖೈದಿಗಳು ಯಾವುದೋ ಕಾರಣದಿಂದ ಜೈಲು ವಾಸವನ್ನು ಅನುಭವಿಸಬೇಕಾಗಿರುತ್ತದೆ. ಅವರು

ಸತ್ಪ್ರಜೆಗಳಾಗಿ, ಜೀವನ ಮಾಡುವುದಕ್ಕೆ ಒಂದು ಸತ್ಸಂಪ್ರದಾಯವನ್ನು, ಒಳ್ಳೆಯ ವಾತಾವರಣವನ್ನು ಕಲ್ಪಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ತಮ್ಮ ಕಾಲಿನ ಮೇಲೆ ತಾವು ನಿಲ್ಲುವಂತಹ ಒಂದು ಉದ್ಯೋಗವನ್ನು ಅವರಿಗೆ ಕಲ್ಪಿಸಿ, ಅವರಿಗೆ ಉತ್ತೇಜನ ಕೊಡಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರಿಗೆ ಅಲ್ಲಿಯ ಕೆಲಸ ಕಾರ್ಯಗಳಿಗೆ ರಾಮೆಟೀರಿಯಲ್ಸ್ ಸಿಕ್ಕುತ್ತಿಲ್ಲ ಎನ್ನುವ ಮಾತು ಇದೆ. ಅವರಿಗೆ ಪಿರಿಯಡ್ ಆಫ್ ರಿಯಲೈಸೇಷನ್ ಬಂದಾಗ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸಿದರೆ ಒಳ್ಳೆಯ ಜೀವನ ಮಾಡುವುದಕ್ಕೆ ಅವಕಾಶವಾಗುತ್ತದೆ' ಅಗ್ರಿಕಲ್ಚರ್, ಕೈಗಾರಿಕೆ, ಮತ್ತು ತೋಟಗಾರಿಕೆ ಇವುಗಳಲ್ಲಿ ವಿಶೇಷವಾದ ತರಬೇತಿ ಅವರಿಗೆ ಕೊಡಬೇಕು. ಒಟ್ಟಿನಲ್ಲಿ ತಮ್ಮ ಕಾಲದಲ್ಲಿ ಪೋಲೀಸ್‌ನವರಿಗೆ ಮಾತ್ರ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ರೂಲ್ ಆಫ್ ಲಾ ಚೆನ್ನಾಗಿ ಆಗಬೇಕು. ಮಾನ್ಯ ಸದಸ್ಯರು ಅನೇಕರು Demoralies ಪೋಲೀಸ್ ರಾಜ್ಯ ಎಂದು ಹೇಳುತ್ತಿದ್ದಾರೆ. ಅಧಿಕಾರಿಗಳು Demoralise' ಆಗುತ್ತಾರೆ. ಅವರು ತಪ್ಪುಮಾಡಿದರೆ ಶಿಕ್ಷೆ ಮಾಡಬೇಕು. Law and o der Maintain ಮಾಡುವುದು ಹೆಚ್ಚಿನ ಗುರುತರವಾದ ಜವಾಬ್ದಾರಿ ಇರುತ್ತದೆ. ಶಾಂತಿ ಮತ್ತು ಶಿಸ್ತು ಪರಿಪಾಲಿಸುವುದು ಬಹುಮುಖ್ಯ ಆಗ ಅವರಿಗೆ ಉತ್ತೇಜನ ಕೊಡಬೇಕು ಅಧಿಕಾರಿಗಳನ್ನು ಕೈಬಿಡಬಾರದು. ಹಾಗೆಬಿಟ್ಟರೆ ಅವರು ನಮಗೆ Protection ಇಲ್ಲ ನಾವು ಏಕೆ ಜವಾಬ್ದಾರಿ ವಹಿಸಬೇಕು ಎಂದು ಉದಾಸೀನವಾಗಿ ಕೆಲಸ ಮಾಡಲು ಪ್ರಯತ್ನಿಸುತ್ತಾರೆ. ಅವರು Demoralise ಆಗದ ಹಾಗೆ ನೋಡಿ ಕೊಳ್ಳಬೇಕೆಂದು ಒತ್ತಿ ಹೇಳುತ್ತೇನೆ ಅದನ್ನು ಲೆಕ್ಕಿಸದೆ ತಾವು ಇವರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ. ಆದರೆ ಇಂಥ ಸನ್ನಿವೇಶದಲ್ಲಿ ಜವಾಬ್ದಾರಿಯನ್ನು ಹೊತ್ತುಕೊಂಡಿರತಕ್ಕ ಅಧಿಕಾರಿಗಳು ಮಾಡಿರತಕ್ಕ ತಪ್ಪನ್ನು ನಾನು ಇವತ್ತು ಎತ್ತಿ ಹಿಡಿಯಬೇಕಾಗಿದೆ. ಸನ್ಮಾನ್ಯ ಅಧ್ಯಕ್ಷರೆ, ಧಾರವಾಡದಲ್ಲಿ ಇರತಕ್ಕ ಬಾರ್‌ಸ್ಟಲ್ ಸ್ಕೂಲ್‌ನಲ್ಲಿ ಇರುವ ಸೂಪರಿಂಟೆಂಡೆಂಟ್ ಅವರು ಅಲ್ಲಿಯ ಅಪರಾಧಿಗಳಿಗೆ ಕೊಡತಕ್ಕ ಆಹಾರದ ಬಗ್ಗೆ, ಇನ್ನೂ ಅನೇಕ ರೀತಿಯಲ್ಲಿ ಮಾಡಿರತಕ್ಕ ಅವ್ಯವಹಾರಗಳು, ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಈಗಾಗಲೇ ಬಂದಿರಬಹುದು. ಅವರು ಅಪರಾಧಿಗಳಿಗೆ ಸರಿಯಾದ ಸೌಲತ್ತುಗಳನ್ನು ಒದಗಿಸಿಕೊಡದೇ ಅದನ್ನೆಲ್ಲಾ ತಾವೇ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಕೇಳಿದ್ದೇನೆ. ಇಂಥ ಅಧಿಕಾರಿ ಗಳ ಮೇಲೆ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ನನಗೆ ಸಾಮಾನ್ಯ ಆಡಳಿತದ ಬಗ್ಗೆ ಮಾತನಾಡಬೇಕು ಎನ್ನುವ ಇಚ್ಛೆ ಇದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕದಲ್ಲಿ ಅತ್ಯಂತ ಉನ್ನತ ಮಟ್ಟದಲ್ಲಿ ರಾಜ್ಯದ ಆಡಳಿತವನ್ನು ಮಾಡುತ್ತಾರೆ, ದೇಶದ ಸರ್ವ ಜನಗಳಿಗೂ ಒಂದೇ ವಿಧವಾದ ಅನುಕೂಲಗಳನ್ನು, ನ್ಯಾಯಗಳನ್ನು ಒದಗಿಸಿಕೊಡುತ್ತಾರೆ ಎನ್ನುವ ನಂಬಿಕೆ ನನ್ನಲ್ಲಿ ಮೊದಲು ಮೂಡಿ ಬಂದಿತ್ತು. ಆದರೆ ಈ ಆಡಳಿತ ವ್ಯವಹಾರಗಳನ್ನು ನೋಡಿದಾಗ ಸಾಮಾನ್ಯ ಜನತೆಗೆ ಕೊಡುವ ಪ್ರಯೋಜನಗಳನ್ನು ನೋಡಿದಾಗ ಸಂಪೂರ್ಣವಾಗಿ ಇವರು ವಿಫಲತೆಯನ್ನು ಹೊಂದಿದಾರೆ ಎಂದು ಹೇಳುತ್ತೇನೆ. ತಾಲ್ಲೂಕು ಮಟ್ಟದಿಂದ ಹಿಡಿದು ಸೆಕ್ರೆಟರಿಯೇಟ್‌ವರೆಗೂ ಅನೇಕ ವಿಳಂಬಗಳನ್ನು ನಾವು ಪ್ರತಿದಿವಸ ನೋಡುತ್ತಿದ್ದೇವೆ. ಇಷ್ಟೇ ಅಲ್ಲ. ಇವತ್ತಿನ ದಿವಸ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಇತ್ಯಾದಿಗಳನ್ನೂ ಕೂಡ ನಾವು ನೋಡುತ್ತಿದ್ದೇವೆ. ತಹಸೀಲ್ದಾರರ ಆಫೀಸಿನಲ್ಲಿರತಕ್ಕ ಜವಾನನಿಂದ ಹಿಡಿದು ಡಿವಿಜನಲ್ ಕಮಿಷನರ್‌ವರೆಗೂ ಇಂಥ ಒಂದು ವಾತಾವರಣ ಇದೆ. ಇಂಥ ಸನ್ನಿವೇಶನಲ್ಲಿ ಈ ಪ್ರಜಾಪ್ರಭುತ್ವದಲ್ಲಿ ನಾನು ಬದ್ಧಕಂಕಣನಾಗಿ ಆಡಳಿತವನ್ನು ನಡೆಸುತ್ತೇನೆ ಎನ್ನುವ ಒಂದು ವಾದವನ್ನು ಇಟ್ಟಾಗ ನಿಮ್ಮ ಮೇಲೆ ನಮಗೆ ಪೂರ್ಣವಾದ ನಂಬಿಕೆ ಹೊರಟು ಹೋಗುತ್ತದೆ ಎನ್ನುವ ಮಾತನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ. ತಾವು ಒಂದು ಕೆಲಸವನ್ನು ಅಂದರೆ ಒಳ್ಳೆಯ ಮಹತ್ವಪೂರ್ಣವಾದ ಕೆಲಸವನ್ನು ಹಾಕಿಕೊಂಡಿರಿ. ಅದು ಏನು ಎಂದರೆ ಗ್ರಾಮಾಂತರ ಪ್ರದೇಶದಲ್ಲಿ ಉಳುವವನಿಗೇ ಭೂಮಿಯನ್ನು ಕೊಡುತ್ತೇವೆ ಎಂದು ತಂದಿರಿ. ಇದು ಬಹಳ ಸಂತೋಷ. ಆದರೆ ಈ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ವಿಲೇಜ್ ಅಕೌಂಟೆಂಟ್‌ಗಳು ಮಾಡಿರುವಂಥಹ ಅನಾಹುತಗಳನ್ನು ನೋಡಿದರೆ ಹೇಳುವುದಕ್ಕಾಗುವುದಿಲ್ಲ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡ ಅವರ ಮೇಲೆ ಯಾವುದೇ ವಿಧವಾದ ಕ್ರಮವನ್ನೂ ಕೂಡ ಇದುವರೆಗೂ ತೆಗೆದುಕೊಂಡಿಲ್ಲ. ತಾವು ಯಾವ ಉದ್ದೇಶದಿಂದ, ಒಳ್ಳೆಯ

ಭಾವನೆಯಿಂದ ಬಡ ಜನಗಳಿಗೆ ಅನುಕೂಲಗಳನ್ನು ಮಾಡಬೇಕೆಂದು ಹೊರಟಿರಿ ಇದನ್ನು ಕಾರ್ಯಗತ ಮಾಡುವಾಗ ಇಂಥ ಸಮಾಜಘಾತುಕ ಅಧಿಕಾರಿಗಳಿಗೆ ರಕ್ಷಣೆ ಕೊಡುವ ಕೆಲಸಕ್ಕೆ ಹೋದಿರಿ. ಇದೇ ನೀವು ಮಾಡಿದ ತಪ್ಪು. ಇವತ್ತು ತಾವು ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದಿರಿ. ಬಹಳ ಸಂತೋಷ. ಇದು ಒಂದು ವಾರ, ಅಥವಾ ೧೫ ದಿವಸ ಇರಬಹುದೆಂದು ಜನ ನಂಬಿದ್ದರು. ಆದರೆ ಇದು ಈಗ ಮಾನಸಿಕವಾಗಿ ಪ್ರಭಾವವನ್ನು ಬೀರಿದೆ. ಈ ತುರ್ತು ಪರಿಸ್ಥಿತಿ ಘೋಷಣೆ ಆದಮೇಲೆ ನೌಕರರು ಆಫೀಸ್‌ಗಳಿಗೆ ಸಕಾಲಕ್ಕೆ ಬರಬೇಕು, ಹೋಗಬೇಕು ಎಂದು ಆಯಿತು ಅಷ್ಟೆ. ಆದರೆ ಕಛೇರಿಯ ಕೆಲಸಕಾರ್ಯಗಳಲ್ಲಿ ತ್ವರಿತಗತಿಯಾಗಲಿ, ಜಾಗ್ರತೆಯಾಗಲಿ ಏನೂ ಕೂಡ ಕಂಡು ಬರುತ್ತಿಲ್ಲ. ತಮಗೆ ಹೇಳಬೇಕಾದರೆ ಇವತ್ತು ತಾಲ್ಲೂಕು ಆಫೀಸ್‌ನಲ್ಲಿ ಹೋಗಿ ನೋಡಿ ಅಲ್ಲಿ ೫ ವರ್ಷಗಳಿಂದ, ೧೦ ವರ್ಷಗಳಿಂದ ಅರ್ಜಿಗಳು ಬಿದ್ದಿವೆ. ಇದರಲ್ಲಿ ಮಾತ್ರ ಏನೂ ಬದಲಾವಣೆ ಆಗಿಲ್ಲ. ತಾವು ತಿಳಿದುಕೊಂಡಮಟ್ಟಿಗೆ ಕಚೇರಿಗಳಲ್ಲಿ ಜಾಗೃತಿ ಉಂಟಾಗಿಲ್ಲ. ಇದನ್ನು ತಾವು ತನಿಖೆ ಮಾಡಿಸಬೇಕು. ಕಛೇರಿಗಳಲ್ಲಿ ಕೆಲಸಕಾರ್ಯಗಳನ್ನು ಮಾಡದ ಅಧಿಕಾರಿಗಳ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಜಾಗೃತಿಯನ್ನು ವಹಿಸಬೇಕು ಎಂಬುದು ನನ್ನ ಮೂಲತಃ ಮಾತು. ಇಷ್ಟೇ ಅಲ್ಲ. ಕೆಲವು ಅಧಿಕಾರಿಗಳು ಬಂದು ಮಾನ್ಯ ಮುಖ್ಯ ಮಂತ್ರಿಗಳನ್ನೋ ಅಥವಾ ನನ್ನಂಥ ಪ್ರಭಾವಿತ ವ್ಯಕ್ತಿಗಳನ್ನೋ ಮರೆ ಹೋಗುತ್ತಾರೆ. ಅಂಥ ಸಂದರ್ಭದಲ್ಲಿ ಅವರ ಮೇಲೆ ಮಂತ್ರಿಗಳ ಕರುಣೆ ಬರುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ಈ ರೀತಿ ಬಂದು ಕೇಳಿಕೊಂಡರು ಎಂದರೆ ನಾವು ಅವರಿಗೆ ಸೋಲಬಾರದು. ಅವರು ಯಾರೇ ಆಗಿರಲಿ, ಎಷ್ಟೇ ಉನ್ನತ ಮಟ್ಟದ ಅಧಿಕಾರಿಯೇ ಆಗಿರಲಿ, ಅವರು ಸಮಾಜಘಾತುಕ ಕೆಲಸಗಳನ್ನು ಮಾಡಿದ್ದರೆ ಅಂಥವುಗೆ ಯಾವ ದಯಾದಾಕ್ಷಿಣ್ಯಗಳನ್ನೂ ತೋರಿಸದೆ ಶಿಕ್ಷೆ ಮಾಡುವುದು ಬರಬೇಕು. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಚೆನ್ನಾಗಿ ತಿಳಿದುಕೊಳ್ಳಬೇಕು. ಅನೇಕಸಾರಿ ನಾನು ಪತ್ರಿಕೆಗಳಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡಿರುವುದನ್ನು ಓದಿದ್ದೇನೆ. ಅವರ ಹೃದಯ ಬಹಳ ಮೃದುವಾಗಿದೆ. ದೇಶದ ಜನಗಳನ್ನು ಒಳ್ಳೆಯ ರೀತಿಯಲ್ಲಿ ತೆಗೆದುಕೊಂಡು ಹೋಗಬೇಕು, ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕು, ಎನ್ನುವ ಆಸೆ ಅವರಿಗಿದೆ, ಆದರೆ ಅದೇಕೋ ತಮ್ಮ ಆಸೆಯನ್ನು ಕಾರ್ಯತಃ ಮಾಡುವಾಗ ತಪ್ಪುತ್ತಾರೆ. ಇವನ್ನು ಹೋಗಲಾಡಿಸಬೇಕು. ಇವತ್ತು ಈ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ನಾನು ಅಲ್ಪ ಸಂಖ್ಯಾತರ ಬಗ್ಗೆ ಹೋರಾಡುತ್ತೇನೆ, ಅವರ ಪರವಾಗಿ ಇರುತ್ತೇನೆ ಎಂದು ಅನೇಕ ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇದು ಬಹಳ ಸಂತೋಷ. ಆದರೆ ಎಷ್ಟು ಮಟ್ಟಿಗೆ ಈ ಅಲ್ಪಸಂಖ್ಯಾತರನ್ನು ಗಮನದಲ್ಲಿಟ್ಟುಕೊಂಡಿದ್ದಾರೆ ಎನ್ನುವ ಬಗ್ಗೆ ನಾನು ಮಾತನಾಡುವುದಿಲ್ಲ. ಒಟ್ಟಿನಲ್ಲಿ ನಾನು ಇಷ್ಟು ಮಾತನ್ನು ಹೇಳಬಯಸುತ್ತೇನೆ. ಅಲ್ಪ ಸಂಖ್ಯಾತರೇ ಇರಲಿ, ಬಹು ಸಂಖ್ಯಾತರೇ ಇರಲಿ ಯಾರೇ ಆಗಲಿ ಕರ್ನಾಟಕದಲ್ಲಿ ಇರುವ ಪ್ರತಿಯೊಬ್ಬರೂ ಕೂಡ ಒಂದೇ ಎನ್ನುವ ಭಾವನೆ ನಿಮ್ಮಲ್ಲಿ ಮೂಡಿಬಂದರೆ ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಒಂದು ಮುಖ್ಯವಾದ ವಿಷಯ ಅಂದರೆ ಪೋಲೀಸ್ ಇಲಾಖೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ನಾಯ್ಡುರವರು ಈ ಪೋಲೀಸ್ ಇಲಾಖೆಯ ಬಗ್ಗೆ ಒಂದು ರೀತಿಯಲ್ಲಿ ಮಾತನಾಡಿದರು. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ಮಾನ್ಯ ಪಾಟೀಲ್ ನಾಗರಾಜ್‌ರವರು, ಮಾನ್ಯ ಅಮೀರ್‌ಗಂರವರು ಮಾತನಾಡುತ್ತಿದ್ದರು. ಆಗ ಮಾನ್ಯ ನಾಯ್ಡುರವರು ಈ ಇಲಾಖೆಯನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿ ಸರಿ ಮಾಡಿಸುತ್ತೇವೆ ಎಂದು ಹೇಳುತ್ತಿದ್ದರು. ಆದರೆ ಪೋಲೀಸ್ ಇಲಾಖೆಯಲ್ಲಿ ಮಾತ್ರ ಯಾವುದೇ ಬದಲಾವಣೆಯೂ ಆಗಿಲ್ಲ. ಅವರ ಉಡುಪುಗಳನ್ನು ಮಾತ್ರ ಬದಲಾವಣೆ ಮಾಡಿದರು. ಮೊದಲು ಅದರು ಚಡ್ಡಿ ಹಾಕಿಕೊಳ್ಳುತ್ತಿದ್ದರು. ಅದನ್ನು ತೆಗೆದು ಈಗ ಅವರಿಗೆ ಪ್ಯಾಂಟ್‌ಗಳನ್ನು ಕೊಟ್ಟಿದ್ದಾರೆ. ಇದು ಕಳ್ಳರನ್ನು ಹಿಡಿಯುವುದಕ್ಕೆ ಹೋಗಬೇಕಾದರೆ ಹಿಡಿಯುತ್ತದೆ. ಇಂಥ ಉಡುಪುಗಳನ್ನು ಪೋಲೀಸ್ ಇನ್‌ಸ್ಪೆಕ್ಟರ್‌ಗಳಿಗೆ ಕೊಡಿ. ಬೇಡ ಎನ್ನುವುದಿಲ್ಲ. ಆದರೆ ಇವರಿಗೆ ಪ್ಯಾಂಟ್ ಕೊಟ್ಟರೆ ಕಳ್ಳರನ್ನು ಹಿಡಿಯುವುದಕ್ಕಾಗುವುದಿಲ್ಲ. ಇದು ನಮಗೆ ಇನ್ನೂ ಜಾಸ್ತಿ ಖರ್ಚು ಬರುತ್ತದೆ. ಅನ್‌ನೆಸಸರಿ ಎಕ್ಸ್‌ಪೆಂಡಿಚರ್ ಸರ್ಕಾರಕ್ಕೆ ಬರುತ್ತಿದೆ. ನೀವು ಈ ಕಾಂಟ್ರಾಕ್ಟ್ ಬಸ್ಸುಗಳನ್ನು ಸರ್ಕಾರಕ್ಕೆ ತೆಗೆದುಕೊಂಡಿರುವುದರಿಂದ ಅವರಿಗೆ ಬರುತ್ತಿದ್ದ ವರಮಾನ ನಿಂತುಹೋಯಿತು. ಈಗ ಅವರು ಕಿರಾಣಿ ಅಂಗಡಿಗಳ ಮುಂದೆ ಹೋಗುತ್ತಾರೆ. ಸ್ವಾಮಿ, ಈ ಪೋಲೀಸರ ದೌರ್ಜನ್ಯ ಎಲ್ಲಿಯವರೆಗೆ ಹೋಗಿದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ತಾವು ಈ ಋಣ ಪರಿಹಾರ ಕಾನೂನು ಎಂದು ತಂದಿದ್ದೀರಿ. ಇದು ಸಂತೋಷ. ಇದರ ಪ್ರಕಾರ ಬಿಜಾಪುರದ ಒಬ್ಬ ಹೆಣ್ಣು ಮಗಳು ಒಂದು ಗಿರವಿ ಅಂಗಡಿಯಲ್ಲಿ ತನ್ನ ಸಾಮಾನುಗಳನ್ನೆಲ್ಲಾ ಒತ್ತೆ ಇಟ್ಟಿದ್ದೇನೆ, ನನಗೆ ಯಾವ ವರಮಾನವೂ ಇಲ್ಲ, ಆ

ಸಾಮಾನುಗಳನ್ನು ಬಿಡಿಸಿಕೊಡಿ ಎಂದು ಬಿಜಾಪುರದ ಗಾಂಧಿಚೌಕದಲ್ಲಿರುವ ಪೋಲೀಸ್ ಸ್ಟೇಷನ್‌ಗೆ ಹೋಗಿ ೧೭ ಐಟಂಗಳ ಒಂದು ಪಟ್ಟಿಯನ್ನು ಮಾಡಿ ಅರ್ಜಿ ಕೊಟ್ಟಳು. ಆ ಅರ್ಜಿಯ ಪ್ರಕಾರ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಸಾಮಾನುಗಳನ್ನು ವಾಪಸ್ಸು ತಂದರು.

ಗಿರವಿ ಇಟ್ಟಿರತಕ್ಕಂಥ ಪದಾರ್ಥಗಳನ್ನೆಲ್ಲ ಅಂಗಡಿಯಿಂದ ವಾಪಸ್ ತಂದದ್ದು ಆಯಿತು. ತಂದ ಪದಾರ್ಥಗಳನ್ನು ಆ ಹೆಂಗಸು ವಾಪಸ್ ಕೊಡಿ ಎಂದು ಕೇಳಿದಾಗ ಅಲ್ಲಿಯ ಸಬ್‌ಇನ್‌ಸ್ಪೆಕ್ಟರ್ ೨೦೦ ರೂಪಾಯಿಗಳನ್ನು ಕೊಟ್ಟರೆ ಕೊಡುತ್ತೇವೆಂದು ತಿಳಿಸಿದರು. ಸಾಮಾನ್ಯ ಒಬ್ಬ ಹೆಂಗಸು ಈ ರೀತಿಯಾದ ತೊಂದರೆಗೆ ಒಳಗಾದುದನ್ನು ನೋಡಿದರೆ ಪೋಲೀಸ್ ಇಲಾಖೆಯ ವರ್ತನೆಯನ್ನು ನಿಜವಾಗಿಯೂ ಕೂಡ ಖಂಡಿಸಬೇಕಾಗುತ್ತದೆ.

4-30 P.M.

MR. DEPUTY SPEAKER.—The Sub Inspector is not here to defend his case.

SRI T. M. MANJUNATH.—I will give instances. That is all.

MR. DEPUTY SPEAKER.—Has the Hon'ble Member already handed over that petition to the I.G.P. or Chief Minister earlier ?

SRI T. M. MANJUNATH.—She has given a complaint to higher authorities.

MR. DEPUTY SPEAKER.—That is a petition.

SRI T. M. MANJUNATH.—I will send it to the Chief Minister.

ದಫೇದಾರ್ ಶಿವಣ್ಣ ಎಂಬುವರು ಹೊನ್ನಾಳಿ ಪೋಲೀಸ್ ಸ್ಟೇಶನ್‌ನಲ್ಲಿ ಇರುತ್ತಾರೆ ಅವರು ಯಾರು ಮಾಲಿಕರು ಬಂದು ದೂರು ಕೊಡುತ್ತಾರೆ ಅವರನ್ನು ಕೂಡ ದಸ್ತಗಿರಿ ಮಾಡಿರುವ ಪ್ರಕರಣವನ್ನು ಹೇಳಬೇಕಾಗುತ್ತದೆ.

MR. DEPUTY SPEAKER.—I would urge upon the Hon'ble Member Mr. Manjunath to restrain himself, not to refer to any names. If he makes an allegation against persons who are not capable of defending themselves in the House, under the Rules of Procedure, I cannot permit him. In seldom cases, I may permit. I can permit him if he has already given petitions to the I.G.P. or the Chief Minister.

ಶ್ರೀ ಡಿ. ದೇವರಾಜ ಅರಸ್.—ಇಂಡಿವಿಜ್ಯುಯಲ್ ಕೇಸಸ್ ಇದ್ದರೆ ಅದನ್ನು ಬರೆದು ತಿಳಿಸುವ ಕೆಲಸ ಮಾಡುವುದಿಲ್ಲ. ಇಲ್ಲಿ ಬಂದು ಹೇಳಿದರೆ ಹೇಗೆ ?

MR. DEPUTY SPEAKER.—If he flings a surprise having all the information, it may be possible to get the allegations verified even with a flying trunk call. That is why it would be better to restrain himself and discuss the matter privately with the concernd authorities.

ಶ್ರೀ ಟಿ. ಎಂ. ಮಂಜುನಾಥ್.—ಪೋಲೀಸರ ಬಗ್ಗೆ ಭ್ರಷ್ಟಾಚಾರ ಜಾಸ್ತಿಯಾಗಿದೆ ಎನ್ನುವುದು ಸರ್ವೇಸಾಮಾನ್ಯವಾದ ಮಾತಾಗಿರುತ್ತದೆ. ಅವರು ಯಾರ ಹತ್ತಿರವೂ ಸಹಾ ಲಂಚವನ್ನು ತೆಗೆದುಕೊಳ್ಳು ವುದು ಬಿಡುವುದಿಲ್ಲ. ಕಂಪ್ಲೈಂಟ್ ತೆಗೆದುಕೊಂಡು ಬಂದವರ ಹತ್ತಿರವೂ ಲಂಚ ತೆಗೆದುಕೊಳ್ಳುವುದು ಬಿಡುವುದಿಲ್ಲ, ಅಪರಾಧಿಗಳಿಂದಲೂ ಲಂಚ ತೆಗೆದುಕೊಳ್ಳುವುದನ್ನು ಬಿಡುವುದಿಲ್ಲ. ಈ ತರಹ ಮೋಸ ಜನತೆಗೆ ಉಂಟಾಗುತ್ತಿರುತ್ತದೆ. ಈಗ ಇಟ್ಟಿರುವ ಪೋಲೀಸ್ ಇಲಾಖೆಯ ವರದಿಯನ್ನು ನೋಡಿದರೆ, ಅಡ್ಮಿನಿಸ್ಟ್ರೇ

ಟೇವ್ ಪರ್ಪಸ್‌ಗಾಗಿ ರೇಂಜಸ್ ಮಾಡಿ ಡಿವಿಜನ್‌ಗಳಾಗಿ ವಿಂಗಡಿಸಿದ್ದೇವೆಂದು ಹೇಳಿದ್ದೀರಿ. ನಮ್ಮಲ್ಲಿ ಪೊಲೀಸ್ ರೇಂಜ್ ಎಂದು ಮಾಡಿದ್ದೀರಿ. ಯಾರಾದರೂ ಕಂಪ್ಲೈಂಟ್ ಕೊಡಬೇಕಾದರೆ ಹತ್ತಿರದಲ್ಲಿರುವ ಪೋಲೀಸ್‌ಸ್ಟೇಷನ್ ಬಿಟ್ಟು ಆಯಾ ರೇಂಜ್ ಅಂದರೆ ಅದು ೬–೭ ಮೈಲಿ ದೂರವಿದ್ದರೂ ಅಲ್ಲಿಗೇನೇ ಹೋಗಿ ದೂರು ಕೊಡಬೇಕಾಗಿರುತ್ತದೆ. ಮೈಸೂರು ಡಿ.ವೈ ಎಸ್ ಪಿ. ಯವರು ೪೦–೫೦ ಮೈಲಿಗಳಿಗೆ ಒಂದು ಡಿವಿಜನ್ ಆಗಿ ಮಾಡಿದ್ದಾರೆ. ಆದ್ದರಿಂದ ಮತ್ತೊಮ್ಮೆ ಇದನ್ನು ಪರಿಶೀಲನೆ ಮಾಡಿ ರೇಂಜ್‌ಗಳನ್ನು ಮಾಡುವಾಗ ಡಿವಿಶನ್‌ಗಳನ್ನು ಮಾಡುವಾಗ ಕೇಂದ್ರವಾಗಿರತಕ್ಕ ಸ್ಥಳವನ್ನು ಆರಿಸಿಕೊಂಡು ಮಾಡಬೇಕೆಂದು ಸಲಹೆ ಕೊಡಬಯಸುತ್ತೇನೆ. ಇನ್ನು ಕೊಟ್ಟಿರುವ ಯೋಜನೆಯ ವರದಿಯನ್ನು ಓದಿ ಬಹಳ ಸಂತೋಷವಾಯಿತು. ಮಾನ್ಯ ಮುಖ್ಯ ಮಂತ್ರಿಗಳು ತಾವು ಅಧಿಕಾರ ಗದ್ದುಗೆಯನ್ನು ಏರಿದ ಮೇಲೆ ಕರ್ನಾಟಕ ರಾಜ್ಯವನ್ನು ಮುಂದುವರಿಸಿಕೊಂಡು ಬರಲಿಕ್ಕೆ ಅನೇಕ ವಿಧವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಂದಿದ್ದಾರೆ. ಆಹಾರ ಕ್ಷೇತ್ರದಲ್ಲಿಯಾಗಲಿ, ವ್ಯವಸಾಯ ಕ್ಷೇತ್ರದಲ್ಲಿಯಾಗಲಿ, ಕೈಗಾರಿಕಾ ಕ್ಷೇತ್ರದಲ್ಲಿಯಾಗಲಿ ಮತ್ತು ಇನ್ನಿತರೆ ಕ್ಷೇತ್ರದಲ್ಲಿಗಳಲ್ಲಿಯೂ ಸಹ ಪ್ರಬುದ್ಧಮಾನಕ್ಕೆ ಬರತಕ್ಕಂಥ ಕಾರ್ಯಕ್ರಮಗಳನ್ನು ಮಾಡಿರುವುದಕ್ಕೆ ಒಪ್ಪಿಗೆಯನ್ನು ವ್ಯಕ್ತಪಡಿಸಬೇಕಾಗಿದೆ. ಆದರೆ ಇಷ್ಟೊಂದು ಸಾಮಾಜಿಕವಾಗಿ ಆರ್ಥಿಕವಾಗಿ ಜನತೆಯನ್ನು ಮುಂದುವರಿಸುವ ಕೆಲಸವನ್ನು ಮಾಡಿದ್ದೇವೆಂದು ಹೇಳಿದ ಪಕ್ಷದವರಿಯೂ ಕೂಡ ಸಾಮಾನ್ಯ ಜನತೆಯ ಜೀವನಮಟ್ಟ ಇನ್ನೂ ಕಷ್ಟದಿಸೆಯಲ್ಲಿದೆ ಎನ್ನತಕ್ಕ ಮಾತನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ ಎನ್ನುವುದು ನನ್ನ ಭಾವನೆಯಾಗಿದೆ. ಇಷ್ಟೊಂದು ಅಭಿವೃದ್ಧಿಯಾದರೂ ಜನತೆಯಲ್ಲಿ ಕಷ್ಟಗಳು ಹಿಂದಿನದಕ್ಕಿಂತಲೂ ಜಾಸ್ತಿಯಾಗಿರುತ್ತದೆ. ಅದರ ಬಗ್ಗೆ ಅಂಕಿ ಅಂಶಗಳೂ ಸಹ ಇರುತ್ತದೆ. ಆ ಒಂದು ದೃಷ್ಟಿಯಿಂದ ಇದಕ್ಕೆ ಬೇಕಾಗಿರತಕ್ಕ ಯೋಜನೆಗಳನ್ನು ತಾವು ಹಾಕಿಕೊಳ್ಳಬೇಕೆಂಬುದೇ ನನ್ನ ಮೂಲ ಉದ್ದೇಶವಾಗಿರುತ್ತದೆ.

ಪ್ಲಾನಿಂಗ್ ವಿಚಾರದಲ್ಲಿ ಹೇಳುವುದಾದರೆ, ತಾಲ್ಲೂಕ್‌ಗಳಲ್ಲಿಯಾಗಲಿ, ಡಿಸ್ಟ್ರಿಕ್ಟ್‌ನಲ್ಲಿಯಾಗಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಮಾನತೆಯನ್ನು ಕಲ್ಪಿಸುವ ಅಂಶವನ್ನು ಇಟ್ಟುಕೊಂಡು ಕಾರ್ಯಾಚರಣೆಯನ್ನು ಮಾಡಬೇಕಾಗುತ್ತದೆ. ಅದರ ಮುಖಾಂತರವಾಗಿ ಯೋಜನೆಗಳನ್ನು ತಯಾರು ಮಾಡಬೇಕಾಗುತ್ತದೆಂದು ತಮ್ಮ ಮುಖಾಂತರ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ ಸರಾಸರಿ ೪೫ ಪರ್ಸೆಂಟ್ ಇರಿಗೇಷನ್ ಆನುಕೂಲತೆ ಇರುತ್ತದೆ. ೪೫ ಪರ್ಸೆಂಟ್ ನೀರಾವರಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ ಇದ್ದಾರೆ. ಅದೇ ರೀತಿಯಲ್ಲಿ ಸಾಧ್ಯವಾದ ಮಟ್ಟಿಗೆ ನಾನು ಹೇಳತಕ್ಕದು ಏನೆಂದರೆ ಹೇಮಾವತಿ ನೀರಾವರಿ ಚಾನಲ್‌ಗಳನ್ನು ಮಾಡುವ ಬಗ್ಗೆ ಯೋಜನೆಗಳನ್ನು ಏನು ಹಾಕಿಕೊಂಡಿದ್ದೀರಿ. ಅವರಲ್ಲಿ ನಮ್ಮ ತಾಲ್ಲೂಕ್ಕಾದ ಹೊನ್ನಾಳಿ ಸಂಬಂಧಪಟ್ಟಂತೆ ಹೇಳುವುದಾದರೆ ಅಗತ್ಯವಾಗಿ ಹೆಚ್ಚಿಗೆ ನೀರನ್ನು ಕೊಡತಕ್ಕ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಸೋಶಿಯಲ್ ಎಕನಾಮಿಕ್ ಜಸ್ಟೀಸ್ ಟು ಎವೆರಿ ಪೀಪಲ್ ಆಫ್ ಕರ್ನಾಟಕ ಎಂದು ಹೇಳಬೇಕಾದರೆ ನಮ್ಮ ತಾಲ್ಲೂಕ್ಕಿಗೆ ಚಾನಲ್‌ಗಳನ್ನು ತೆಗೆಸಿ ನೀರನ್ನು ಲಿಫ್ಟ್ ಮಾಡಿದರೆ ಹೆಚ್ಚಿಗೆ ಕೊಟ್ಟರೆ ಬೆಟರ್‌ಮೆಂಟ್ ಲೆವಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲ ಜನರು ಮುಂದೆ ಬರುತ್ತಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ತಿಪಟೂರು ತಾಲ್ಲೂಕಿನ ಜನರು ನಮ್ಮ ತೋಟಗಳು ಹೋಗುತ್ತವೆ. ನಮಗೆ ನೀರು ಕೊಡಬೇಡಿ ಎಂದು ಹೇಳುತ್ತಾರೆ.

ಶ್ರೀ ಟಿ. ಎಂ. ಮಂಜುನಾಥ್.—ತಿಪಟೂರು ತಾಲ್ಲೂಕಿನಲ್ಲಿ ೧೭ ಸಾವಿರ ೨೦ ಸಾವಿರ ಎಕರೆಗಳಷ್ಟು ತೆಂಗಿನ ತೋಟ ಇರಬಹುದು. ಉಳಿದ ೧ ಲಕ್ಷ ೩೦ ಸಾವಿರ ಎಕರೆಗಳಷ್ಟು ಬಂಜರು ಭೂಮಿ ಇರುತ್ತದೆ. ಇಲ್ಲಿ ನೀರಾವರಿ ಕಡಿಮೆ ಇರುತ್ತದೆ ಎನ್ನುವುದು ಮಾನ್ಯ ಮುಖ್ಯ ಮಂತ್ರಿಗಳಿಗೂ ತಿಳಿದಂತ ವಿಷಯವಾಗಿರುತ್ತದೆ. ಮಾನ್ಯ ಮುಖ್ಯ ಮಂತ್ರಿಯವರಿಗೂ ತಿಳಿದಿರುತ್ತದೆ ಎಲ್ಲೆಲ್ಲಿಗೆ ಎಷ್ಟೆಷ್ಟು ನೀರನ್ನು ಕೊಡಬೇಕೆಂಬುದು. ಅವರು ಆತ್ಮ ಶುದ್ಧಿಯಿಂದ ಕೆಲಸ ಮಾಡಬೇಕಾಗಿರುತ್ತದೆ. ಯಾರಾದರು ಹೋಗಿ ಕಿವಿ ಚುಚ್ಚಿ ಅಲ್ಲಿಗೆ ಬೇಡ ಇಲ್ಲಿಗೆ ಬೇಕು ಎಂದರೆ ಅದಕ್ಕೆಲ್ಲ ತಮ್ಮ ದೃಷ್ಟಿಯನ್ನು ಹರಿಸಬಾರದೆಂಬುದೇ ನನ್ನ ಕಳಕಳಿಯ ಪ್ರಾರ್ಥನೆಯಾಗಿರುತ್ತದೆ. ಎಲ್ಲರಿಗೂ ಒಂದೇ ದೃಷ್ಟಿಯಿಂದ ಇರಬೇಕೆನ್ನುವುದೇ ನನ್ನ ವಾದವಾಗಿರುತ್ತದೆ. ಪ್ರಧಾನ ಮಂತ್ರಿಯವರ ೨೦ ಅಂಶಗಳ ಕಾರ್ಯಕ್ರಮವನ್ನು ಕಾರ್ಯಾಚರಣೆಗೆ ತಂದು ಜೀತ ಪದ್ಧತಿಯನ್ನು ಕೊನೆಗಾಣಿಸಿದ್ದೀರಿ, ಸಣ್ಣ ಸಣ್ಣ ರೈತರ ಋಣ ಪರಿಹಾರ ಮಾಡಿದ್ದೀರಿ, ಭೂಮಿ

ಯನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೀರಿ. ಇವೆಲ್ಲ ಕಾರ್ಯಕ್ರಮಗಳನ್ನು ಕಾರ್ಯಾಚರಣೆ ತರಲು ನಿಮ್ಮ ಪಕ್ಷದವರಿಗೆ ಬಿಟ್ಟಿರುತ್ತೀರಿ ನಾವೇನಾದರೂ ಮಾಡುವುದಕ್ಕೆ ಹೋದರೆ ನಮ್ಮ ಮೇಲೆ ರಿಪೋರ್ಟ್ ಮಾಡುತ್ತಾರೆ. ಈವತ್ತು ಏನು ಹೊಗಳಿಕೊಳ್ಳುತ್ತಿದ್ದಾರೆ ಅದು ಹಿಂದಿನಿಂದಲೂ ಇದೆ. ಬಸವಣ್ಣನವರ ಕಾಲದಲ್ಲಿ ಯಾವ ರೀತಿ ಸರ್ವಸಮಾನವಾದಹಕ್ಕುಗಳನ್ನು ಉಂಟುಮಾಡುವುದಕ್ಕೆ ಹೊರಟ್ಟಿದ್ದರೋ ಅದೇ ರೀತಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅಭಿನವ ಬಸವಣ್ಣನವರಾಗಿ ಸರ್ವಸಮಾನವಾದ ಹಕ್ಕುಗಳನ್ನು ಉಂಟು ಮಾಡುತ್ತಾರೆಂದು ನಾನು ನಂಬಿಕೊಂಡಿದ್ದೆ. ಆದರೆ ಇದರಲ್ಲಿ ಸ್ವಲ್ಪ ಎಡವಟ್ಟಾಗಿದೆ ಇದು ಆಗಬಾರದೆಂದೇ ನನ್ನ ಅಭಿಪ್ರಾಯವಾಗಿರುತ್ತದೆ

ಇನ್ನೊಂದು ವಿಚಾರ ಬಹಳ ಸ್ವಾರಸ್ಯವಾದ ವಿಚಾರವೆಂದರೆ ಮಂತ್ರಿವರ್ಯರು ತಿಂಗಳು ತಿಂಗಳು ಟೂರ್ ಬರುತ್ತಾರೆ, ಬರತಕ್ಕಂಥ ಮಂತ್ರಿಗಳಿಗೆ ಜನ ಸಂದರ್ಶನವೇ ಇರುವುದಿಲ್ಲ. ಟಿ.ಬಿ.ಯಲ್ಲಿ ಇಳಿದುಕೊಂಡಾ ಜನರ ಕಷ್ಟಸುಖಗಳನ್ನು ಹೇಳಿಕೊಳ್ಳುವುದಕ್ಕೆ ಬಂದರೆ ಅವರು ತಮ್ಮ ಮುಖವನ್ನೇ ತೋರಿಸುವುದಿಲ್ಲ ; ಅವರಿಗೆ ಅವಕಾಶವನ್ನೇ ಕೊಡುವುದಿಲ್ಲ. ಯಾವುದೋ ಫಂಕ್ಷನ್ ಮಾಡಬೇಕೆಂದು ಯಾರಾದರೂ ಕಾಂಗ್ರೆಸ್ ಪಾರ್ಟಿಯವರಾಗಲೀ, ಬೇರೆ ಪಾರ್ಟಿಯವರು ಕರೆದಿದ್ದಾರೆ ಎಂದರೆ ಮಂತ್ರಿಗಳು ಅಲ್ಲಿಗೆ ಹೋಗುತ್ತಾರೆ. ಮತ್ತೆ ಬೇಗ ಬರುವುದಿಲ್ಲ ಹೀಗೆ ಆಗಬಾರದು. ಇವರು ನಿಮ್ಮ ಮಂತ್ರಿಗಳಲ್ಲ, ಇಡೀ ದೇಶದ ಮಂತ್ರಿಗಳು. ನೀವು ಮಾಡತಕ್ಕ ಕೆಟ್ಟ ವಿಚಾರಗಳಿಗೆ ಅವರು ಹೋಗಬಾರದು. ನಮ್ಮ ಮಂತ್ರಿಗಳೂ ನಿಮ್ಮ ಮಂತ್ರಿಗಳೂ ಆಗಿರುವವರನ್ನು ಫ್ರೀಯಾಗಿ ಬಿಡಿ. ಇನ್ನಾದರೂ ಮಂತ್ರಿಗಳಾಗಿ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ ಎಂದು ಹೇಳುತ್ತಾ ಈ ಬೇಡಿಕೆಗಳು ಸದ್ವಿನಿಯೋಗವಾಗಲಿ, ದುರ್ವಿನಿಯೋಗ ಆಗಬಾರದು ಎಂದು ಹೇಳಿ ಅಧ್ಯಕ್ಷರು ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಜಿ. ಬಣಕಾರ್ (ಹಿರೇ ಕೆರೂರ್) ಸನ್ಮಾನ್ಯ ಅಧ್ಯಕ್ಷರೇ ಇಂದಿನ ದಿವಸ ರಾಜ್ಯದ ಮುಖ್ಯಮಂತ್ರಿಯವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಹಾಗೂ ದೇಶದಲ್ಲಿ ತುರ್ತುಪರಿಸ್ಥಿತಿ ಇದೆ. ಇವತ್ತಿನದಿವಸ ಈ ಒಂದು ತುರ್ತುಪರಿಸ್ಥಿತಿ ಇರುವ ಸಂದರ್ಭದಲ್ಲಿ ಆಡಳಿತ ಕೂಡ ಅತ್ಯುತ್ತಮವಾಗಿ ಚೊಕ್ಕಟವಾಗಿ ಪ್ರಗತಿ ಶೀಲವಾಗಿ ನಡೆದಿದೆ ಎಂದರೆ ತಪ್ಪಾಗುವುದಿಲ್ಲ. ಇವತ್ತಿನದಿವಸ ತುರ್ತುಪರಿಸ್ಥಿತಿ ಇರದೇ ಇದ್ದಿದ್ದರೆ ಇಷ್ಟೊಂದು ಉತ್ತಮರೀತಿಯಿಂದ ಆಡಳಿತ ನಡೆಯುತ್ತಾ ಇರಲಿಲ್ಲ ಎಂದು ಅನ್ನಿಸುತ್ತದೆ. ಈ ದೇಶದಲ್ಲಿ ವಿರೋಧೀ ಮನೋಭಾವವನ್ನು ಉಳ್ಳಂಥ ಜನರು ಇಡೀ ಹಿಂದೂಸ್ತಾನದಲ್ಲಿ ಇಡೀ ದೇಶದಲ್ಲಿ ಅಲ್ಲೋಲ ಕಲ್ಲೋಲ ವಾತಾವರಣವನ್ನು ಉಂಟು ಮಾಡತಕ್ಕಂಥ ಮತ್ತು ಬಾಂಗ್ಲಾ ದೇಶಕ್ಕೆ ಬಂದಂತ ಪರಿಸ್ಥಿತಿ ಯನ್ನು ದೇಶದಲ್ಲಿ ತರುವುದಕ್ಕೆ ಇಚ್ಛೆಪಟ್ಟಾಗ ಅದನ್ನು ಸದೆಬಡಿದು ತುರ್ತುಪರಿಸ್ಥಿತಿಯನ್ನು ದೇಶದಲ್ಲಿ ಜಾರಿಗೆ ತಂದು ಈ 20 ಅಂಶಗಳ ಕಾರ್ಯಕ್ರಮವನ್ನು ಇಡೀ ದೇಶದಲ್ಲಿ ಜಾರಿಗೆ ತಂದಿದ್ದಾರೆ ಅದಕ್ಕೆ ಅನುಗುಣವಾಗಿ ರಾಜ್ಯದ ಮುಖ್ಯಮಂತ್ರಿಗಳು 20 ಅಂಶದ ಕಾರ್ಯಕ್ರಮನ್ನು ಅತೀ ಚುರುಕಾಗಿ ನಡೆಸಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ಇವತ್ತಿನದಿವಸ ಆಡಳಿತದ ಪರಿಸ್ಥಿಯಲ್ಲಿ 528 ಮಂದಿ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದಾರೆಂದು ಬೆಳಗಿನ ಪ್ರಶ್ನೋತ್ತರ ವೇಳೆಗೆ ಹೇಳಿದರು ಎಷ್ಟು ಚುರುಕಾಗಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಇದು ಎತ್ತಿ ತೋರಿಸುತ್ತದೆ. ಇದೇ ವಿಷಯದಲ್ಲಿ ಪ್ರತಿಯೊಂದು ಮಟ್ಟದಲ್ಲೂ ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಆಡಳಿತ ಎನಿದೆ ಇದು ಗ್ರಾಮಾಂತರ ಮಟ್ಟದಲ್ಲಿ ಹೆಚ್ಚು ಚುರುಕಾಗಿ ನಡೆಯಬೇಕೆಂಬುದೇ ನನ್ನ ಇಷ್ಟ. ನಮ್ಮ ನೆಚ್ಚಿನ ಮುಖ್ಯಮಂತ್ರಿಯವರು ರಾಜ್ಯದ ಪ್ರಧಾನ ಕಾರ್ಯದರ್ಶಿಯವರ ಮುಖಾಂತರ ಇಡೀ ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಹಿಡಿದು ಅತ್ಯುತ್ತಮವಾಗಿ ಆಡಳಿತವನ್ನು ನಡೆಸುತ್ತಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಹೇಳಬೇಕು ಎಂದರೆ ಆಡಳಿತವನ್ನು ಚೆನ್ನಾಗಿ ನಡೆಸಿದ್ದಾರೆ ರಾಜ್ಯಮಟ್ಟದಲ್ಲಿಯೂ ಚೆನ್ನಾಗಿ ನಡೆಸಿದ್ದಾರೆ. ಇಲ್ಲಿ ಐ. ಎ ಎಸ್ ಅಧಿಕಾರಿಗಳು ಡೈನಾಮಿಕ್ ಆಗಿ ಇದ್ದಾರೆ ಇಲ್ಲಿ ಒಳ್ಳೆಯ ಕೆಲಸಗಳು ನಡೆದಿದೆ. ತಾಲ್ಲೂಕು ಮಟ್ಟದಲ್ಲಿ ತಹಶಿಲ್ದಾರ ಮತ್ತು ಆಯಾಯ ವಿಭಾಗದ ಅಸಿಸ್ಟೆಂಟ್ ಕಮೀಷನರ್ ಒಳ್ಳೆಯವರಾಗಿದ್ದಾರೆ, ಮತ್ತು ಚುರುಕಾಗಿದ್ದಾರೆ. ಇಲ್ಲಿಯೂ ಕೂಡ ಒಳ್ಳೆಯ ರೀತಿಯಲ್ಲಿ ಚುರುಕಾಗಿ ಕಾರ್ಯಕ್ರಮ ನಡೆದಿದೆ. ಇನ್ನು ಐ. ಎ. ಎಸ್. ಅಧಿಕಾರಿಗಳ ಬಗ್ಗೆ ಹೇಳಬೇಕಾದರೆ ಜಿಮಲ್ಬೈಟ್ ಅಧಿಕಾರಿಗಳು ಇದ್ದಾರೆಂದು ಹೇಳಿದರೆ ತಪ್ಪಾಗಲಾರದು. ಹಿಂದಿನ ಇತಿಹಾಸವನ್ನು ನೋಡಿದರೆ ಯೂರೋಪಿಯನ್ನರ ಕಾಲದಿಂದ ಈಸ್ಟ್ ಇಂಡಿಯಾ ಕಂಪನಿಯವರ ಕಾಲದಿಂದ ಈ ಐ. ಎ. ಎಸ್. ಅಧಿಕಾರಿಗಳ ಮುಖಾಂತರ ಆಡಳಿತವನ್ನು ನಡೆಸಿಕೊಂಡು ಬಂದಿದ್ದಾರೆ. ಈ ಐ. ಎ. ಎಸ್ ಅಧಿಕಾರಿಗಳನ್ನು ಆರಿಸುವಾಗ ಯಾರು

ದಕ್ಷರಿದ್ದಾರೆ, ಯಾರು ಅನುಭವಿಗಳು ಇದ್ದಾರೆ ಅಂಥವರನ್ನು ಆರಿಸಿಕೊಂಡೇ ಬಂದಿದ್ದಾರೆ. ನಮ್ಮ ದೇಶದಲ್ಲಿ ಎಲ್ಲೋ ಕೆಲವು ಕಡೆಗಳಲ್ಲಿ ಈ ಐ. ಎ. ಎಸ್ ಅಧಿಕಾರಿಗಳು ಅತ್ಯುತ್ತಮರೀತಿಯಲ್ಲಿ ಇಲ್ಲದೇ ಇರಬಹುದು. ಅಂತಹ ಉದಾಹರಣೆಗಳು ಕೆಲವು ಕಡೆ ಇದೆ. ಕೆಲವು ಜನ ಐ. ಎ. ಎಸ್. ಅಧಿಕಾರಿಗಳು ಅವರ ಆಫೀಸಿನಲ್ಲಿ ಸ್ಟಾಫ್ ಏನು ಬರೆದಿರುತ್ತಾರೋ ಅದನ್ನು ನೋಡದೇ ಸೈನ್ ಮಾಡುವಂತ ಅಧಿಕಾರಿಗಳು ಇದ್ದಾರೆ. ಇನ್ನು ಕೆಲವರು ವಸ್ತುಸ್ಥಿತಿಗೆ ತದ್ವಿರುದ್ಧವಾಗಿ ಬರೆಯುವ ಅಧಿಕಾರಿಗಳು ಇದ್ದಾರೆ. ಅನೇಕಸಾರಿ ಶಾಸಕರೇ ಹೇಳಲಿ, ಮಂತ್ರಿಗಳೇ ಹೇಳಲಿ ಅದನ್ನು ಕೇಳುವಂತ ಐ. ಎ. ಎಸ್ ಅಧಿಕಾರಿಗಳು ಇದ್ದಾರೆ. ಅಂತಹ ಅಧಿಕಾರಿಗಳು ಎಲ್ಲರೂ ಆಗಿದ್ದರೆ ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ಆಡಳಿತ ಇನ್ನು ಅತ್ಯುತ್ತಮವಾಗಿ ನಡೆಯುತ್ತಿತ್ತು ಎಂದರೆ ಅದು ತಪ್ಪಾಗಲಾರದು. ಎಲ್ಲೆಲ್ಲಿ ಅಧಿಕಾರಿಗಳು ಸರಿಯಾಗಿಲ್ಲವೋ ಅಲ್ಲಿ ಮಾತ್ರ ಕೆಲವು ಬೇಡವಾದ ಘಟನೆಗಳು ನಡೆದು ರಾಜ್ಯಕ್ಕೆ ಮತ್ತು ಸರ್ಕಾರಕ್ಕೆ ಕೆಟ್ಟಹೆಸರನ್ನು ತರುವಂಥ ಪ್ರಸಂಗಗಳು ಆಗಿಂದಾಗ್ಗೆ ಬರುತ್ತಿರುತ್ತವೆ. ಅವುಗಳನ್ನು ಆ ರೀತಿ ಆಗದಂತೆ ನೋಡಿಕೊಳ್ಳುವುದು ಶಾಸಕರ ಕರ್ತವ್ಯ, ಮಂತ್ರಿಗಳ ಕರ್ತವ್ಯ ಮತ್ತು ಪ್ರಜೆಗಳ ಕರ್ತವ್ಯವಾಗಿರುತ್ತದೆ. ಅಕಸ್ಮಾತ್ ಅಧಿಕಾರಿ ತಪ್ಪು ಮಾಡಿದಾಗ ಅದನ್ನು ಮೇಲಧಿಕಾರಿಗಳ ಗಮನಕ್ಕೆ ತಂದರೆ ಸರಿಪಡಿಸುತ್ತಾರೆ ನನ್ನ ಭಾವಕ್ಕೆ ಬಂದಂತ ಅನೇಕ ಪ್ರಕರಣಗಳ ಬಗ್ಗೆ ಐ. ಜಿ. ಪಿಯವರಲ್ಲಿ ಹೇಳಿದ ತಕ್ಷಣ ಅವರು ಪೇಪರ್ ತರಿಸಿಕೊಂಡು ತಪ್ಪು ಆಗಿದ್ದರೆ, ತಪ್ಪಾಗಿದೆ ಆ ರೀತಿ ಮಾಡಬೇಡಿರಿ ಈ ರೀತಿ ಮಾಡಿ ಎಂದು ಡೈರೆಕ್ಷನ್ ಕೊಟ್ಟು ಸರಿಪಡಿಸಿದಂತ ಉದಾಹರಣೆಗಳು ಬೇಕಾದಷ್ಟು ಇದೆ. ಜಿಲ್ಲಾಧಿಕಾರಿಗಳು ಇಂತಹ ತಪ್ಪುಗಳನ್ನು ಸರಿಪಡಿಸಿದಂತ ಉದಾಹರಣೆಗಳು ಇದೇ. ಚೀಫ್‌ಸೆಕ್ರೆಟರಿಯವರು ತಪ್ಪುಗಳನ್ನು ಸರಿಪಡಿಸಿದಂಥ ಉದಾಹರಣೆಗಳು ಇದೆ. ಎಲ್ಲಿಯಾದರೂ ಅಕ್ರಮಗಳು, ಅನ್ಯಾಯಗಳು ನಡೆಯಿರುವುದು ಕಂಡುಬಂದರೆ ಅದರಿಂದ ಜನರಿಗೆ ಏನಾದರೂ ತೊಂದರೆಯಾದಾಗ ಅವು ಕಂಡುಬಂದಲ್ಲಿ ಮೇಲಧಿಕಾರಿಗಳಿಗೆ ಅವರ ಗಮನಕ್ಕೆ ಅದನ್ನು ತರದಿದ್ದರೆ ತಪ್ಪಾದೀತು ಎಂದು ಹೇಳುತ್ತೇನೆ ಸಾರ್ವಜನಿಕರಿಗೂ ಇಂತಹ ಅನ್ಯಾಯಗಳು ನಡೆದಿರುವುದು ಕಂಡುಬಂದರೆ ಅವರು ಮೇಲಧಿಕಾರಿಗಳ ಗಮನಕ್ಕೆ ತರುವುದು ಅವರ ಕರ್ತವ್ಯ. ಪ್ರಜಾಪ್ರಭುತ್ವದಲ್ಲಿ ಒಬ್ಬ ಸಾಮಾನ್ಯ ಪ್ರಜೆಯಿಂದ ಹಿಡಿದು ಮಾನ್ಯಮಂತ್ರಿಯವರವರೆಗೆ ಆ ಒಂದು ಜವಾಬ್ದಾರಿ ಇದೆ. ಜಿಲ್ಲಾಮಟ್ಟದಲ್ಲಿ ಒಂದು ಕಮಿಟಿಯನ್ನು ಮಾಡಿದ್ದಾರೆ. ಅದನ್ನು ಕೂಡ ಸರಿಯಾದ ರೀತಿಯಲ್ಲಿ ಮಾಡಿದ್ದಾರೆ. ತಾಲ್ಲೂಕುಮಟ್ಟದಲ್ಲಿ ಕೂಡ ಇದು ನಡೆಯುತ್ತಿದೆ. ಇಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸಮಾಡದೇ ಇದ್ದಪಕ್ಷದಲ್ಲಿ ಅವರಿಗೆ ಸರಿಯಾಗಿ ಬುದ್ಧಿ ಹೇಳುವಂತಹ ಅವಕಾಶಗಳನ್ನು ಈ 20 ಅಂಶಗಳನ್ನು ಒಳಗೊಂಡಂತ ಒಂದ ಕಮಿಟಿಯನ್ನು ಮಾಡಿ ನಮ್ಮ ಸರ್ಕಾರದವರು ಒದಗಿಸಿಕೊಟ್ಟಿದ್ದಾರೆ ಈ ಒಂದು ದೃಷ್ಟಿಯಿಂದ ನೋಡಿದರೆ ಜಿಲ್ಲಾಮಟ್ಟದಲ್ಲಿ, ತಾಲ್ಲೂಕುಮಟ್ಟದಲ್ಲಿ ಬಹಳ ಚುರುಕಿನಿಂದ ಕೆಲಸಕಾರ್ಯಗಳು ನಡೆದಿದೆ ಎಂದು ಹೇಳಿದರೆ ತಪ್ಪಾಗಲಾರದು ಈ ಒಂದು ಜನರಲ್ ಅಡ್ಮಿನಿಸ್ಟ್ರೇಷನ್‌ದೊಳಗೆ ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ತಾಲ್ಲೂಕುಮಟ್ಟದಲ್ಲಿ ಆಡಳಿತ ಹೇಗಿದೆಯೋ ಅದೇ ರೀತಿಯಲ್ಲಿ ವಿಲೇಜ್ ಮಟ್ಟದಲ್ಲಿ ಗ್ರಾಮಮಟ್ಟದಲ್ಲಿ ಆಡಳಿತ ಸುಧಾರಿಸಬೇಕೆಂದು ನನ್ನ ಆಶಯವಾಗಿದೆ. ಗ್ರಾಮಮಟ್ಟದಲ್ಲಿ ನೋಡಿದರೆ ಅಲ್ಲಿ ಆಡಳಿತ ಅಸ್ತವ್ಯಸ್ತವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ ಗ್ರಾಮಗಳ ಮಟ್ಟದಲ್ಲಿ ಇವತ್ತಿನದಿವಸ ಪಟೇಲರನ್ನು ಸರಿಯಾಗಿ ನೇಮಕ ಮಾಡಿಲ್ಲ, ಅವರಿಗೆ ಸಾಕಷ್ಟು ಸಂಬಳ ಇಲ್ಲ ಈಸ್ಟ್ ಇಂಡಿಯಾ ಕಂಪನಿಯವರ ಕಾಲದಲ್ಲಿ ವಾಲೇಕಾರ್ ಎಂದು ಇರುತ್ತಿದ್ದರು. ಅವರು ಗ್ರಾಮದಲ್ಲಿ ಎರಡು ಬಣಗಳ ನಡುವೆ ಏನಾದರೂ ಅನ್ಯಾಯಗಳಾದರೆ, ಅಕ್ರಮಗಳಾದರೆ ಅವರನ್ನು ತಕ್ಷಣ ಪಟೇಲರ ಮನೆಗೆ ಕರೆದುಕೊಂಡುಹೋಗಿ ಅವರ ತಪ್ಪುಗಳನ್ನು ಸರಿಪಡಿಸಿ ಮೇಲಧಿಕಾರಿಗಳ ಹತ್ತಿರ ಕರೆದುಕೊಂಡು ಹೋಗಿ ತಕ್ಕ ಶಿಕ್ಷೆಯನ್ನು ಮಾಡಿಸುತ್ತಿದ್ದರು. ಇವತ್ತಿನದಿವಸ ಗ್ರಾಮಮಟ್ಟದಲ್ಲಿ ಅಂತಹ ಒಂದು ಅನುಕೂಲತೆ ಇಲ್ಲ. ಗ್ರಾಮಮಟ್ಟದಲ್ಲಿ ಆಡಳಿತ ಸರಿಯಾಗಿ ನಡೆಯುವಂತೆ ಆ ಕಡೆ ಮಾನ್ಯ ಮುಖ್ಯಮಂತ್ರಿಯವರು ಗಮನಹರಿಸಬೇಕೆಂದು ಹೇಳುತ್ತೇನೆ. ಇದೇ ರೀತಿಯಾಗಿ ಈ ಪಬ್ಲಿಕ್ ಸರ್ವೀಸ್ ಕಮಿಷನ್ ಬಗ್ಗೆ ಹೇಳಬೇಕು ಎಂದರೆ ಇಲ್ಲಿ ಅನೇಕ ನೇಮಕಗಳು ಆಗುತ್ತವೆ. ಈ ರೀತಿ ನೇಮಕ ಆಗುವಾಗ ತಕ್ಷಣ ನೋಟೀಸ್ ಬೋರ್ಡ್‌ನಲ್ಲಿ ಅಲ್ಲಿ ಏನು ಮಾಡುತ್ತಾರೆಯೋ ಅದನ್ನು ಹಚ್ಚಲಿಕ್ಕೆ ಬೇಕು. ಕೆಲವು ಜನರು ಏನು ಮಾಡಿದ್ದಾರೆಂದರೆ ಬೆಂಗಳೂರಿನಲ್ಲಿ ಏಜೆಂಟರಾಗಿದ್ದಾರೆ. ಪಬ್ಲಿಕ್ ಸರ್ವೀಸ್ ಕಮಿಷನ್ ರಿಸಲ್ಟ್‌ನ್ನು ಆಫೀಸಿನಲ್ಲಿರುವ ನೋಟೀಸ್‌ಬೋರ್ಡ್‌ನಲ್ಲಿ ಹಚ್ಚಿಲ್ಲವೆಂದು ತಿಳಿಸಿದ್ದಾರೆ ತಕ್ಷಣ ಅವರಿಗೆ ಫೋನ್ ಮಾಡಿ ನಿಮ್ಮ ಅಪಯಿಂಟ ಮೆಂಟ್ ಮಾಡಿಸಿದ್ದೇವೆ 5ಸಾವಿರ 10ಸಾವಿರ ತೆಗೆದುಕೊಂಡು ಬನ್ನಿ ಎಂದು ಹೇಳಿ ಅವರಿಂದ ರೊಕ್ಕವನ್ನು ಹೊಡೆಯುವಂತ 8-10ಜನರು ಇದ್ದಾರೆ. ಪಬ್ಲಿಕ್‌ಸರ್ವೀಸ್ ಕಮಿಷನ್ ನೇಮಕಾತಿ ಬಗ್ಗೆ ನೇರವಾಗಿ ನೋಟೀಸ್‌ಬೋರ್ಡ್‌ನಲ್ಲಿ ಹಚ್ಚಿದರೆ ಒಳ್ಳೆಯದು. ಇಲ್ಲದಿದ್ದರೆ

ಅವರಿಗೆ ತಕ್ಷಣ ತಿಳಿಸುವ ವ್ಯವಸ್ಥೆ ಆಗಬೇಕು ಈ ರೀತಿ ಮಾಡಿದಿದ್ದರೆ ಕೆಲವೊಂದು ಜನರಿಗೆ ದಂಡ್ನ ಹೊಡೆಯುವುದಕ್ಕೆ ವ್ಯವಸ್ಥೆಯನ್ನು ಮಾಡಿಕೊಟ್ಟಂತಾಗುತ್ತದೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಇಷ್ಟೊಂದು ಒಳ್ಳೆಯ ಪರಿಸ್ಥಿತಿ ಬರುವುದಕ್ಕೆ ಕಾರಣವೇನೆಂದರೆ ಪ್ರತಿಯೊಬ್ಬ ಜನರಿಗೂ ಅನ್ನ ವಸತಿ, ವಸ್ತ್ರ ಏನ್ನು ಬೇಕಾಗಿದೆ ಅದರಲ್ಲಿ ನಮ್ಮ ರಾಜ್ಯ ಸುಭಿಕ್ಷವಾಗಿದೆ. ಎಲ್ಲ ಕಡೆಯು ಒಕ್ಕಲಂತನ ನಡೆದು ಸರಿಯಾದ ಪಸಲು ಬಂದಿರುವಾಗ ಅನ್ನದ ಹಾಹಾಕಾರ ಇಲ್ಲವಾಗಿದೆ ಇನ್ನು ವಸ್ತ್ರದ ಬಗ್ಗೆ ಹೇಳಬೇಕೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕಡಿಮೆದರದ ಬಟ್ಟೆಯನ್ನು ಸರ್ಕಾರದ ವತಿಯಿಂದ ಇಟ್ಟು ಎಲ್ಲಾ ಜನರಿಗೆ ಅದು ದೊರಕುವಂತೆ ಮಾಡಿರುವುದರಿಂದ ಮತ್ತು ಕಂಪನಿಯವರು ಮಾರತಕ್ಕ ಬಟ್ಟೆಯು ಕಡಿಮೆ ಆಗಿರುವುದರಿಂದ ಇವತ್ತಿನದಿವಸ ವಸ್ತ್ರದ ಬಗ್ಗೆ ಹಾಹಾಕಾರ ಇಲ್ಲವಾಗಿದೆ. ಇನ್ನು ವಸತಿ ಬಗ್ಗೆ ಹೇಳಬೇಕು ಎಂದರೆ ಪ್ರಧಾನಿಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರ 20 ಅಂಶದ ಕಾರ್ಯಕ್ರಮದಲ್ಲಿ ಹೇಳಿರುವಂತೆ ನಮ್ಮರಾಜ್ಯದಲ್ಲಿರುವಂಥ ಪ್ರತಿಯೊಬ್ಬ ವ್ಯಕ್ತಿಗೆ ಇರಲಿಕ್ಕೆ ಜಾಗ ಕೊಡಬೇಕು, ಮತ್ತು ಹಿಂದುಳಿದ ಜನಾಂಗದವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಒಂದು ಯೋಜನೆ ಇರುವುದರಿಂದ ಈ ಒಂದು ಯೋಜನೆಮೇರೆಗೆ ಎಲ್ಲಾ ಕಡೆ ಕೆಲಸಕಾರ್ಯಗಳನ್ನು ಒಳ್ಳೆಯರೀತಿಯಲ್ಲಿ ಮಾಡುತ್ತಾ ಇರುವುದರಿಂದ ಈ ವಸತಿ ಸಮಸ್ಯೆಯು ಸಹ ಪರಿಹಾರವಾಗಿರುತ್ತದೆ. ಯಾವುದೇ ಜಿಲ್ಲೆಯಲ್ಲಿ ಯಾವುದೇ ತರಹದ ಹಾಹಾಕಾರ ಇಲ್ಲ ಇಲ್ಲಿನ ಆಡಳಿತ ವ್ಯವಸ್ಥಿತವಾದ ರೀತಿಯಲ್ಲಿ ಇರಬೇಕು. ಆಡಳಿತದಲ್ಲಿ ದುಷ್ಟ ಶಿಕ್ಷಣ ಶಿಷ್ಟ ರಕ್ಷಣ ಎಂಬ ನೀತಿಯನ್ನು ಅನುಸರಿಸಬೇಕು. ಇಲ್ಲಿ ಇರುವ ದುಷ್ಟರನ್ನು ಶಿಕ್ಷಿಸಿ ಶಿಷ್ಟರಿಗೆ ರಕ್ಷಣೆಯನ್ನು ಕೊಡಬೇಕು. ಸರ್ಕಾರದ ಕೆಲಸ ಏನು ಇದೆ ಅದು ದೇವರ ಕೆಲಸ ಈ ಸರ್ಕಾರಿ ಕೆಲಸದಲ್ಲಿ ದುಷ್ಟರು ಇದ್ದಾರೆ ಅವರಿಗೆ ಶಿಕ್ಷೆ ಕೊಡಬೇಕು. ಸರ್ಕಾರದ ಕೆಲಸವು ತೀವ್ರವಾಗಿ ದೇವರ ಕೆಲಸವಾಗಿ ಪರಿಣಮಿಸಬೇಕು. ನಮ್ಮ ರಾಜ್ಯದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಕಾಪಾಡಬೇಕು. ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಯ ಹಕ್ಕು ಉಲ್ಲಂಘನೆ ಆದರೆ, ಆಕ್ರಮಣ ಮಾಡಿದಕ್ಕೆ ತಂದರೆ ಅಂತಹ ವ್ಯಕ್ತಿಗೆ ಶಿಕ್ಷೆ ಕೊಡಬೇಕು. ಇದನ್ನು ತಾವು ಯೋಚನೆ ಮಾಡಬೇಕು. ಇವತ್ತಿದಿವಸ ಪ್ರಜಾಪ್ರಭುತ್ವದಲ್ಲಿ ಕೆಲಸಮಾಡುತ್ತಿರುವಂತಾದ್ದು, ಸರ್ಕಾರಿ ಕೆಲಸವು ದೇವರ ಕೆಲಸವೂ ಒಂದೇ ಆಗಬೇಕು. ಶ್ರೀಮಾನ್ ಮಂಜುನಾಥ್ ಅವರು ಹೇಳಿದಂತೆ ಮಂತ್ರಿಗಳು, ಮುಖ್ಯಮಂತ್ರಿಗಳೇ ಇದ್ದಾರೆ ಅವರು ಪಕ್ಷದಿಂದ ಆರಿಸಿಬಂದರೂ ಸಹ ಮೂರು ಕೋಟಿ ಜನರ ರಕ್ಷಣೆಯನ್ನು, ಪೋಷಣೆಯನ್ನು ಮಾಡುವಂಥಾದ್ದು ಮುಖ್ಯಮಂತ್ರಿಗಳ ಕೆಲಸ. ಆ ದಿಸೆಯಲ್ಲಿ ಪಕ್ಷಪಾತವಿಲ್ಲದೆ, ಸ್ವಜನ ಪಕ್ಷಪಾತಲ್ಲದೆ, ವಿರೋಧಿಗಳ ದಮನ ಮಾಡದೆ ಎಲ್ಲರೂ ಒಂದೇ ಎಂಬ ಭಾವನೆಯಿಂದ ಮೂರು ಕೋಟಿ ಜನತೆಯ ಕಲ್ಯಾಣವನ್ನು, ಪ್ರಗತಿಯನ್ನು ರಕ್ಷಿಸುವಲ್ಲಿ ನಮ್ಮ ಮುಖ್ಯಮಂತ್ರಿಗಳು ಮುಂದಾಗಿದ್ದಾರೆ. ಈ ದಿಸೆಯಲ್ಲಿ ಅಧಿಕಾರಿಗಳು ಮತ್ತು ಸಾರ್ವಜನಿಕರು ಕೂಡ ಪ್ರತಿಯೊಬ್ಬರೂ ಅವರ ಕೆಲಸವನ್ನು ಬೆಂಬಲಿಸತಕ್ಕದ್ದಾದರಿಂದ ನಾನೂ ಕೂಡ ಮುಖ್ಯಮಂತ್ರಿಗಳನ್ನು ವಂದಿಸದೇ ಹೋದರೆ ತಪ್ಪಾದೀತು ಎಂಬ ಮಾತನ್ನು ಹೇಳಿ ಮತ್ತೊಮ್ಮೆ ಈ ಬೇಡಿಕೆಗೆ ಬೆಂಬಲ ಕೊಟ್ಟು, ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಧ್ಯಕ್ಷರೆ, ಈ ದಿನ ನಮ್ಮ ಮುಂದಿಟ್ಟಿರತಕ್ಕ ಬೇಡಿಕೆಯ ಬಗ್ಗೆ ಕೆಲವು ಅಂಶಗಳನ್ನು ಸಭೆಯ ಮುಂದಿಡಲು ಇಷ್ಟಪಡುತ್ತೇನೆ. ಈ ಬೇಡಿಕೆಗಳಿಗೆ ಸಂಬಂಧಪಟ್ಟಹಾಗೆ ಸುಮಾರು 73 ಕಟ್‌ಮೋಷನ್‌ಗಳನ್ನು ಕಳುಹಿಸಿಕೊಟ್ಟಿದ್ದೇನೆ. ಇದರಲ್ಲಿ ಸಾಧಾರಣವಾಗಿ ಸಾಂಪ್ರದಾಯಿಕವಾಗಿ ಕಟ್‌ಮೋಷನ್‌ಗಳನ್ನು ಕಳುಹಿಸಿಕೊಟ್ಟಿಲ್ಲ. ಕೆಲವು ಆಧಾರಯುತವಾದುದು ಎಂದು ಹೇಳಬಲ್ಲೆ. ಮೊದಲನೆಯದಾಗಿ ಹೇಳಬೇಕಾದರೆ ಆಡಳಿತದ ವಿಚಾರ ತೆಗೆದುಕೊಂಡರೆ ಯಥಾರಾಜ ತಥಾ ಪ್ರಜಾ ಎಂಬುವಂತೆ ಆಡಳಿತವನ್ನು ನಡೆಸತಕ್ಕವರು ಯಾವರೀತಿ ಇರುತ್ತಾರೋ ಅದೇರೀತಿ ನಮ್ಮ ಪ್ರಜೆಗಳೂಕೂಡ ಇರುತ್ತಾರೆ. ಎಂಬ ಅಂಶವನ್ನು ನಾವು ಈ ಸಂದರ್ಭದಲ್ಲಿ ಮರೆಯುವುದಕ್ಕಾಗುವುದಿಲ್ಲ. ಈಗ ಗೌರ್ನರ್‌ರವರಿಗೆ ಇರತಕ್ಕ ಸ್ಥಾನಮಾನದ ಬಗ್ಗೆ ವಿರೋಧಪಡಿಸದೇ ಇದ್ದರೂ ಕೂಡ ಹಳೇ ಕಾಲದ ರೆಸಿಡೆಂಟ್ ಮಾದರಿಯಲ್ಲಿ ಅತಿ ಹೆಚ್ಚಿನ ಹಣವನ್ನು ಈ ವಿಭಾಗದಲ್ಲಿ ಖರ್ಚು ಮಾಡುತ್ತಾ ಇರುವುದು ಬಹಳ ತಪ್ಪು. ತಾವು ರಾಜ್ಯದ ಹಿತದೃಷ್ಟಿಯಿಂದ ಗೌರ್ನರ್‌ಗೆ ಇರತಕ್ಕ ಸಿಬ್ಬಂದಿಗೆ ಆಗತಕ್ಕ ಖರ್ಚನ್ನು ಕಡಿಮೆ ಮಾಡಿ ಉಳಿಸಬೇಕು ಎಂಬುದು ಮೊದಲನೆಯದು. ಮತ್ತು ಎರಡನೆಯದಾಗಿ ಆಡಳಿತ ಪಕ್ಷದವರು ರಾಜ್ಯದಲ್ಲಿ ಬಡವರನ್ನು ಉದ್ಧಾರ ಮಾಡಬೇಕು, ಸಮಾಜ ಸುಧಾರಣೆ ಮಾಡಬೇಕು ಎನ್ನತಕ್ಕ ನಿಲುವನ್ನು ಇಟ್ಟುಕೊಂಡಿದ್ದಾರೆ. ಈ ನಿಲುವನ್ನು ಸರಿಪಡಿಸಬೇಕಾದ ಪಕ್ಷದಲ್ಲಿ ರಾಜ್ಯದ ಆಡಳಿತ ಯಾರ ಕೈಯಲ್ಲಿದೆಯೋ ಅದರಲ್ಲೂ ಮುಖ್ಯವಾಗಿ ಮಂತ್ರಿಗಳು ಸರಳವಾದ ಜೀವನವನ್ನು

ನಡೆಸಬೇಕು. ಟೂರ್‌ಗಳನ್ನು ಹೆಚ್ಚು ಹೋಗುತ್ತಿರುವುದು ಸರಿಯಲ್ಲ. ಅದನ್ನು ಆದಷ್ಟು ಕಡಿಮೆ ಮಾಡಬೇಕು. ಪ್ರವಾಸಗಳನ್ನು ಕಡಿಮೆ ಮಾಡಿ ಕಚೇರಿ ಕೆಲಸದ ಕಡೆ ಗಮನ ಕೊಡದೇ ಹೋದ ಪಕ್ಷದಲ್ಲಿ ಖಂಡಿತವಾಗಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಸ್ವಲ್ಪ ಗಮನವನ್ನು ಕೊಟ್ಟು ಟೂರ್‌ಗಳನ್ನು ಕಡಿಮೆ ಮಾಡಿ ಹೆಚ್ಚು ಕಾಲ ಆಫೀಸಿನಲ್ಲಿ ಮಂತ್ರಿಗಳು ಇರುವಹಾಗೆ ಮಾಡಿ ತಮ್ಮ ತಮ್ಮ ಇಲಾಖೆಗಳ ಬಗ್ಗೆ ಕೆಲಸಗಳು ಸಾಕಷ್ಟು ಚೆನ್ನಾಗಿ ನಡೆಯುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು.

ಆಡಳಿತದ ಬಗ್ಗೆ ದೊಡ್ಡ ಆರೋಪ ಏನೆಂದರೆ ಇವತ್ತು ಅನೇಕ ಬೋರ್ಡ್‌ಗಳನ್ನು ಸೃಷ್ಟಿ ಮಾಡುತ್ತಿದ್ದಾರೆ. ಈ ಬೋರ್ಡ್‌ಗಳಿಂದ ಪಕ್ಷ ಬೆಳೆಸುವುದಕ್ಕೆ ಅನುಕೂಲವಾಗುತ್ತದೆಯೇ ಹೊರತು ಕೆಲಸಗಳ ಬಗ್ಗೆ ಹೆಚ್ಚು ಅನುಕೂಲಗಳಾಗುತ್ತಿಲ್ಲ. ಕೆಲವು ಛೇರ್ಮನ್‌ಗಳು, ಸದಸ್ಯರು ನಿಷ್ಠೆಯಿಂದ ಕೆಲಸ ಮಾಡತಕ್ಕವರಿರಬಹುದು. ಇನ್ನು ಕೆಲವು ಜನ ತಮ್ಮ ಸ್ಥಾನವನ್ನು ದುರುಪಯೋಗ ಪಡಿಸಿಕೊಳ್ಳುತ್ತಾ ಇರುವುದರಿಂದ ಸಾರ್ವಜನಿಕರಿಗೆ ಅವರಿಂದ ಹೆಚ್ಚಿನ ಸೌಕರ್ಯ ಸಿಗುತ್ತಿಲ್ಲ. ಬೋರ್ಡ್‌ಗಳನ್ನು ಸೃಷ್ಟಿ ಮಾಡಿ ಅಧ್ಯಕ್ಷರು ಮತ್ತು ಸದಸ್ಯರನ್ನು ಚುನಾವಣೆ ಮಾಡುವಾಗ ಸಾಕಾದಷ್ಟು ನ್ಯಾಯವಾದ ರೀತಿಯಲ್ಲಿ ಯೋಗ್ಯರನ್ನು ಆಯ್ಕೆ ಮಾಡತಕ್ಕ ಒಂದು ಕ್ರಮವನ್ನು ಅನುಸರಿಸಬೇಕು ಎಂದು ಒತ್ತಾಯಪೂರ್ವಕವಾಗಿ ಮುಖ್ಯಮಂತ್ರಿಗಳನ್ನು ಕೇಳಿ ಕೊಳ್ಳುತ್ತೇನೆ.

ಅಪಾಯಿಂಟ್‌ಮೆಂಟ್ ಕಮಿಟಿಗಳನ್ನು ಮಾಡಿದ್ದಾರೆ. ಅದರ ಉದ್ದೇಶ ವೀಕರ್ ಸೆಕ್ಷನ್ಸ್‌ಗೆ ಸಹಾಯ ಮಾಡಬೇಕು ಮತ್ತು ದಕ್ಷತೆಯನ್ನು ಹೆಚ್ಚು ಮಾಡಬೇಕು ಎಂದು. ಇಲ್ಲಿ ಕೊಟ್ಟಿರತಕ್ಕ ವರದಿಯನ್ನು ನೋಡಿದರೆ ಅಪಾಯಿಂಟ್‌ಮೆಂಟ್ ಕಮಿಟಿಗಳಿಂದ 1684 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. ಅದರ ಪೈಕಿ 717 ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಜನರನ್ನು ಮಾತ್ರ ಚುನಾವಣೆ ಮಾಡಿದ್ದಾರೆ. 18 ಪರ್ಸೆಂಟ್ ಮಾಡಬೇಕಾದುದು 12 ಪರ್ಸೆಂಟಿಗಿಂತ ಕಡಿಮೆ ಮಾಡಿರತಕ್ಕದ್ದು ಸರಿಯೆ? ಅಪಾಯಿಂಟ್‌ಮೆಂಟ್ ಕಮಿಟಿಗಳಿಂದ ಹೆಚ್ಚಿಗೆ ಪ್ರಯೋಜನ ವಾಗುತ್ತಿಲ್ಲ. ಅದರಿಂದ ಸಂಪಾದನೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಯೇ ಹೊರತು ಆಡಳಿತದ ಬಗ್ಗೆ ಸರ್ಕಾರದ ನೀತಿ ಬಗ್ಗೆ ಹೆಚ್ಚು ಪ್ರಯೋಜನವಾಗುವುದಿಲ್ಲ. ಆದ್ದರಿಂದ ಈ ಕೆಲಸವನ್ನೂ ಕೂಡ ಪಬ್ಲಿಕ್ ಸರ್ವೀಸ್ ಕಮೀಷನ್ನಿಗೆ ವಹಿಸಿದರೆ ಒಳ್ಳೆಯದು. ಅವರಿಗೆ ವಹಿಸಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಸಂಖ್ಯೆಯನ್ನು ಹೆಚ್ಚಿಸಿ ಅವರೇ ಈ ಕೆಲಸ ನೋಡಿಕೊಳ್ಳುವಂತೆ ಮಾಡಬೇಕು ಎಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳಬೇಕಾದರೆ, ತುರ್ತುಪರಿಸ್ಥಿತಿ ಬಂದಮೇಲೆ ನಾನು ಸ್ವಲ್ಪ ಅನುಕೂಲವಾಗುತ್ತದೆ ಎಂದು ಭಾವಿಸಿದ್ದೆ. ಆದರೆ ಅದಷ್ಟು ಸಮರ್ಪಕವಾಗಿ ಕೆಲಸ ನಡೆಯುತ್ತಿಲ್ಲ ಎಂದು ಹೇಳಬೇಕಾಗಿದೆ ಮಾನ್ಯ ಮುಖ್ಯಮಂತ್ರಿಗಳಿಗೆ ಪೋಲೀಸ್ ಇಲಾಖೆ ಬಗ್ಗೆ ಮಮತೆ ಇದೆ. ಅವರ ಮಮತೆಯನ್ನು ನಾನು ಒಪ್ಪುತ್ತೇನೆ. ನಮ್ಮ ಮಾನ್ಯಸದಸ್ಯರಾದ ನಾಯ್ಡುರವರು ಪೋಲೀಸರ ಸಿಬ್ಬಂದಿಯನ್ನು ಬೆಳೆಸಬೇಕು, ಪೋಲೀಸ್ ರಾಜ್ಯ ಬೆಳೆಸಬೇಕು ಎಂದು ಹೇಳಿದರು. ಮಾನ್ಯ ನಾಯ್ಡುನವರು ಪೋಲೀಸರ ಕೈಯಲ್ಲಿಟು ತಿಂದು ಜೈಲ್‌ನಲ್ಲಿ ವಾಸ ಮಾಡಿದ್ದರೆ ಪೋಲೀಸರ ಬಗ್ಗೆ ಈ ಧಾಟಿಯಲ್ಲಿ ಹೇಳುತ್ತಿರಲ್ಲಿಲ್ಲ ಎಂದು ನನಗನ್ನಿಸುತ್ತದೆ. 20 ಅಂಶದ ಕಾರ್ಯಕ್ರಮಕ್ಕೆ ನೀವು ನಿರೀಕ್ಷಿಸಿದಷ್ಟು ಪೋಲೀಸರ ಸಹಕಾರ ಸಿಕ್ಕುತ್ತಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಉದಾಹರಣೆಗೆ ಅಡವಿಟ್ಟಿರತಕ್ಕ ಸಾಮಾನುಗಳನ್ನು ಬಿಡಿಸಿಕೊಳ್ಳುವುದಕ್ಕೆ ಹೋದಾಗ ಪೋಲೀಸರ ಸಹಾಯ ಹೆಚ್ಚಾಗಿ ಸಿಗುತ್ತಿಲ್ಲ. ದುಡ್ಡಿನ ಪ್ರಭಾವ ಅಲ್ಲಿ ಜಾಸ್ತಿಯಾಗಿದೆ. ಪೋಲೀಸ್ ಸ್ಟೇಷನ್ನಿಗೆ ಯಾರಾದರೂ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ ಕಂಪ್ಲೇಂಟ್ ಕೊಟ್ಟವನ ಹತ್ತಿರವೂ ದುಡ್ಡು ತೆಗೆದುಕೊಳ್ಳುತ್ತಾರೆ, ಮತ್ತು ಯಾರ ಮೇಲೆ ಕಂಪ್ಲೇಂಟ್ ಕೊಡುತ್ತಾರೋ ಅವರ ಹತ್ತಿರವೂ ದುಡ್ಡನ್ನು ತೆಗೆದುಕೊಂಡು ಅವರ ಅನುಕೂಲಕ್ಕೆ ತಕ್ಕಹಾಗೆ ನಿರ್ಣಯ ತೆಗೆದುಕೊಳ್ಳುತ್ತಾರೆ. ಎಮರ್ಜನ್ಸಿ ಬಂದಮೇಲೆ ಎಲ್ಲಾ ಸರಿಹೋಗುತ್ತದೆ ಎಂದುಕೊಂಡಿದ್ದೆ. ಆದರೆ ಅದು ಪ್ರಯೋಜನ ವಾಗಲಿಲ್ಲ. ಎಮರ್ಜನ್ಸಿ ಬಂದಿರುವುದು ಎಲ್ಲ ವಿಧದಲ್ಲೂ ತಪ್ಪು ಎಂದು ಹೇಳುತ್ತಿಲ್ಲ. ಕೆಲವು ಕಡೆ

ಆದರಿಂದ ಒಳ್ಳೆ ವಾತಾವರಣ ಕಂಡುಬಂದಿದೆ. ಇನ್ನು ಕೆಲವು ಕಡೆ ಸರಿಯಾದ ರೀತಿಯಲ್ಲಿ ಅದನ್ನು ಉಪಯೋಗಿಸಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಬಲ್ಲೆ. ಇದರಿಂದ ಅನೇಕ ಅಧಿಕಾರಿಗಳು ಅದರಲ್ಲೂ ಪೋಲೀಸಿನವರು ಸಾಕಾದಷ್ಟು ಲಾಭ ಪಡೆದುಕೊಂಡಿದ್ದಾರೆ ಎಂದು ಹೇಳುತ್ತೇನೆ.

ನಾನಾದರೊ ಎಮರ್ಜನ್ಸಿಯಿಂದ ಬಹಳ ದುರುಪಯೋಗವಾಗಿದೆ ಎಂದು ಹೇಳುತ್ತೇನೆ ಏಕೆಂದರೆ ಜನಸಂಘದವರು ಎಲೆಕ್ಷನ್ ಸಮಯದಲ್ಲಿ ಬಹಳ ತೊಂದರೆ ಕೊಟ್ಟಿದ್ದಾರೆ. ನಾನು ಅವರ ಅಭಿಮಾನಿ ಅಲ್ಲ. ಆದರೂ ಕೂಡ ಅನೇಕರನ್ನು ಜೈಲಿನಲ್ಲಿ ಹಾಕಿದ್ದಾರೆ. ಡಾ, ನರಸಿಂಹಯ್ಯ ಎಂಬುವರು ನಾಮಕಾವಾಸ್ತೆಗೆ ಇದ್ದವರು, ಅವರನ್ನೂ ಕೂಡ ಜೈಲಿನಲ್ಲಿ ಹಾಕಿದ್ದಾರೆ. ಅವರು ಯಾವತ್ತೂ ಕೂಡ ರಾಜಕೀಯಕ್ಕೆ ಕೈಹಾಕಿದವರಲ್ಲ.

MR. DEPUTY SPEAKER.—The Hon'ble. Member may please refrain himself from referring to names. If he wants, he can discuss this matter with the Chief Minister.

5-00 P.M.

ಶ್ರೀ ಟಿ.ಆರ್. ಶಾಮಣ್ಣ.—ಈಗ ಜೈಲಿಗೆ ಹಾಕುವಾಗ ಕೆಲವು ವ್ಯಕ್ತಿಗಳನ್ನು ವಿನಾಕಾರಣ ಜೈಲಿಗೆ ಹಾಕಿ ಮತ್ತೆ ಕೆಲವರನ್ನು ಅಂದರೆ ಯಾರನ್ನು ನ್ಯಾಯವಾಗಿ ಹಾಕಬೇಕಾಗಿತ್ತೊ, ಅಂಥವರನ್ನು ಬಿಟ್ಟಿರತಕ್ಕ ನಿದರ್ಶನಗಳು ಇವೆ. ಅದು ಹೇಗಾದರೂ ಇರಲಿ. ಈಗ ಬೆಲೆಗಳನ್ನು ಇಳಿಸುವ ಬಗ್ಗೆ ಪುಟ 24ರಲ್ಲಿ ಬೆಲೆಗಳನ್ನು ಇಳಿಸುವುದಕ್ಕೆ ಪೋಲೀಸರು ಸಾಧ್ಯವಾದಷ್ಟು ಸಹಾಯ ಮಾಡಿದ್ದಾರೆಂದು ಇದೆ. ನಾನು ಮಾತ್ರ ಆ ಮಾತನ್ನು ಖಂಡಿತವಾಗಿ ಒಪ್ಪುವುದಿಲ್ಲ ಪೋಲೀಸ ರಿಂದಲೇ ಬೆಲೆಗಳು ಏರತಕ್ಕದ್ದು ಎಂದು ಸ್ಪಷ್ಟವಾಗಿ ಹೇಳಬಲ್ಲೆ. ನಮ್ಮ ನರಸಿಂಹರಾಜ ಕಾಲೋನಿ ಯಲ್ಲಿ ರಾಮಮಂದಿರ ಎಂದು ಇದೆ. ಅಲ್ಲಿ ಒಬ್ಬ ಎಳನೀರನ್ನು ಇಟ್ಟುಕೊಂಡಿರುತ್ತಾನೆ. ನಾನು ಅಲ್ಲಿಗೆ ಹೋದಾಗ ಇವನು ನನಗೆ ಎಳನೀರನ್ನು ಕುಡಿದುಕೊಂಡು ಹೋಗಿ ಎಂದನು. ಅದಕ್ಕೆ ನಾನು ದುಡ್ಡು ಕೊಡುವುದು ಬೇಡವೇ ಎಂದುದಕ್ಕೆ, ದಿನಕ್ಕೆ 20 ಎಳನೀರನ್ನು ಪೋಲೀಸಿನವರಿಗೆ ಕೊಡುತ್ತೇನೆ, ಅಂಥದರಲ್ಲಿ ತಾವು ಒಂದು ಎಳನೀರು ಕುಡಿದರೆ ಏನು ತೊಂದರೆಯಾಗುತ್ತದೆ ಎಂದನು.

MR. DEPUTY SPEAKER.—The person who offered the tender cocoanut must be an habitual offender ;

SRI T R. SHAMANNA.—If I also become a 30th Man.

MR. DEPUTY SPEAKER.—That is the Members' ill luck.

ಶ್ರೀ ಟಿ. ಆರ್. ಶಾಮಣ್ಣ.—ಅಕ್ಕಿ ಮತ್ತು ಧಾನ್ಯಗಳನ್ನು ಸಾಗಿಸುವಾಗ ಪೋಲಿಸರಿಗೆ ಕೊಡಬೇಕಾದ ಷೇರನ್ನು ಕೊಡದೆ ಹೋದರೆ ಖಂಡಿತವಾಗಿ ಯಾವ ಕಳ್ಳ ವ್ಯಾಪಾರಿಯೂ ಕೂಡ ವ್ಯಾಪಾರ ಮಾಡುವುದಕ್ಕಾಗುವುದಿಲ್ಲ. ಈ ಪದಾರ್ಥಗಳನ್ನು ಲಾರಿಯಲ್ಲಿ ಸಾಗಣಿಕೆ ಮಾಡುವಾಗ ಪೋಲೀಸಿನವರಿಗೆ ಮಾಮೂಲು ಕೊಟ್ಟೇ ಕೊಡಬೇಕು. ಬಸವನಗುಡಿಯಿಂದ ಮಲ್ಲೇಶ್ವರಕ್ಕೆ ಲಾರಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯ ಇದೆಯೇ ನೋಡಿ, ಒಂದೊಂದು ಸ್ಟೇಶನ್ನಿನವರು ಮಾಮೂಲು ಮಾಡಿಕೊಂಡಿದ್ದಾರೆ. ಕಂಟ್ರಾಕ್ಟ್ ಬಸ್ಸುಗಳನ್ನು ನ್ಯಾಶನಲೈಸ್ ಮಾಡಿದ ಮೇಲೆ ಪೋಲೀಸ್‌ನವರಿಗೆ ಮತ್ತು ಆರ್. ಟಿ. ಓ. ಕಛೇರಿಯವರಿಗೆ ದೊಡ್ಡ ಪೆಟ್ಟು ಬಿದ್ದಿದೆ ಎಂದರೆ ತಪ್ಪಾಗುವುದಿಲ್ಲ. ಬೆಂಗಳೂರಿನಲ್ಲಿ ಅನೇಕ ಕ್ಲಬ್ಬುಗಳು ಇವೆ. ಅವುಗಳೆಲ್ಲ ಜೂಜು ಕಟ್ಟೆಗಳಾಗಿವೆ. ಅವುಗಳೆಲ್ಲಾ ಮಾಮೂಲಾಗಿ ಪೋಲೀಸಿನವರಿಗೆ ಕಂತು ಕೊಡಬೇಕು. ಬೆಂಗಳೂರಿನಲ್ಲಿ ಅನೇಕ ಇಲೆಸಿಟ್ ಡ್ರಿಂಕ್ ಬಾರ್‌ಗಳನ್ನು ಯಾರು ನಡೆಸುತ್ತಿದ್ದಾರೋ ಅದಕ್ಕೆಲ್ಲ ಪೋಲೀಸರದೇ ಕುಮ್ಮಕ್ಕು. ಮತ್ತು ಅನೇಕ ದುಷ್ಕೃತ್ಯಗಳಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡತಕ್ಕವರೆಂದರೆ ಪೋಲೀಸರು. ಪೋಲೀಸರು ತಮಗೆ ಕೊಟ್ಟಿರತಕ್ಕ ಅಧಿಕಾರವನ್ನು ಉಪಯೋಗಿಸಿಕೊಂಡು ಕಳ್ಳರನ್ನು ಹಿಡಿಯುವುದು, ತಪ್ಪಿತಸ್ಥರನ್ನು ಶಿಕ್ಷಿಸುವುದು ಮತ್ತು ಜನಗಳಿಗೆ ನ್ಯಾಯ ದೊರಕಿಸಿಕೊಡುವುದನ್ನು ಬಿಟ್ಟು ಇಲ್ಲದಸಲ್ಲದ ವ್ಯವಹಾರಗಳನ್ನು ಮಾಡುತ್ತಿದ್ದಾರೆಂದು

ಅನೇಕ ದೂರುಗಳು ಬಂದಿವೆ. ಸರ್ಕಾರದವರು, ಪೋಲೀಸಿನವರು ಕೆಲವು ಕಾರಣಗಳಿಂದ ಎಷ್ಟೋ ತೊಂದರೆ ಪಟ್ಟರೂ ಕೂಡ, ಅವರ ಬಗ್ಗೆ ಕೆಲವು ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. The Police Officer from the topmost to the next immediate superior, use the words "first non-sense, next idiot, the next man, I will kick you, next............ಮಗನೇ" ಎಂದು ಎಲ್ಲ ಉಪಯೋಗಿಸುತ್ತಾರೆ. It has become a regular habit with the Police Officers to use such expressions. Such a training given to the Policemen is reflected in the treatment of public.

Mr. Deputy Speaker.—I think it would be a very harsh statement to make.

Sri T. R. Shamanna.—If the top Police Officers are polite, then the subordinates would also be polite.

Mr. Deputy Speaker.—Only certain officers might use such a language; but not all officers would use such a language

Sri T. R. Shamanna.—The allegation I am making is not against all the officers. There are very few good officers. I congratulate them; I bow my head to those officers as they are very good officers. I am sorry I made a general statement. ಆದುದರಿಂದ ಆ ಬಗ್ಗೆ ಸ್ವಲ್ಪ ಯೋಚನೆ ಮಾಡತಕ್ಕದ್ದು ಅವಶ್ಯಕವಾಗಿದೆ. ಪೋಲೀಸ್ ಆಫೀಸರ್‌ಗಳನ್ನು, ಮುಖ್ಯ ಕಾರ್ಯದರ್ಶಿಗಳು ಮತ್ತು ಮುಖ್ಯ ಮಂತ್ರಿಗಳು ಕರೆಸಿ ಸೌಜನ್ಯದಿಂದ ನಡೆದುಕೊಳ್ಳಿ ಎಂದು ಎಚ್ಚರಿಕೆ ಕೊಟ್ಟರೆ ಅದು ಜನತೆಯ ಮೇಲೆ ಒಳ್ಳೆಯ ಪರಿಣಾಮವಾಗುತ್ತದೆಂದು ನನಗನ್ನಿಸುತ್ತಿದೆ. ಮೊನ್ನೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯನ್ನು ಓದುತ್ತಿದ್ದಾಗ, ಬ್ರಿಟಿಷ್ ಪೋಲೀಸರು ನಾಗರೀಕರಿಗೆ ಒಳ್ಳೆಯ ರೀತಿಯಲ್ಲಿ ಸಹಾಯ ಮಾಡುತ್ತಾರೆ, ಸೌಜನ್ಯದಿಂದ ಮಾತನಾಡಿಸುತ್ತಾರೆ, ಬೇಕಾದಂತಹ ಗೈಡನ್ಸ್ ಕೊಡುತ್ತಾರೆ ಎಂಬ ವಿಚಾರಗಳನ್ನು ನೋಡಿದೆ. ಆದಕಾರಣ ಅಂಥ ಒಳ್ಳೆಯ ಪೋಲೀಸರನ್ನು ದೂರುವುದಕ್ಕೆ ಹೋಗುವುದಿಲ್ಲ. ಪೋಲೀಸಿನವರಿಗೆ ಮನೆಗಳ ಬಗ್ಗೆ ಬೇಕಾದಷ್ಟು ಕಷ್ಟ ಇದೆ. ಅವರು ಬೆಳಿಗ್ಗೆ ಮನೆ ಬಿಟ್ಟರೆ ಸಾಯಂಕಾಲ ಮನೆಗೆ ಹೋಗುವವರೆಗೆ ತೊಂದರೆ ಇರುತ್ತದೆ. ಪೋಲೀಸಿನವರ ಮಕ್ಕಳು ಪೋಲೀಗಳಾಗುವ ಅವಕಾಶ ಇದೆ. ಆದಕಾರಣ ಪೋಲೀಸಿನವರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಗಮನಕೊಡಬೇಕು. ಕೆಲವು ಪೋಲೀಸಿನವರಿಗೆ ಮನೆಗಳಿವೆ, ಕೆಲವರಿಗೆ ಇಲ್ಲ ಅಂಥವರಿಗೆ ಸಾಧ್ಯವಾದಷ್ಟು ಮನೆಗಳನ್ನು ಒದಗಿಸಬೇಕು. ಪೋಲೀಸಿನವರಿಗೆ ರಜ ಎನ್ನುವುದು ಇಲ್ಲ ಹಗಲು ಎನ್ನುವುದು ಇಲ್ಲ, ರಾತ್ರಿ ಎನ್ನುವುದು ಇಲ್ಲ, ಇವರಿಗೂ ಸಹ ಬೇರೆ ಇಲಾಖೆಯ ನೌಕರರಿಗೆ ಯಾವರೀತಿ ಸೌಲಭ್ಯಗಳು ಇವೆಯೋ ಅವನ್ನು ಕಲ್ಪಿಸಿಕೊಡಬೇಕು. ಒಂದೊಂದು ಊರಿನಲ್ಲಿ ಒಬ್ಬನೇ ಸಬ್ ಇನ್‌ಸ್ಪೆಕ್ಟರ್ ಎಲ್ಲವನ್ನೂ ಕೂಡ ನೋಡಿಕೊಳ್ಳಬೇಕಾಗುತ್ತದೆ, ಅವನು ಸ್ಟೇಶನ್‌ನಲ್ಲಿ ಇಲ್ಲದೆ ಹೋದರೆ ಅನೇಕ ದೂರುಗಳು ಅವನ ಮೇಲೆ ಬರುತವೆ. ಆದುದರಿಂದ ಇವರಿಗೆ ಅವಶ್ಯವಾಗಿ ಬೇಕಾದಂತಹ ಸೌಲಭ್ಯಗಳ ಬಗ್ಗೆ ಯೋಚನೆ ಮಾಡಿ ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಮತ್ತು ಸಬ್-ಇನ್‌ಸ್ಪೆಕ್ಟರ್‌ಗಳಿಗೆ ಸಾಧ್ಯವಾದಷ್ಟು ಅನುಕೂಲತೆಗಳನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಜೈಲುಗಳ ಬಗ್ಗೆ ಹೇಳಬೇಕಾದರೆ ನಾನು ಅನೇಕ ವರ್ಷಗಳ ಕಾಲ ಜೈಲಿನಲ್ಲಿದ್ದು ಸಾಕಷ್ಟು ಅನುಭವ ಪಡೆದಿದ್ದೇನೆ. ಜೈಲುಗಳ ಬಗ್ಗೆ ಯಾವುದೋ ಒಡೆಯರಾಯನ ಕಾಲದಲ್ಲಿ ಜೈಲ್ ಮ್ಯಾನ್ಯುಯಲ್, ಜೈಲ್ ರಿಫಾರಮ್ಸ್ ಆಯಿತು. ಜೈಲ್ ರಿಫಾರಮ್ಸ್ ಆಗಬೇಕು ಮತ್ತು ಈಗಿನ ಪದ್ಧತಿಗನುಗುಣವಾಗಿ ಕೆಲವು ಮಾರ್ಪಾಡುಗಳಾಗುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಜೈಲಿನಲ್ಲಿ ಹಿಂದೆ ಇದ್ದಿರಬಹುದು, ಆದರೆ ಇವತ್ತಿನ ಸೌಲಭ್ಯಗಳು ಏನಿವೆ ಎಂದು ಅವರಿಗೆ ಗೊತ್ತಿದೆಯೆ ?

ಶ್ರೀ ಟಿ. ಆರ್. ಶಾಮಣ್ಣ.—ಆ ಕಾಲದಲ್ಲಿ ಹೇಗಿತ್ತೋ ಈ ಕಾಲದಲ್ಲಿಯೂ ಹಾಗೆ ಇದೆ. ಜೈಲಿನಿಂದ ಈಚೆಗೆ ಬಂದ ಮೇಲೆ ೧೨೭ ಪೌಂಡ್ ಬಂದಿತ್ತು. ಜೈಲುಗಳ ವಿಚಾರದಲ್ಲಿ ನನ್ನ ಮುಖ್ಯವಾದ ಸಲಹೆ ಏನೆಂದರೆ ಜೈಲುಗಳಿಂದ ಬಿಡುಗಡೆಯಾದ ಖೈದಿಗಳನ್ನು ಯಾವ ರೀತಿಯಿಂದಲಾದರೂ ಸನ್ಮಾರ್ಗಕ್ಕೆ ತಂದು ಅವರನ್ನು ಸತ್‌ಪ್ರಜೆಗಳಾಗಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಯಾರಾದರೂ ಜೈಲಿನಿಂದ ಹೊರಗಡೆ ಬಂದರೆ ಅಂಥವರಿಗೆ ಯಾರೂ ಕೆಲಸವನ್ನು ಕೊಡುವುದಿಲ್ಲ ಅವನು ಕಲೆಯನ್ನು ಕಲಿತುಕೊಂಡಿರುತ್ತಾನೆ. ಆದರೆ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ ಆದ ಕಾರಣ ಪುನಃ ಅವನು ಯಥಾ ಪ್ರಕಾರ ಕಳ್ಳತನಕ್ಕೆ ಹೋಗುತ್ತಾನೆ ನಮ್ಮ ಅಕ್ಕನ ಮಗ ಒಬ್ಬ ಇದ್ದಾನೆ. ಅವನು ೨೯ ಸಾರಿ ಜೈಲಿಗೆ ಹೋಗಿ ಬಂದಿದ್ದಾನೆ. ಅವನು ಜೈಲಿಗೆ ಹೋಗಿ ಬಂದ ತಕ್ಷಣ ಅವನನ್ನು ಯಾರೂ ಮನೆಗೆ ಬಿಡುವುದಿಲ್ಲ. ಈ ದೃಷ್ಟಿಯಿಂದ ಯಾರೇ ಖೈದಿ ಆಗಲಿ ಅವನು ಜೈಲಿನಿಂದ ಬಂದ ಮೇಲೆ ಅವನಿಗೆ ರಿಹ್ಯಾಬಿಲಿಟೇಷನ್ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅವರಿಗೆ ಯಾವುದಾದರೂ ಒಂದು ಉದ್ಯೋಗವನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಈಗ ೧೬೦೦ ಖೈದಿಗಳಿಗೆ ಪ್ರತಿನಿತ್ಯ ಅಡಿಗೆ ಆಗಬೇಕು. ಅಲ್ಲಿ ಅಡಿಗೆ ವ್ಯವಸ್ಥೆ ಚೆನ್ನಾಗಿಲ್ಲ. ಅಲ್ಲಿ ನೀರು ತೊಟ್ಟಿ ಮಾಡಿದ್ದಾರೆ ತೊಳೆಯುವುದಕ್ಕೆ ಅಡಿಗೆ ಮಾಡುವುದಕ್ಕೆ ಕುಡಿಯುವುದಕ್ಕೆ ಎಲ್ಲಕ್ಕೂ ಉಪಯೋಗಿಸುತ್ತಾರೆ. ಇದು ಸರಿಯಿಲ್ಲ, ಇದನ್ನು ಸರಿಯಾದ ರೀತಿಯಲ್ಲಿ ಬೇರೆ ಬೇರೆ ವ್ಯವಸ್ಥೆ ಮಾಡಬೇಕು.

ಬೈಲ್ ಮೇಲೆ ಬಿಡುಗಡೆ ಮಾಡುವ ವಿಷಯದಲ್ಲಿ ಕೆಲವು ಅಡಚಣೆಗಳು ಇವೆ. ಅದನ್ನು ಸರಿ ಮಾಡಬೇಕು. ಪಾಪಯ್ಯ ಎನ್ನುವ ಒಬ್ಬ ಖೈದಿ ಜೈಲಿಗೆ ಹೋದಮೇಲೆ ಅವನಿಗೆ ಕಮ್ಯುನಿಕಬಲ್ ಡಿಸೀಸ್ ಬಂದಿದೆ. ಅದು ಇಲ್ಲಿ ವಾಸಿಯಾಗುವುದಿಲ್ಲ, ಅಲಫರ್ ಆಸ್ಪತ್ರೆಗೆ ಹೋದರೆ ಮಾತ್ರ ವಾಸಿಯಾಗುತ್ತದೆ ಎಂದು ಡಾಕ್ಟರು ತಿಳಿಸಿದ್ದಾರೆ ಅವನಿಗೆ ಸಂಬಂಧಪಟ್ಟ ಪೇಪರ್ ಒಂದು ವರ್ಷದಿಂದ ಒಂದುಕಡೆಯಿಂದ ಮತ್ತೊಂದು ಕಡೆಗೆ ಓಡಾಡುತ್ತಿದೆ. ಇದರಿಂದಾಗಿ ಆ ಖೈದಿಗೆ ಸರಿಯಾದ ಸೌಲಭ್ಯ ದೊರೆಯದೆ ಅವನು ತೊಂದರೆ ಪಡುತ್ತಿದ್ದಾನೆ. ಬೈಲ್ ಬಗ್ಗೆ ರೋಗಿಗಳ ಬಗ್ಗೆ ಕಮ್ಯುನಿಕಲ್ ಸಾಂಕ್ರಾಮಿಕ ರೋಗಗಳಿಗೆ ಒಳಗಾಗಿರುವವರನ್ನು ಬಿಡುಗಡೆ ಮಾಡಬೇಕು ಎಂದು ಮಹಾವೀರಜಯಂತಿಯ ದಿವಸ ಶಿಫಾರಸ್ಸು ಮಾಡಿದ್ದಾರೆ. ಅಂಥವರನ್ನು ಬಿಡುಗಡೆ ಮಾಡಿ ಅವರ ತೊಂದರೆಯನ್ನು ತಪ್ಪಿಸಬೇಕು. ಶ್ರೀಮಾನ್ ಎಚ್. ಕೃಷ್ಣಪ್ಪನವರು ಮಾತನಾಡುವಾಗ ಬಾಡಿಗೆದಾರರು ಟೆನೆಂಟ್‌ಗಳ ವಿಚಾರಗಳನ್ನು ಹೇಳಿದರು. ಮತ್ತು ಟೆನೆಂಟ್‌ಗಳು ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಎಂದು ಹೇಳಿದರು. ಅನೇಕ ಟೆನೆಂಗ್‌ಗಳು ತೊಂದರೆಯನ್ನು ಅನುಭವಿಸುತ್ತಿರುವುದು ನಮಗೆ ಗೊತ್ತಿದೆ. ಅನೇಕ ವೇಳೆ ಲ್ಯಾಂಡ್ ಲಾರ್ಡ್ ಮನೆಯ ಮಾಲೀಕರೂ ಸಹ ಟೆನೆಂಟ್‌ಗಳಿಂದ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ದೃಷ್ಟಿಯಿಂದ ಲ್ಯಾಂಡ್ ಲಾರ್ಡ್ ಮತ್ತು ಟೆನೆಂಟ್ ಇಬ್ಬರಿಗೂ ತೊಂದರೆಯಾಗದ ರೀತಿಯಲ್ಲಿ ಎರಡನ್ನೂ ಗಮನದಲ್ಲಿಟ್ಟುಕೊಂಡು ಯಾವುದಾದರೂ ಒಂದು ನಿಯಮವನ್ನು ಮಾಡಬೇಕು.

ಮೇಜರ್ ಇರಿಗೇಷನ್ ಬಗೆ ಪ್ರಾಜೆಕ್ಟ್ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇದರ ಬಗೆ ಒಟ್ಟಿನಲ್ಲಿ ಹೇಳುವುದಾದರೆ ಸಾಧಾರಣವಾಗಿ ಸರ್ಕಾರದವರು ಇದರ ಬಗ್ಗೆ ಸಾಕಷ್ಟು ಗಮನಕೊಟ್ಟು ವಿದ್ಯುಚ್ಛಕ್ತಿಯನ್ನು ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಏತಕ್ಕೆಂದರೆ ಕೈಗಾರಿಕೆಗಳು ಬೆಳೆಯಬೇಕಾದರೆ ವಿದ್ಯುಚ್ಛಕ್ತಿ ಬೇಕು. ಮತ್ತು ಆಹಾರ ಉತ್ಪತ್ತಿ ಹೆಚ್ಚಾಗಬೇಕಾದರೆ ಕೆಲವು ತೊಂದರೆ ತೊಡಕುಗಳು ಇವೆ. ಅವುಗಳನ್ನು ನಿವಾರಣೆ ಮಾಡಿ ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡುವುದಕ್ಕೆ ಸರ್ಕಾರ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ದೃಷ್ಟಿಯಿಂದ ಆಹಾರದ ಉತ್ಪತ್ತಿಯನ್ನು ಜಾಸ್ತಿ ಮಾಡುವ ದೃಷ್ಟಿಯಿಂದ ಇವೆರಡನ್ನೂ ರಾಜ್ಯದ ಆರ್ಥಿಕ ದೃಷ್ಟಿಯಿಂದ ಸರ್ಕಾರದವರು ತೀವ್ರವಾಗಿ ಮಾಡಬೇಕು. ಇದರ ಬಗ್ಗೆ ಸಾಕಷ್ಟು ಗಮನ ಕೊಡಬೇಕು.

ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ವಿಚಾರದಲ್ಲಿ ನಾನು ಎರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಮಾಡುತ್ತೇನೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಪ್ರಾರಂಭವಾದ ಮೇಲೆ ಮತ್ತು ಅರ್ಬನ್ ಸೀಲಿಂಗ್ ಆಕ್ಟ್ ಬಂದಮೇಲೆ ಟ್ರಸ್ಟ್ ಬೋರ್ಡಿಗೆ ಇರತಕ್ಕ ಅಧಿಕಾರ ಹೋಗಿದೆ. ಇದು

ವಿದ್ದೆ ಮಾಡುತ್ತಿದೆ. ಇದು ಸರಿಯಾಗಿ ಕೆಲಸಮಾಡುವುದಕ್ಕೆ ಏನು ತೊಡಕುಗಳು ಇವೆ ಅವುಗಳನ್ನು ಬೇಗ ಬಗೆಹರಿಸಬೇಕು. ರೆವಿನ್ಯೂ ಸ್ಟೇಟಸ್ ಬಗ್ಗೆ ಆದಷ್ಟು ತೀವ್ರವಾಗಿ ಕ್ರಮ ತೆಗೆದುಕೊಂಡು ರೆವಿನ್ಯೂ ಸೈಟ್ ಹೋಲ್ಡರುಗಳಿಗೆ ಜಾಗ ಕೊಡುವುದಕ್ಕೆ ನಿರ್ದಿಷ್ಟವಾದ ಏರ್ಪಾಡು ಮಾಡಬೇಕು. ಇದರ ಬಗ್ಗೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಂಬಿ ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ಪುಷ್ಟೀಕರಿಸಿ ಬೆಂಬಲ ಕೊಡುತ್ತಾ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಪ್ರಥಮವಾಗಿ ಈ ದೇಶದಲ್ಲಿ ನಾಗರೀಕರಿಂದ ಜನಗಳಿಂದ ದೂರು ಬರುತ್ತಾ ಇರತಕ್ಕದ್ದು ಪೋಲೀಸ್ ಇಲಾಖೆಯ ಮೇಲೆ ಸ್ವಲ್ಪ ಮಟ್ಟಿಗೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದಾದರೆ ಅದು ಪೋಲೀಸ್ ಇಲಾಖೆಯಿಂದ ಎಂದು ನಾನಾದರೂ ಕೂಡ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಈ ಒಂದು ಇಲಾಖೆಯನ್ನು ವಹಿಸಿಕೊಂಡು ನಡೆಸುತ್ತಿದ್ದಾರೆ. ಕೆಲವು ಕಡೆ ದಕ್ಷತೆಯಿಂದ ಇಲಾಖೆ ಕೆಲಸ ಮಾಡುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಎಲ್ಲಾ ಅಧಿಕಾರಿಗಳೂ ಕೂಡ ತಪ್ಪು ಮಾಡುತ್ತಿಲ್ಲ, ಎಲ್ಲರೂ ಕೂಡ ದಕ್ಷರಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಒಳ್ಳೆಯ ದಕ್ಷರಾದ ಮತ್ತು ಪ್ರಾಮಾಣಿಕರಾದ ಅಧಿಕಾರಿಗಳು ಪೋಲೀಸ್ ಇಲಾಖೆಯಲ್ಲಿ ಈ ದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಕೆಲವರು ಅನನುಭವಿಗಳು, ದಕ್ಷರಲ್ಲದೆ ಇರತಕ್ಕವರು ಸ್ವಲ್ಪ ಮಟ್ಟಿಗೆ ಕೈ ಸರಿಯಿಲ್ಲದೆ ಇರತಕ್ಕವರು ಬಹಳ ದಿವಸಗಳಿಂದ ಈ ದೇಶದಲ್ಲಿ ಇದ್ದಾರೆ. ಅವರ ಬಗ್ಗೆ ಸ್ವಲ್ಪ ಮಾನ್ಯ ಮುಖ್ಯ ಮಂತ್ರಿಗಳು 21ನೇ ಆರ್ಟಿಕಲ್ ಅಪ್ಲೈ ಮಾಡುವುದು ಉತ್ತಮ ಎಂದು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಕೈಸರಿಯಿಲ್ಲದವರು ಎಂದರೆ ಏನು ?

ಶ್ರೀ ಬಿ. ಬೈರಪ್ಪಾಜಿ.—ಹಾಗೆಂದರೆ ಸ್ವಲ್ಪಮಟ್ಟಿಗೆ ತಪ್ಪು ಮಾಡತಕ್ಕವರು ಎಂದು. ಅವರ ಬಗ್ಗೆ ಕೂಡ ಸರಿಯಾದ ಕ್ರಮ ತೆಗೆದುಕೊಳ್ಳತಕ್ಕದ್ದು ಉಚಿತ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆ ಮಾಡುತ್ತೇನೆ. ಇವೊತ್ತು ಈ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಅನೇಕ ರೀತಿಯ ಮಾರ್ಪಾಡುಗಳು ಆಗಿವೆ. ಅನೇಕ ಸಂದರ್ಭದಲ್ಲಿ ನಾವು ದೂರನ್ನು ಹೇಳತಕ್ಕಂಥಾದ್ದು ಒಂದೇ ಅಲ್ಲ. ಅವರು ಮಾಡತಕ್ಕ ಒಳ್ಳೆಯ ಕಾರ್ಯವನ್ನು ಕೂಡ ಜ್ಞಾಪಕಕ್ಕೆ ತಂದುಕೊಳ್ಳತಕ್ಕದ್ದು ನಮ್ಮ ಭಾಗದ ಕರ್ತವ್ಯ ಎಂದು ನಾನು ಹೇಳುತ್ತೇನೆ. ದಿನನಿತ್ಯ ತಾಲ್ಲೂಕು ಮಟ್ಟದಲ್ಲಿರತಕ್ಕವರಿಗೆ, ಜಿಲ್ಲಾ ಮಟ್ಟದಲ್ಲಿರತಕ್ಕವರಿಗೆ ನಮಗೆ ಭಾಸವಾಗುತ್ತದೆ, ಅವರು ಏನು ಕೆಲಸ ಮಾಡುತ್ತಾರೆ, ಯಾವರೀತಿ ಜನಗಳ ಜೊತೆಯಲ್ಲಿ ಸಹಕರಿಸುತ್ತಿದ್ದಾರೆ, ಯಾವರೀತಿ ಹೊಂದಿಕೊಂಡು ಕೆಲಸ ಮಾಡುತ್ತಿದ್ದಾರೆ ಎನ್ನುವುದು ನಮಗೂ ಕೂಡ ಅರಿವಾಗುತ್ತದೆ. ತಾವು ಯೋಚನೆ ಮಾಡಬೇಕು ಈಗ ಉದಾಹರಣೆಗೆ ಬೆಂಗಳೂರನ್ನೇ ತೆಗೆದುಕೊಳ್ಳೋಣ. ನಮ್ಮ ಸರ್ಕಾರ ಬರುವುದಕ್ಕೆ ಮುಂಚೆ ಬೆಂಗಳೂರು ಸಿಟಿಯಲ್ಲಿ ಅನೇಕ ವಿಧವಾದ ದೂರುಗಳನ್ನು ನಾವು ಕೇಳುತ್ತಿದ್ದೆವು. ಇವೊತ್ತು ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡುವುದರ ಪರಿಣಾಮವಾಗಿ ಜನತೆ ನೆಮ್ಮದಿಯಿಂದ ಇದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಲ್ಲಿರತಕ್ಕ ದಕ್ಷ ಅಧಿಕಾರಿಗಳು ಮಾರ್ಪಾಡು ಮಾಡಿ ಅನೇಕ ರೀತಿಯ ಒಳ್ಳೆಯ ಕೆಲಸಗಳನ್ನು ಮಾಡಿ ಇಲ್ಲಿ ನಡೆಯುತ್ತಾ ಇದ್ದಂತಹ ಅವ್ಯವಹಾರಗಳು ಅನೇಕ ರೀತಿಯಲ್ಲಿ ಪರಿಣಾಮಕಾರಿಯಾಗಿ ಕಡಿಮೆ ಮಾಡಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಾ ಅಧಿಕಾರಿಗಳೂ ಕೂಡ ತಪ್ಪು ಮಾಡುತ್ತಾ ಇಲ್ಲ. ತಪ್ಪು ಮಾಡತಕ್ಕ ಅಧಿಕಾರಿಗಳಿಗೆ ಸರಿಯಾದಂಥ ರೀತಿಯಲ್ಲಿ ಬುದ್ಧಿಯನ್ನು ಕಲಿಸತಕ್ಕದ್ದು ಸರ್ಕಾರದ ಕರ್ತವ್ಯ ಮತ್ತು ಚೆನ್ನಾಗಿ ಕೆಲಸ ಮಾಡತಕ್ಕವರಿಗೆ ಪ್ರೋತ್ಸಾಹ ಕೊಡುವುದು ಕೂಡ ಸರ್ಕಾರದ ಕರ್ತವ್ಯವೆಂದು ನಾನಾದರೂ ಕೂಡ ಭಾವಿಸುತ್ತೇನೆ. ಇವತ್ತು ಈ ಇಲಾಖೆಯಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮತ್ತು ಪ್ರಮೋಷನ್ ಕೊಡತಕ್ಕಂಥಾದ್ದು ನಡೆಯುತ್ತಾ ಇದೆ. ಇವರನ್ನು ಆರಿಸತಕ್ಕ ಸಂದರ್ಭದಲ್ಲಿ ಅವರಿಗೆ ಸರಿಯಾದಂಥ ವ್ಯಕ್ತಿತ್ವ ಇದೆಯೋ ಎನ್ನುವುದನ್ನು ಕೂಡ ನೋಡಿ, ಯಾವ ಪ್ರಭಾವಕ್ಕೂ ಕೂಡ ಒಳಗಾಗದೆ, ಅವರ ಪ್ರಾಮಾಣಿಕತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು, ಅವರು ಮುಂದೆ ಕೆಲಸ ಮಾಡುವವರು ಎನ್ನುವುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಅವರನ್ನು ಚುನಾಯಿಸಿಕೊಳ್ಳತಕ್ಕಂಥಾದ್ದು ಉತ್ತಮವೆಂದು ನಾನಾದರೂ ಭಾವಿಸುತ್ತೇನೆ. ಇವರ ಮೇಲೆ ಅನೇಕ ದೂರುಗಳಿವೆ. ಮಾನ್ಯ ಸ್ನೇಹಿತರು ಮಾತನಾಡುತ್ತಾ,

ಲಂಚಕೊಟ್ಟು ಕೆಲಸ ಪಡೆಯುತ್ತಾರೆ, ಕೆಲಸ ಪಡೆದ ನಂತರ ಲಂಚ ತೆಗೆದುಕೊಳ್ಳದೆ ಹೇಗೆ ಇರುವುದಕ್ಕೆ ಆಗುತ್ತದೆ ಎಂದು ಹೇಳಿದರು. ಇದು ಸರಿಯಲ್ಲ ಎಂದು ನಾನಾದರೂ ಕೂಡ ಭಾವಿಸುತ್ತೇನೆ. ಲಂಚವನ್ನು ಕೊಡತಕ್ಕಂಥಾದ್ದು ಪ್ರಥಮತಃ ತಪ್ಪು. ಲಂಚವನ್ನು ಕೊಡಬೇಕು ಎಂದು ಸರ್ಕಾರ ನಿಗಧಿ ಮಾಡಿಲ್ಲ, ಲಂಚ ಕೊಡತಕ್ಕಂಥಾದ್ದು ಒಂದನೇ ತಪ್ಪು, ಲಂಚ ತೆಗೆದುಕೊಳ್ಳತಕ್ಕಂಥಾದ್ದು ಎರಡನೇ ತಪ್ಪು, ಆದುದರಿಂದ ಕೆಟ್ಟ ಪರಿಣಾಮ ಉಂಟಾಗತಕ್ಕ ಇಂತಹ ಮಾತುಗಳನ್ನು ನಾವು ಹೇಳಿ, ಪ್ರಚಾರ ಮಾಡಿ, ಅವನಿಗೆ ಲಂಚ ತೆಗೆದುಕೊಳ್ಳಬೇಕು ಎನ್ನುವ ಭಾವನೆ ಇಲ್ಲದೇ ಇದ್ದರೂ ಕೂಡ ನಾವೇ ಜಾಸ್ತಿ ಮಾಡಿದ ಹಾಗೆ ಆಗುತ್ತದೆ ಎನ್ನುವುದರ ಅರಿವು ನಾವು ಇಟ್ಟುಕೊಳ್ಳಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕು ಇವತ್ತು ಪೋಲೀಸ್ ಇಲಾಖೆಯಲ್ಲಿ ಬಂದಂಥ ಅಧಿಕಾರಿಗಳು ಲಂಚ ಕೊಟ್ಟು ಬಂದಿರುತ್ತಾರೆ ಎಂದು ವಿಧಾನಸಭಾ ಸದಸ್ಯರಾದ ನಾವುಗಳು ತಿಳಿದುಕೊಂಡಿದ್ದೇವೆ, ಆದರೆ ಅವನ ಮೆರಿಟ್‌ನಿಂದ ಅವನ ವಿದ್ಯೆಯ ಮೇಲೆ, ಅವನ ದೇಹದಾರ್ಢ್ಯದ ಮೇಲೆ ಅವನು ಕೆಲಸಕ್ಕೆ ಬಂದಿರುತ್ತಾನೆ, ಅವನು ಬಂದ ನಂತರ ಪ್ರಾಮಾಣಿಕತೆಯಿಂದ ಅವನು ಕೆಲಸ ಮಾಡಬೇಕು ಎಲ್ಲೋ ಲಂಚ ಕೊಟ್ಟು ಅವನು ಕೆಲಸಕ್ಕೆ ಬಂದ ಮೇಲೆ ಲಂಚ ತೆಗೆದುಕೊಳ್ಳದೇ ಏನು ಮಾಡುತ್ತಾನೆ ಎಂದು ಜವಾಬ್ದಾರಿ ಸ್ಥಾನದಲ್ಲಿರತಕ್ಕ ನಾವು ಹೇಳುವುದನ್ನು ನಿಲ್ಲಿಸಿ, ಪತ್ರಿಕೆಯಲ್ಲಿ ಬರದಂತೆ ಮಾಡಿ, ಸರಿಯಾದ ರೀತಿಯಲ್ಲಿ ಕೆಲಸ ನಡೆಯುವ ರೀತಿಯಲ್ಲಿ ನಮ್ಮ ಕರ್ತವ್ಯವನ್ನು ನಾವು ಮಾಡಿದರೆ ಆಗ ಸರಿಹೋಗುತ್ತದೆ ಎನ್ನುವುದನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಪೋಲೀಸ್ ಇಲಾಖೆ ಇನ್ನೂ ವ್ಯವಸ್ಥಿತ ರೀತಿಯಲ್ಲಿ ಸಾರ್ವಜನಿಕರ ಜೊತೆಯಲ್ಲಿ ವ್ಯವಹರಿಸತಕ್ಕಂಥಾದ್ದು, ದುರ್ಬಲರು ಬಂದಾಗ ಅವರಿಗೆ ಸರಿಯಾದ ಸರಿಯಾದಂಥ ರೀತಿಯಲ್ಲಿ ಮಾರ್ಗದರ್ಶನ ಮಾಡತಕ್ಕಂಥಾದ್ದು ರಕ್ಷಣೆ ಕೊಡತಕ್ಕಂಥಾದ್ದು ಈ ಇಲಾಖೆಯ ಕರ್ತವ್ಯ, ಅದನ್ನು ಮಾಡುತ್ತಾ ಇದೆ. ಲೋಪದೋಷಗಳೇನಾದರೂ ಇದ್ದರೆ, ಅದನ್ನು ಸರಿಪಡಿಸಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ. ಜನತೆಯಿಂದಾಗಲೀ, ವಿರೋಧಪಕ್ಷದವರಿಂದಾಗಲೀ ಪದೇ ಪದೇ ದೂರು ಬರತಕ್ಕ ಹವ್ಯಾಸಕ್ಕೆ ಅವಕಾಶ ಕೊಡದೆ ರೀತಿ ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕವರು ನೋಡಿಕೊಳ್ಳಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಪಬ್ಲಿಕ್ ಸರ್ವಿಸ್ ಕಮಿಷನ್. ಅಲ್ಲಿ ಕೆಲಸ ಕೊಡಿಸುವುದಕ್ಕೆ ಹಣ ತೆಗೆದುಕೊಳ್ಳುತ್ತಾರೆ ಎಂದು ಕೆಲವರು ಹೇಳಿದರು. ಅದು ಸರಿಯಾದ ಮಾತಲ್ಲ ಹಣ ಏಕೆ ಕೊಡಬೇಕು. ಹೇಳುವುದಕ್ಕೆ ಹೋದಂಥವರೇ ಏಕೆ ತೆಗೆದುಕೊಳ್ಳಬಾರದು. ಕೆಲಸ ಕೊಡಿ ಎಂದು ನಾನು ರೆಕಮೆಂಡೇಷನ್‌ಗೆ ಹೋಗುತ್ತೇನೆ; ನಾನೇ ಏಕೆ ತೆಗೆದುಕೊಳ್ಳಬಾರದು. ಈ ರೀತಿ ಅವರ ಹೆಸರು ಹೇಳಿ ಮೋಸಮಾಡತಕ್ಕ ಜನರು ಇವತ್ತು ದೇಶದಲ್ಲಿ ಇಲ್ಲದೇ ಇರಲಾರರು ಎಂದು ನಾನಾದರೂ ಭಾವಿಸುತ್ತೇನೆ. ದಲ್ಲಾಳಿಗಳು ಅನೇಕರಿದ್ದಾರೆ. ಬೇರೆಯವರ ಹೆಸರಿನಲ್ಲಿ ದುರುಪಯೋಗಪಡಿಸಿಕೊಂಡು ತಾವು ಅನ್ಯಾಯ ಮಾಡುವುದಕ್ಕೆ ಹೊರಡುತ್ತಾರೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಒಳ್ಳೊಳ್ಳೆಯ ಕೆಲಸ ಮಾಡತಕ್ಕ ಸದಸ್ಯರಿದ್ದಾರೆ. ದಕ್ಷತೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳಿದ್ದಾರೆ, ಪ್ರಾಮಾಣಿಕ ಜನರಿದ್ದಾರೆ. ಇದು ಒಂದು ಉಚ್ಚ ಮಟ್ಟದ ಸಮಿತಿ. ಆ ಸಮಿತಿಯ ಬಗ್ಗೆ ನಾವು ಅಗೌರವ ತೋರಿಸತಕ್ಕ ರೀತಿಯಲ್ಲಿ ಮಾತನಾಡತಕ್ಕಂಥಾದ್ದು ಯೋಗ್ಯವಲ್ಲ ಎಂದು ನಾನಾದರೂ ಕೂಡ ಹೇಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ. ಕೆಲಸಕ್ಕೆ ಅಪ್ಲೈ ಮಾಡಿದ ಹುಡುಗರಿಂದ ಹಣವನ್ನು ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ತೆಗೆದುಕೊಳ್ಳತಕ್ಕಂಥಾ ಮೋಸಗಳು ನಡೆದಿದೆ.

ಶ್ರೀ ಬಿ. ಬೈರಪ್ಪಾಜಿ.—ಅವರು ನಮ್ಮ ಹತ್ತಿರ ನಿಮ್ಮ ಹತ್ತಿರ ಬಂದು ಹೇಳಲಿಲ್ಲ. ಅನಾವಶ್ಯಕವಾಗಿ ಬೀದಿಯಲ್ಲಿ ಮಾತನಾಡತಕ್ಕದ್ದು ಅದು. ಈ ರೀತಿಯಾಗಿ ಮರ್ಯಾದಸ್ಥರು. ಒಳ್ಳೆಯ ಜನಗಳ ಮರ್ಯಾದೆಯನ್ನು ಕಳೆಯತಕ್ಕ ಮಾತು ಕೂಡ ನಡೆಯುತ್ತದೆ. ನಾವು ಜವಾಬ್ದಾರಿಯುತವಾದ ಸದಸ್ಯರು, ಒಂದು ಜವಾಬ್ದಾರಿಯುತವಾದ ಸಂಸ್ಥೆಯ ಮೇಲೆ ಮತ್ತು ಅದರ ಸದಸ್ಯರ ಮೇಲೆ ದೋಷಾರೋಪಣೆಯನ್ನು ಮಾಡತಕ್ಕಂಥಾದ್ದು ಯೋಗ್ಯವಲ್ಲ ಎಂದು ನಾನಾದರೂ ಕೂಡ ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಒಂದು ಕಾರ್ಯ ಕ್ಷೇತ್ರದಲ್ಲಿ ನಾವು ಕೆಲಸ ಮಾಡಬೇಕು, ನಾವೂ ಕೂಡ ಪ್ರಾಮಾಣಿಕತೆಯಿಂದ ಕೆಲಸಮಾಡಬೇಕು. ಈ ದೇಶದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಚೆನ್ನಾಗಿ ಕೆಲಸ ಮಾಡುತ್ತಾ ಇದೆ, ಅಲ್ಲಿರತಕ್ಕ ಸದಸ್ಯರು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾ ಇದ್ದಾರೆ, ಅವರ ಬಗ್ಗೆ ನಾವು ಲಘುವಾಗಿ ಮಾತನಾಡತಕ್ಕ ಒಂದು ಹವ್ಯಾಸವನ್ನು ಬಿಡುವುದು ಉಚಿತ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಜೈಲುಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಬಹುಶಃ ನಮ್ಮ ಸರ್ಕಾರ ಬಂದ ಮೇಲೆ ಜೈಲಿನ ಇತಿಹಾಸದಲ್ಲಿ ಆಗದೇ ಇರತಕ್ಕ ಅನೇಕ ರೀತಿಯ ಮಾರ್ಪಾಟುಗಳು ಮತ್ತು ಬದಲಾವಣೆಗಳು ಆಗಿವೆ. ಹಿಂದೆ ನಾನು ಜೈಲಿಗೆ ಹೋದಾಗ ನೋಡಿದ್ದ ಆಗಿದ ಸಂದರ್ಭ, ಆಗಿನ ವಾತಾವರಣಕ್ಕೂ, ಈಗಿನ ವಾತಾವರಣಕ್ಕೂ ಅಜಗಜಾಂತರ ವ್ಯತ್ಯಾಸವಾಗಿದೆ ಎನ್ನುವುದನ್ನು ನಾವು ಯಾರೂ ಕೂಡ ಮರೆಯುವಂತಿಲ್ಲ. ಜೈಲಿಗೆ ಬಂದಂಥ ಖೈದಿಗಳ ಮನಸ್ಸನ್ನು ಪರಿವರ್ತನೆ ಮಾಡತಕ್ಕಂಥ ಕಾರ್ಯವನ್ನು ಮಾಡಬೇಕು ಎಂದು ನಾನು ಒತ್ತಾಯಮಾಡಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ, ಖೈದಿಗಳು ತಿಳಿದೋ ತಿಳಿದೆಯೋ ಮಾಡಿದಂಥ ತಪ್ಪಿಗಾಗಿ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಜೈಲಿಗೆ ಕೆಲವರು ಒಳ್ಳೆಯವರೂ ಕೂಡ ಬಂದಿರುತ್ತಾರೆ ಅವರ ಮನಸ್ಸನ್ನು ಪರಿವರ್ತನೆಮಾಡಿ, ಅವರು ಸಮಾಜದಲ್ಲಿ ಮುಂದೆ ಉತ್ತಮವಾದ ಬಾಳನ್ನು ನಡೆಸತಕ್ಕ ಒಂದು ರೀತಿಗೆ ತೆಗೆದುಕೊಂಡು ಹೋಗಿ ಬಿಡತಕ್ಕದ್ದು ಜೈಲಿನ ವ್ಯವಸ್ಥೆ ನೋಡಿಕೊಳ್ಳತಕ್ಕವರ ಕರ್ತವ್ಯವೆಂದು ನಾನಾದರೂ ಕೂಡ ಭಾವಿಸುತ್ತೇನೆ. ಪತ್ರಿಕೆಯಲ್ಲಿ ಓದುತ್ತಾ ಇರುತ್ತೇನೆ ಏನೆಂದರೆ ಮಹಾಬೋಧಿ ಸಂಸ್ಥೆಯವರು ಆಗಾಗ್ಗೆ ಬೆಂಗಳೂರಿನಲ್ಲಿರತಕ್ಕ ಜೈಲಿಗೆ ಹೋಗಿ, ಖೈದಿಗಳ ಬಗ್ಗೆ ವಿಚಾರಮಾಡಿ ಬರುತ್ತಾರೆ ಎಂದು. ಅಂತಹವರನ್ನು ಅನೇಕ ಸಾರಿ ಕರೆದುಕೊಂಡು ಹೋಗಿ, ಪ್ರತ್ಯಕ್ಷವಾಗಿ ಅವರ ಪರಿಚಯಮಾಡಿಸಿ, ಅವರಿಂದ ಬೋಧನೆ ಮಾಡಿಸಿ ಖೈದಿಗಳ ಪರಿವರ್ತನೆ ಮಾಡತಕ್ಕಂಥ ಕಾರ್ಯ ಅಲ್ಲಿ ನಡೆಯಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಅಲ್ಲಿ ಅನೇಕ ರೀತಿಯ ಸಣ್ಣ ಕೈಗಾರಿಕೆಗಳನ್ನು ಕೂಡ ಮಾಡಿಸುತ್ತಾ ಇದ್ದಾರೆ. ಅವರಿಗೆ ಕೊಡತಕ್ಕ ಕೂಲಿ ಏನಿದೆ ಅದು ಬಹಳ ಕಡಿಮೆ. ಆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಪುನರ್ವಿಮರ್ಶೆಮಾಡಿ ಖೈದಿಗಳು ಜೈಲನ್ನು ಬಿಟ್ಟು ಹೋಗುವಾಗ ಅವರು ಕಷ್ಟಪಟ್ಟು ದುಡಿದಂಥ ಹಣ ಸ್ವಲ್ಪ ಹೆಚ್ಚಿನ ರೀತಿಯಲ್ಲಿ ಅವರ ಕೈಗೆ ಸಿಗತಕ್ಕ ವ್ಯವಸ್ಥೆಯನ್ನು ಮಾಡಬೇಕು, ತನ್ಮೂಲಕ ಅವರು ಹೊರಗಡೆ ಬಂದನಂತರ ಅವರ ಮುಂದಿನ ಜೀವನದಲ್ಲಿ ಉತ್ತಮವಾದಂಥ ಬಾಳ್ವೆಯನ್ನು ನಡೆಸುವುದಕ್ಕೆ ಇದರಿಂದ ಸಹಾಯಕವಾಗುತ್ತದೆ, ಆದುದರಿಂದ ಕೂಲಿ ದರವನ್ನು ವಿಮರ್ಶೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಫೈರ್‌ಪ್ರೊಟೆಕ್ಷನ್ ಮತ್ತು ಕಂಟ್ರೋಲ್ ಇದು ಜಿಲ್ಲಾ ಕೇಂದ್ರಗಳಲ್ಲಿ ಎಲ್ಲಾ ಕಡೆಯಲ್ಲಿಯೂ ಇಲ್ಲ. ಮಂಡ್ಯದಲ್ಲಿ ಸುಮಾರು ೭೦ ಸಾವಿರ ರೂಪಾಯಿಗಳ ದವಸಧಾನ್ಯ ಸುಟ್ಟು ಹೋಯಿತು ಎಂದು ನಾವು ಪತ್ರಿಕೆಯಲ್ಲಿ ಓದಿದೆವು ದೇಶದ ಅನೇಕ ಕಡೆಯಲ್ಲಿ ಈ ದೃಶ್ಯವನ್ನು ನಾವು ಕಾಣುತ್ತಿದ್ದೇವೆ. ಈ ದಿಸೆಯಿಂದ ಅನೇಕ ರೀತಿಯಲ್ಲಿ ತೊಂದರೆಗೆ ಒಳಗಾಗಿರತಕ್ಕಂಥ ಸಂದರ್ಭಗಳು ಜಿಲ್ಲಾ ಕೇಂದ್ರಗಳಲ್ಲಿರುತ್ತವೆ. ಆದ್ದರಿಂದ ಫೈರ್‌ಪ್ರೊಟೆಕ್ಷನ್ ಮತ್ತು ಕಂಟ್ರೋಲ್ ಅನ್ನು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿಯೂ ತೆಗೆಯಬೇಕು. ತನ್ಮೂಲಕ ಜನಗಳಿಗೆ, ಅವರ ಆಸ್ತಿ ರಕ್ಷಣೆ ಕೊಡತಕ್ಕದ್ದು ಉಚಿತ ಎಂದು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

5-30 P. M.

ಇನ್ನು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಹಿಂದೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಆಗಿದ್ದಂಥ ಸಂಸ್ಥೆಯನ್ನು ನಮ್ಮ ಸರ್ಕಾರದವರು ದೂರದೃಷ್ಟಿಯಿಂದ, ಇದನ್ನು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿದ್ದಾರೆ. ಹಿಂದಿನ ಅಧ್ಯಕ್ಷರಾದವರು ಬೆಂಗಳೂರು ಜನರಿಗೆ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಅಲ್ಲಿರತಕ್ಕ ಅಧ್ಯಕ್ಷರು ಮತ್ತು ದಕ್ಷರು, ವಿದ್ಯಾವಂತರು ಮತ್ತು ಒಳ್ಳೆಯ ಕೆಲಸಗಳನ್ನು ಮಾಡಿರತಕ್ಕವರು. ಅನೇಕ ಬಡವರಿಗೆ ಸೈಟುಗಳನ್ನು ಕೊಟ್ಟಿದ್ದಾರೆ.

ಶ್ರೀ ಎಸ್ ಹಮೀದ್ ಷಾ.—ನೀವು ಬೆಂಗಳೂರಿನಿಂದ ಬಂದಿದ್ದೀರಾ ಸ್ವಾಮಿ?

ಶ್ರೀ ಬಿ. ಬೈರಪ್ಪಾಜಿ.—ಬೆಂಗಳೂರಿನಿಂದ ಬರದೆ ಇದ್ದರೂ ಸಹ ಅವರ ವಿಚಾರವನ್ನು ತಿಳಿದು ಕೊಂಡಿದ್ದೇವೆ. ಇವತ್ತು ನಾಲ್ಕನೆಯ ದರ್ಜೆಯ ಜವಾನರಿಗೆ ಮತ್ತು ಕಡಿಮೆ ಆದಾಯ ಬರತಕ್ಕವರಿಗೆ ಹೆಚ್ಚಿನ ಪ್ರಮಾಣದಲ್ಲಿ ಸೈಟುಗಳನ್ನು ಕೊಟ್ಟಿದ್ದಾರೆ. ಹಿಂದೆ ಯಾರೂ ಇಷ್ಟು ಪ್ರಮಾಣದಲ್ಲಿ ಕಡಿಮೆ ಆದಾಯ ಬರತಕ್ಕವರಿಗೆ ಸೈಟುಗಳನ್ನು ಕೊಟ್ಟಿರಲಿಲ್ಲ, ಇಷ್ಟು ದೊಡ್ಡ ಪ್ರಮಾಣದಲ್ಲಿ ಬಡವರಿಗೆ ಸೈಟುಗಳನ್ನು ಹಂಚಿರುವುದು ಟ್ರಸ್ಟ್ ಬೋರ್ಡಿನ ಇತಿಹಾಸದಲ್ಲಿ ಪ್ರಥಮ ಎಂದು ನಾನಾದರೂ ಕೂಡ ಭಾವಿಸುತ್ತೇನೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಆದನಂತರ ಅವರೇ ಅಧ್ಯಕ್ಷರಾಗಿದ್ದಾರೆ,

ಮತ್ತು ಅಲ್ಲಿ ಉತ್ತಮ ಸದಸ್ಯರೂ ಕೂಡ ಇದ್ದಾರೆ. ಇವರು ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಂಗಳೂರಿನಲ್ಲಿರತಕ್ಕ ಬಡವರಿಗೆ ಮಧ್ಯಮವರ್ಗದವರಿಗೆ ಸೈಟುಗಳನ್ನ ಮನೆಗಳನ್ನು ಕಟ್ಟಿಸಿಕೊಡುವುದರ ಮೂಲಕ ಹೆಚ್ಚಿನ ಅನುಕೂಲವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ಇದು ಬಹಳ ಮುಖ್ಯವಾದಂಥ ಸಂಸ್ಥೆ ಎಂದು ನಾನಾದರೂ ಕೂಡ ಹೇಳಬಯಸುತ್ತೇನೆ.

ಇನ್ನು ಇರಿಗೇಷನ್ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ: ನಮ್ಮ ಜಿಲ್ಲೆಯ ಪರವಾಗಿ ಪ್ರಥಮವಾಗಿ ನಾನು ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಕಾವೇರಿ ಬೇಸಿನ್‌ನಲ್ಲಿ ೩-೪ ಪ್ರಾಜೆಕ್ಟಗಳು ಏನು ಇವೆ, ಅದರಲ್ಲಿ ಹೇಮಾವತಿ ಪ್ರಾಜೆಕ್ಟ ಒಂದೂ. ಇದನ್ನು ನಮಗೋಸ್ಕರ ಹಿಂದಿನ ಸರ್ಕಾರದವರು ಮಾಡಿರಲಿಲ್ಲ. ತುಮಕೂರು ಜಿಲ್ಲೆ, ಮಾನ್ಯ ಕೃಷ್ಣಪ್ಪನವರು ನಾಗಮಂಗಲ ತಾಲ್ಲೂಕಿಗೆ ನೀರನ್ನು ಒದಗಿಸತಕ್ಕಂಥ ಒಂದು ದೂರದೃಷ್ಟಿಯ ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕಾರ್ಯರೂಪಕ್ಕೆ ತರತಕ್ಕದ್ದು ಸನ್ನಿಹಿತವಾಗಿದೆ.

ಶ್ರೀ ಟಿ. ಎಂ. ಮಂಜುನಾಥ್.—ಕಾವೇರಿ ನೀರಿನ ವಿವಾದದ ಇನ್ನೂ ಇತ್ಯರ್ಥವಾಗಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಮಾಡಿರತಕ್ಕ ಒಳ್ಳೆಯ ಕೆಲಸಗಳನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನೀರನ್ನು ಒದಗಿಸತಕ್ಕಂಥ ಕೆಲಸಕ್ಕೆ ಚಾನಲ್ ಅನ್ನು ಅಗಲ ಮಾಡತಕ್ಕಂಥ ವ್ಯವಸ್ಥೆಗೆ ಸರ್ಕಾರದವರು ಮುಂಜೂರಾತಿಯನ್ನು ಕೊಟ್ಟಿದ್ದಾರೆ ಸರ್ಕಾರದವರ ಆರು ಕೋಟಿ ರೂಪಾಯಿಗಳನ್ನು ಕೊಟ್ಟು ಚಾನಲ್ ಅನ್ನು ಅಗಲ ಮಾಡಿ, ತುಮಕೂರು ತಿಪಟೂರು ಗುಬ್ಬಿ, ನಾಗಮಂಗಲ ತಾಲ್ಲೂಕುಗಳಿಗೆ ನೀರನ್ನು ಒದಗಿಸತಕ್ಕಂಥ ಕಾರ್ಯವನ್ನು ಮಾಡುವುದಕ್ಕೆ ಮುಖ್ಯಮಂತ್ರಿಗಳು ತಮ್ಮ ಔದಾರ್ಯದಿಂದ ಮುಂದೆ ಬಂದಿದ್ದಾರೆ. ಆದ್ದರಿಂದ ತುಮಕೂರು ಜಿಲ್ಲೆಯ ಪರವಾಗಿ ಅವರನ್ನು ಅಭಿನಂದಿಸುತ್ತೇನೆ. ಈ ಒಂದು ಕಾಮಗಾರಿ ಕರ್ನಾಟಕ ರಾಜ್ಯದಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಕಡಿಮೆ ಖರ್ಚಿನಲ್ಲಿ ಆಗತಕ್ಕ ಕಾಮಗಾರಿ. ಒಂದು ಎಕರೆಗೆ ಒಂದೂವರೆ ಅಥವಾ ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ನಮ್ಮ ಜಿಲ್ಲೆಗೆ ಬರತಕ್ಕ ನಾಲೆ ಏನುಇದೆ ಅದನ್ನು ತಗೆದು ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಸುಮಾರು ೨೦ ಕೋಟಿ ರೂಪಾಯಿಗಳ ಅಂದಾಜು ಯೋಜನೆಯನ್ನು ತಯಾರು ಮಾಡಿದ್ದಾರೆ. ಕಳೆದ ಅಧಿವೇಶನದಲ್ಲಿ ನಾನು ನಮ್ಮ ಕಡೆಯಿಂದ ಅಡ್ವಾನ್ಸ್‌ಕಂಟ್ರಿಬ್ಯೂಷನ್ ಅನ್ನು ಕೊಡುತ್ತೇನೆಂದು, ನಮಗೆ ನೀರನ್ನು ಒದಗಿಸಿಕೊಡಿ ಎಂದು ಕೇಳಿದ್ದೆನು. ಈ ರೀತಿಯಾಗಿ ಯಾರೂ ಕೂಡ ಮುಂದೆ ಬಂದು ಹೇಳಿಲ್ಲ. ನಮಗೆ ನೀರಿನ ಅವಶ್ಯಕತೆ ಇದೆ, ನಮ್ಮ ಏರಿಯಾ ಆಗಾಗ್ಗೆ ಬರಗಾಲಕ್ಕೆ ಸಿಕ್ಕತಕ್ಕ ಜಿಲ್ಲೆ. ಮಳೆ ಆಧಾರ ಇಟ್ಟುಕೊಂಡಿರತಕ್ಕ ನಮ್ಮ ಜಿಲ್ಲೆಗೆ ಇದು ವರಪ್ರಧಾನವಾದಂಥ ಯೋಜನೆ. ಮಾನ್ಯ ಮುಖ್ಯಮಂತ್ರಿಗಳು ಚಾನಲ್‌ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ನಮ್ಮ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಡುವುದಕ್ಕೆ ತಯಾರಿದ್ದೇವೆ. ಈ ಬಗ್ಗೆ ಯಾವ ರೀತಿಯ ವ್ಯವಸ್ಥೆಯನ್ನು ಮಾಡಬೇಕು ಎನ್ನುವುದನ್ನು ತಾವು ಮಾಡಬೇಕು. ಆದಷ್ಟು ಬೇಗ ಕಾರ್ಯ ಕೈಗೂಡತಕ್ಕ ದಿಸೆಯಲ್ಲಿ ಮತ್ತು ನಮ್ಮ ಜಿಲ್ಲೆಗೆ ಅನುಕೂಲವಾಗತಕ್ಕ ರೀತಿಯಲ್ಲಿ ಕೆಲಸ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ಈ ಒಂದು ಕಾರ್ಯವನ್ನು ಪ್ರಾರಂಭಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ಮತ್ತು ಮಾನ್ಯ ಮುಖ್ಯ ಮಂತ್ರಿಗಳು ತಂದಿರತಕ್ಕ ಬೇಡಿಕೆಗಳಿಗೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ಕೊಟ್ಟು, ಅಧ್ಯಕ್ಷರಿಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಜೆ. ಎಲ್. ಕಬಾಡಿ —(ಬಳ್ಳೊಳ್ಳಿ) ಮಾನ್ಯಅಧ್ಯಕ್ಷರೇ, ಇವತ್ತು ಮಾನ್ಯಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಯ ಕೆಲವೊಂದು ಬಾಬುಗಳನ್ನು ನಾನು ವಿರೋಧಿಸಿ ಮಾತನಾಡ ಬೇಕಾಗಿದೆ.

ಶ್ರೀ ಡಿ. ದೇವರಾಜ್‌ಅರಸ್. —ಬಿಜಾಪುರ ಜಿಲ್ಲೆಯಲ್ಲಿರತಕ್ಕ ಪ್ರಾಜೆಕ್ಟ್‌ಗಳಿಗೆ ದುಡ್ಡು ಬೇಡವೇ?

ಶ್ರೀ ಜೆ. ಎಲ್. ಕಬಾಡಿ.—ನಾನು ಹೇಳತಕ್ಕ ವಿಷಯವನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಸರ್ಕಾರ ಒಳ್ಳೆಯ ಕೆಲಸಗಳನ್ನು ಮಾಡಿದೆ. ಆದರೆ ಸರ್ಕಾರದ ಮೇಲಿರತಕ್ಕ ಕೆಲವು ಅಪಾದನೆಗಳನ್ನು ಕೆಲವು ಮಾನ್ಯ ಸದಸ್ಯರು ಒಂದು ಪಟ್ಟಿಯನ್ನು ಮಾಡಿ ಕೇಂದ್ರಸರ್ಕಾರದ ಪ್ರಧಾನಮಂತ್ರಿಗಳಿಗೆ ಮತ್ತು ರಾಜ್ಯಪಾಲರಿಗೂ ಕೊಟ್ಟಿದ್ದಾರೆ. ಅದರಲ್ಲಿ ಅವರು ಸುಮಾರು ೯೯ ಅಂಶಗಳನ್ನು ತೋರಿಸಿ ಕೊಟ್ಟಿದ್ದಾರೆ. ಇದು ಅವರವರ ಪಾರ್ಟಿಗೆ ಸಂಬಂಧಿಸಿದ ವಿಷಯ ಆದರೂ ಸಹ ಇದರ ಬಗ್ಗೆ ರಾಜ್ಯಸಭೆಯಲ್ಲಿ

ಪ್ರಸ್ತಾಪಮಾಡಲಾಗಿದೆ. ಅಲ್ಲಿ ಗೃಹಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ. ಆಪಾದನೆಗಳ ಪಟ್ಟಿ ಬಂದಿದೆ, ನಿಜ, ಇದರ ಬಗ್ಗೆ ತನಿಖೆ ಮಾಡಿ ವರದಿಯನ್ನು ತರಿಸಿಕೊಂಡನಂತರ ಕ್ರಮ ತೆಗೆದುಕೊಳ್ಳುತ್ತೇವೆಂದು. ಆ ಆಪಾದನೆಯ ಪಟ್ಟಿಯನ್ನು ಅದರಲ್ಲಿ ಏನು ಇದೆ ಎನ್ನುವುದನ್ನೂ ಸಭೆಗೆ ವಿಷದೀಕರಿಸಬೇಕಾದ್ದು ಬಹಳ ಸೂಕ್ತ ಎಂದು ನಾನು ತಿಳಿದುಕೊಂಡಿದ್ದೇನೆ. ತಮ್ಮ ಮೇಲೆ ಬಂದಿರತಕ್ಕ ಆಪಾದನೆಗಳು ನಿಜವೋ ಸುಳ್ಳೋ, ಅಥವಾ ಸತ್ಯಕ್ಕೆ ದೂರವಾದವೋ ಎನ್ನುವುದನ್ನು ರಾಜ್ಯದ ಜನತೆಗೆ ತೋರಿಸಿಕೊಡಬೇಕಾದದ್ದು ತಮ್ಮ ಮುಖ್ಯ ಕರ್ತವ್ಯ. ಆಪಾದನೆಗಳು ಏನೇ ಇರಲಿ, ಅವು ಸುಳ್ಳೋ ಅಥವಾ ನಿಜವೋ ಎನ್ನುವುದನ್ನು ವಿಷದೀಕರಿಸಿ ಹೇಳಿದರೆ ರಾಜ್ಯದ ಜನತೆಗೆ ತಮ್ಮ ಮೇಲಿರತಕ್ಕ ಅನುಮಾನ ದೂರವಾಗುತ್ತದೆ

ಶ್ರೀ ಡಿ. ದೇವರಾಜ ಅರಸ್.—ಜನತೆಗೆ ಅನುಮಾನ ಇಲ್ಲ, ನಿಮಗೆ ಅನುಮಾನ ಇರಬೇಕು.

ಶ್ರೀ ಜೆ ಎಲ್. ಕಬಾಡಿ.—ರಾಜ್ಯಸಭೆಯಲ್ಲಿ ಇದರ ಬಗ್ಗೆ ಪ್ರಸ್ತಾಪಮಾಡಿದಾಗ ಅದು ಪೇಪರ್‌ನಲ್ಲಿಯೂ ಬಂತು. ಜನತೆ ಇದರ ಬಗ್ಗೆ ನಮಗೆ ಪ್ರಶ್ನೆ ಕೇಳುತ್ತಿದ್ದಾರೆ, ಅವರ ಶಂಕೆಯನ್ನು ತಾವು ದೂರು ಮಾಡುವುದು ಒಳ್ಳೆಯದು; ಎಂದು ನಾನಾದರೂ ತಿಳಿದು ಕೊಂಡಿದ್ದೇನೆ. ಅದರ ಪ್ರಕಾರ ಗೌರ್ನರ್‌ಗೆ ಒಂದು ಪ್ರತಿಯನ್ನು ಕೊಟ್ಟಿದೆ. ಏತಕ್ಕೆ ಕೊಟ್ಟರೋ ಗೊತ್ತಿಲ್ಲ. ಇನ್ನೂ ಆಪಾದನೆಗಳ ಪಟ್ಟಿಯನ್ನು ತಯಾರು ಮಾಡಿ ಕಳುಹಿಸುತ್ತಾರೆ ಎನ್ನುವ ಕೇಳಿಕೆ ಕೂಡ ಇದೆ. ಆದುದರಿಂದ ಇದನ್ನು ವಿರೋಧಿಸಿ ಹೇಳುವುದು ಸೂಕ್ತವೆಂದು ತಿಳಿದುಕೊಂಡಿದ್ದೇನೆ.

ಇನ್ನು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ವಿಷಯದಲ್ಲಿ ರಾಜ್ಯದಲ್ಲಿ ಒಂದು ಸೆಲ್‌ನ್ನು ಏರ್ಪಾಡು ಮಾಡಿ ಹರಿಜನರ ಬಗ್ಗೆ ಕಳಕಳಿಯ ಅನುಕಂಪವನ್ನು ಹುಟ್ಟಿಸಬೇಕೆಂದು ಮಾಡಿದಿರಿ. ಇದರ ಬಗ್ಗೆ ಏನು ಎಷ್ಟು ಆಪಾದನೆಗಳು ಬಂದವು, ಅವುಗಳನ್ನು ಸಮೀಕ್ಷೆ ಮಾಡಿದ್ದೀರಾ, ಇದರ ಬಗ್ಗೆ ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂದು ನೋಡಿದರೆ ಏನೂ ಕಂಡು ಬಂದಿಲ್ಲ. ಕೇಸುಗಳನ್ನು ಹಾಕಿದರೆ ಅದರಿಂದ ಏನೂ ಪ್ರಯೋಜನವಾಗಿಲ್ಲ. ಎಷ್ಟೋ ಕಡೆ ಅರ್ಜಿಗಳನ್ನು ಇಲ್ಲಿಗೆ ಕಳುಹಿಸುವ ಬದಲು ಅಲ್ಲಿಯೇ ಕೊಟ್ಟಿದ್ದರೆ ಚೆನ್ನಾಗಿತ್ತು ಎಂದು ಹೇಳುತ್ತೇನೆ. ನಿಮಗೆ ಎಷ್ಟು ಪಿಟಿಷನ್‌ಗಳು ಬಂದಿವೆ, ಎಷ್ಟು ಕೇಸುಗಳನ್ನು ಕೋರ್ಟಿಗೆ ದಾಖಲು ಮಾಡಿದ್ದೀರಿ ಎಂದು ನೋಡಿದರೆ ಅದರಲ್ಲಿ ಏನೂ ಪ್ರಗತಿದಾಯಕವಾಗಿ ಕಾಣುತ್ತಾ ಇಲ್ಲವೆಂದು ಹೇಳಬೇಕಾಗಿದೆ.

ಸ್ವಾಮಿ ಇನ್ನೊಂದು ವಿಷಯ ಏನೆಂದರೆ ಪೋಲೀಸ್ ನಡತೆಯ ಬಗ್ಗೆ ಹೇಳುವುದಾದರೆ, ಇವತ್ತು ಲಂಚದ ಹಾವಳಿ ಪಾತ್ರ ಕೆಳಮಟ್ಟದಲ್ಲಿ ಇನ್ನೂ ಇದ್ದೇ ಇದೆ; ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸ್ವಾಮಿ, ಈ ಸಮಯದಲ್ಲಿ ಒಂದೇ ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ ಆದರೆ ತಾವು ಇದರ ಮೇಲೆ ಕ್ರಮ ತೆಗೆದುಕೊಳ್ಳುವುದಾದರೆ ಅವರ ಹೆಸರು ಹೇಳುತ್ತೇನೆ. ಬಿಜಾಪುರದಲ್ಲಿ ಒಬ್ಬ ವಿಧವೆ ಲಕ್ಷ್ಮೀಬಾಯಿ ಎನ್ನುವವಳು ತನ್ನ ಮನೆಯ ಸಾಮಾನುಗಳನ್ನು ಒಂದು ಗಿರವಿ ಅಂಗಡಿಯಲ್ಲಿ ಒತ್ತೆ ಇಟ್ಟು ಹಣ ತೆಗೆದುಕೊಂಡಿದ್ದಳು. ಅನಂತರ ಋಣ ಪರಿಹಾರ ಕಾಯಿದೆ ಬಂದಮೇಲೆ ಅವಳು ಬಿಜಾಪುರದ ಗಾಂಧಿಚೌಕ ಪೋಲೀಸ್ ಸ್ಟೇಷನ್ ಸಬ್ ಇನ್‌ಸ್ಪೆಕ್ಟರಗೆ ತನ್ನ ಸಾಮಾನುಗಳನ್ನು ಬಿಡಿಸಿಕೊಡಬೇಕೆಂದು ಫಿರ್ಯಾದು ಕೊಟ್ಟಳು. ನಂತರ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಆ ಗಿರವಿ ಅಂಗಡಿಯಿರದ ಆಕೆಯ ಸಾಮಾನುಗಳನ್ನು ತೆಗೆದುಕೊಂಡು ಬಂದು, ಆಕೆಯನ್ನು ಕರೆದು ನಿನ್ನ ಸಾಮಾನುಗಳನ್ನು ತಂದಿಟ್ಟಿದ್ದೇವೆ ತೆಗೆದುಕೊಂಡು ಹೋಗು ಎಂದು ಹೇಳಿದರು. ಆಕೆ ತೆಗೆದು ಕೊಳ್ಳಲು ಹೋದಾಗ 200 ರೂಪಾಯಿಗಳನ್ನು ಕೊಟ್ಟು ತೆಗೆದುಕೊಂಡು ಹೋಗು ಎಂದು ಆ ಸಬ್ ಇನ್‌ಸ್ಪೆಕ್ಟರ್ ಕೇಳಿದಾಗ ಅವಳು ನಾನು ವಿಧವೆ ನನ್ನ ಹತ್ತಿರ ಹಣವಿಲ್ಲ ಎಂದು ಹೇಳಿದ್ದಾಳೆ. ನಂತರ ಸಬ್ ಇನ್‌ಸ್ಪೆಕ್ಟರ್ ನೀನು ದುಡ್ಡು ಕೊಟ್ಟರೇ ಸರಿ, ಕೊಡದೇ ಹೋದರೆ ಪೋಲಿಸ್ ಠಾಣೆಯೊಳಗೆ ಹಾಕುತ್ತೇವೆ ಎಂದು ಹೆದರಿಸಿದ್ದಾರೆ. ಆಗ ಆಕೆ ತಾವು ಏನು ಸಾಮಾನುಗಳನ್ನು ಬಿಡಿಸಿಕೊಂಡು ಬಂದಿದ್ದೀರಿ ಅದನ್ನು ಕೊಟ್ಟರೆ ಅದನ್ನು ಮಾರಾಟ ಮಾಡಿ ನಿಮಗೆ ದುಡ್ಡು ತಂದು ಕೊಡುತ್ತೇನೆ ಎಂದು ಹೇಳಿ ಮಾರಾಟ ಮಾಡಿ ಅವರಿಗೆ ಹಣ ಕೊಟ್ಟಿದ್ದಾಳೆ ಈಬಗ್ಗೆ 1-3-1976 ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಅರ್ಜಿಯನ್ನು ಕೊಟ್ಟಿದ್ದಾಳೆ. ಬೇಕಾದರೆ ಈ ಅರ್ಜಿಯ ನಕಲು ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಈರೀತಿ ತಂದಂಥ ಸಾಮಾನುಗಳನ್ನು ಪೇಟೆಯಲ್ಲಿ ಮಾರಿಸಿ ಹಣವನ್ನು ತೆಗೆದುಕೊಂಡಿದ್ದಾರೆ. ಅದರ ರಸೀದಿ ಕೂಡ ಇದೆ. 5 ಕೆ.ಜಿ. 600ಗ್ರಾಂ ಹಿತ್ತಾಳೆ ಮತ್ತು ತಾಮ್ರದ ಸಾಮಾನುಗಳನ್ನು 112 ರೂಪಾಯಿಗಳಿಗೆ ಮಾರಿದ್ದೇನೆ ಎಂದು ಬರೆದುಕೊಟ್ಟಿದ್ದಾಳೆ. ತಮಗೆ ಕಳುಹಿಸಿರುವ ಅರ್ಜಿಯಲ್ಲಿ ಆ ಸಬ್ ಇನ್‌ಸ್ಪೆಕ್ಟರ್ ಲಂಚ

ವನ್ನು ತೆಗೆದುಕೊಂಡು ಸಾಮಾನುಗಳನ್ನು ಕೊಟ್ಟಿದ್ದಾರೆಂದು ತನ್ನ ಅರ್ಜಿಮುಖಾಂತರ ವಿನಂತಿಸಿಕೊಂಡಿದ್ದಾಳೆ. ಇವತ್ತು ಇಂಥ ಪ್ರಕರಣಗಳನ್ನು ಯಾರೂ ಕೇಳುವುದಕ್ಕೆ ಮುಂದೆ ಹೋಗುವುದಿಲ್ಲ. ಏಕೆ ಎಂದರೆ ನಾವು ಏನಾದರೂ ಕೇಳುವುದಕ್ಕೆ ಹೋದರೆ ಪೋಲೀಸರು ನಮ್ಮನ್ನು ಒಳಗೆ ಒಯ್ಯುತ್ತಾರೆ ಎನ್ನುವ ಹೆದರಿಕೆ ಜನಗಳಲ್ಲಿ ಬಂದಿದೆ.

ಶ್ರೀ ಡಿ. ದೇವರಾಜ ಅರಸ್.—ಇದು ಯಾವಾಗ ಆಯಿತು ?

ಶ್ರೀ ಜೆ. ಎಲ್. ಕಬಾಡಿ.—ನಾನು ಮೊನ್ನೆ ಬಿಜಾಪುರಕ್ಕೆ ಹೋಗಿದ್ದಾಗ ಇದು ತಿಳಿಯಿತು ಬಿಜಾಪುರದ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ತನ್ನ ಮಗಳ ಮದುವೆಗೆ ರಜಾ ತೆಗೆದುಕೊಂಡು ಹೋಗಿದ್ದಾರೆ; ಡಿ.ಎಸ್.ಪಿ. ಈಗ ಇನ್‌ಛಾರ್ಜ್ ಇದ್ದಾರೆ. ಈರೀತಿ ಪೋಲೀಸ್ ಸ್ಟೇಷನ್‌ಗಳಲ್ಲಿ ಅವ್ಯವಹಾರಗಳು ಅವ್ಯಾಹತವಾಗಿ ನಡೆಯುತ್ತಿವೆ. ಇಷ್ಟೇ ಅಲ್ಲ ಬಿಜಾಪುರ, ಗದಗ, ಹುಬ್ಬಳ್ಳಿಯಲ್ಲಿ ಕಳ್ಳಬಟ್ಟಿ ತಯಾರುಮಾಡುವುದೂ ಕೂಡ ನಡೆಯುತ್ತಿದೆ. ಇದರಲ್ಲಿ ಕೂಡ ಲಂಚ ಬರುತ್ತದೆ. ಉದಾಹರಣೆಗೆ ಹೇಳುವುದಾದರೆ ಗದಗ್‌ನಲ್ಲಿ ಒಬ್ಬ ಇನ್‌ಸ್ಪೆಕ್ಟರ್ 6 ವರ್ಷಗಳಿಂದ ಇದ್ದರು 1973 ರಲ್ಲಿ ಐ ಜಿ. ಅವರು ಗದುಗಿಗೆ ಭೇಟಿ ಮಾಡಿದಾಗ ಒಂದು ಅರ್ಜಿಯನ್ನು ಅವರಿಗೆ ಸಲ್ಲಿಸಿದರು. ಆದರೆ ಅವರು ಆ ಇನ್‌ಸ್ಪೆಕ್ಟರ್ ಮೇಲೆ ಯಾವ ಕ್ರಮವನ್ನೂ ತೆಗೆದು ಕೊಂಡಿಲ್ಲ. ಇವತ್ತು ಪೋಲೀಸ್ ಅಧಿಕಾರಿಗಳೇ ಅವರ ಕೈಕೆಳಗಿನ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ತಾವು ಇಂಥಾದ್ದಕ್ಕೆಲ್ಲಾ ಆಸ್ಪದ ಕೊಡುವುದಿಲ್ಲ ಎಂದು ಹೇಳಿದರೂ ಕೂಡ ಇಂಥಾದ್ದು ನಡೆಯುತ್ತಲೇ ಇದೆ ಈ ಪೋಲೀಸ್ ಇಲಾಖೆಯವರು ಕೆಳಮಟ್ಟದ ಜನರಿಗೆ ಯಾವರೀತಿಯಲ್ಲಿಯೂ ಗೌರವ ಕೊಡುವುದಿಲ್ಲ. ಅವರು ಮಾತನಾಡುವುದು ಒರಟಾಗಿ, ಕೆಲವು ಸಂದರ್ಭ ಮೈಮೇಲೆ ಹೊಡೆತಗಳೂ ಬೀಳುವ ಸನ್ನಿವೇಶಗಳು ಇರುತ್ತವೆ. ಪೋಲೀಸ್‌ನವರದು ಒರಟು ಸ್ವಭಾವ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಪ್ಪು ಮಾಡಿದವರ ಮೇಲೆ ಬೇಕಾದರೆ ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳಲಿ, ಒರಟಾಗಿ ನಡೆದುಕೊಳ್ಳಲಿ. ಅದಕ್ಕೆ ನನ್ನ ಅಬ್ಜಕ್ಷನ್ ಇಲ್ಲ. ಆದರೆ ಫಿರ್ಯಾದು ಮಾಡುವುದಕ್ಕೆ ಹೋಗುವವರ ಮೇಲೆ ಈರೀತಿ ನಡೆದುಕೊಂಡರೆ ಹೇಗೆ ಸ್ವಾಮಿ; ಇದು ಒಂದು ಆಯಿತು,

ಇನ್ನೊಂದು ಉದಾಹರಣೆ ಹೇಳುತ್ತೇನೆ. ಬಿಜಾಪುರ ತಾಲ್ಲೂಕಿನಲ್ಲಿ ಒಬ್ಬರು, ಹರಿಜನ ಮನುಷ್ಯ ಒಬ್ಬ ನಮ್ಮ ಭಾವಿಯನ್ನು ಮುಟ್ಟಿದ ಎಂದು ಊರಿನವರನ್ನು ಸೇರಿಸಿಕೊಂಡು ಚೆನ್ನಾಗಿ ಕಾಲು ಮುರಿಯುವಂತೆ ಹೊಡೆದು ಬಿಜಾಪುರ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿದಾಗ ಅವನಿಗೆ ಸರಿಯಾಗಿ ಔಷಧಿ ಹಾಕದೆ ಅವನ ಕಾಲು ಕೊಳೆತು ನಾರುತ್ತಾ ಇರುವಾಗ ಅವನನ್ನು ಡಿಸ್‌ಛಾರ್ಜ್ ಮಾಡಿದರು. ಇದನ್ನು ಕಂಡ ಒಬ್ಬ ಸಿವಿಲ್ ಡಾಕ್ಟರ್ ಅವನನ್ನು ತಮ್ಮ ಕಾರ್‌ನಲ್ಲಿ ಕರೆದುಕೊಂಡು ಹೋಗಿ ಮತ್ತೆ ಆಸ್ಪತ್ರೆಗೆ ಅಡ್ಮಿಟ್ ಮಾಡಿದರು; ಈರೀತಿ ಅವನನ್ನು ಹೊಡೆಸಿದವರನ್ನು ತನಿಖೆ ಮಾಡಿ ಶಿಕ್ಷೆಗೆ ಒಳಪಡಿಸಿ ಎಂದು ಡಿ.ಐ.ಜಿ. ಗೆ ಹೇಳಿದರೆ ಅವರು ಎಸ್.ಪಿ. ಗೆ ಹೇಳಿದರು ಅವರು ಡಿ. ಎಸ್. ಪಿ ಗೆ ಹೇಳಿದರು. ಅವರು ಈಗ ಇದು ನಮ್ಮ ಕೈಮೀರಿ ಹೋಗಿದೆ, ಕೇಸನ್ನು ಕೋರ್ಟ್‌ಗೆ ಕಳುಹಿಸಿದ್ದಾಗಿದೆ, ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಹರಿಜನರ ಮೇಲೆ ಇಷ್ಟೊಂದು ಅನ್ಯಾಯ ನಡೆದಿದೆ. ಹರಿಜನರು ಯಾರೂ ಏನೂ ಹೇಳುವಂತಿಲ್ಲ. ಅವರು ಏನಾದರೂ ಹೇಳಿದರೆ ಅವರನ್ನು ಊರುಬಿಟ್ಟು ಹೊರಗೆ ಓಡಿಸುತ್ತಾರೆ. ಆದುದರಿಂದ ಇವತ್ತು ಏನೇನು ಕ್ರಮಗಳನ್ನು ಕೈಗೊಳ್ಳಬೇಕೋ ಅದರ ಬಗ್ಗೆ ಆದಷ್ಟು ಶೀಘ್ರವಾಗಿ ಒಂದು ಸುತ್ತೋಲೆಯನ್ನು ಕೊಡುವುದು ಅವಶ್ಯಕವೆಂದು ಹೇಳುತ್ತೇನೆ.

ಇನ್ನೊಂದು ಉದಾಹರಣೆಯನ್ನು ಹೇಳಬೇಕೆಂದರೆ ಇಂಡಿ ತಾಲ್ಲೂಕಿನ ಎರಸಂಗಿ ಗ್ರಾಮದಲ್ಲಿ ಒಬ್ಬ ಹರಿಜನ ಅವನ ಮನೆಯಲ್ಲಿ ಮದುವೆ ಮಾಡಿದಾಗ ನನ್ನನ್ನು ಮದುವೆಗೆ ಕರೆಯಲಿಲ್ಲ ಎಂದು ಊರಿನವರಿಂದ ಅವನನ್ನು ಹೊಡೆಸಿ ಅವನ ಹೊಲ, ಮನೆಗಳನ್ನು ಸುಡುತ್ತೇವೆಂದು ಹೆದರಿಸಿದ್ದಾರೆ. ಇಂಡಿ ತಾಲ್ಲೂಕಿನ ಒಂದು ಗ್ರಾಮದಲ್ಲಿ ಇಂತಹ ಒಂದು ಪರಿಸ್ಥಿತಿ ಇದೆಯೆಂದು ನಾವು ಮಂತ್ರಿಗಳಿಗೆ ಹೇಳಿದಾಗ ನನಗೆ ಅದರ ಬಗ್ಗೆ ಅರ್ಜಿ ಬಂದಿಲ್ಲವೆಂದು ಹೇಳಿದರೆ ಹೇಗೆ ? ಅಲ್ಲಿನ ಒಂದು ಪರಿಸ್ಥಿತಿಯಿಂದ ಅಲ್ಲಿರುವ ಹರಿಜನರು ಬಹಳವಾಗಿ ಅಂಜಿ ಜೀವಂತವಾಗಿರಲು ಹೆದರಿದ ಪ್ರಸಂಗ ಉಂಟಾಯಿತು, ಅದರಿಂದಲೇ ಅವರ ಹೊಲ ಹೋದುದು ಎಂಬುದಾಗಿ ಹೇಳಿದ್ದಾರೆ. ಅವರಿಗಿದ್ದ ಭಯ

ವನ್ನು ಹೋಗಿಸಲಿಕ್ಕೆ ನೀವು ಡಿಪಾರ್ಟ್‌ಮೆಂಟಿನ ಮೂಲಕ ಕ್ರಮ ತೆಗೆದುಕೊಳ್ಳಿ ಎಂದರೆ, ಅವರಿಂದ ಇದುವರೆಗೆ ಯಾವ ಅರ್ಜಿಯೂ ಬಂದಿಲ್ಲ, ಅವರು ಯಾವ ಅರ್ಜಿಯನ್ನೂ ಸಹ ಕೊಟ್ಟಿಲ್ಲ, ಮತ್ತು ಯಾವ ಒಂದು ಫಿರ್ಯಾದಿ ಸಹ ಕೊಟ್ಟಿಲ್ಲವೆಂದು ಹೇಳಿದರೆ ಹೇಗೆ ? ಇವತ್ತು ಅವರ ಮನಸ್ಸಿನಲ್ಲಿರತಕ್ಕ ಭಯ, ಭೀತಿ ಹೋಗದಿದ್ದರೆ ಇನ್ನು ಈ ಸರ್ಕಾರದ ಕರ್ತವ್ಯವೇನೆಂಬುದನ್ನು ನಾನ ತಿಳಿದುಕೊಳ್ಳಬೇಕಾಗಿದೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಅವರಿಗೆ ಅಲ್ಲ ಏನು ಭಯ ಉದ್ಭವವಾಗಿದೆ, ಸವರ್ಣೀಯರ ಒಂದು ಪ್ರಭಾವದಿಂದ ಏನೊಂದು ಅಂಜಿಕೆ ಅವರಿಗೆ ಉಂಟಾಗಿದೆಯೋ ಆ ಒಂದು ಹೆದರಿಕೆ ಅವರಿಗೆ ಮೊದಲು ಹೋಗಬೇಕು. ಆ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಗಳು ಮಾಡುವುದಾದರೆ ನಾನು ನಿಜವಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಇವತ್ತು ಇಂಟರ್‌ಸ್ಟೇಟ್ ಸೀನಿಯಾರಿಟಿಲಿಸ್ಟ್ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಇವತ್ತು ಎಕ್ಸ್-ಬೊಂಬಾಯಿ ಸ್ಟೇಟ್‌ನಿಂದ ಬಂದಿರತಕ್ಕ ಅಧಿಕಾರಿಗಳ ಬಗ್ಗೆಯಾಗಲೀ; ರಾಜ್ಯದ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಬಗ್ಗೆಯಾಗಲೀ ಒಂದು ಪ್ರೊವಿಷನಲ್ ಲಿಸ್ಟ್ ಆದರೂ ಮಾಡಿ ಬಂದರೆ, ಅದು ಇವತ್ತಿನವರೆಗೂ ಇನ್ನೂ ಫೈನಲೈಜ್ ಮಾಡದೇ ಇರುವುದು ಅಲ್ಲಿಂದ ಬಂದಿರುವ ಜನಗಳಿಗೆ ಹೆಚ್ಚಿಗೆ ಅನ್ಯಾಯವಾಗಿದೆಯೆಂಬುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಡೆಪ್ಯುಟಿ ತಹಸೀಲ್ದಾರ್ ಅವರ ಹತ್ತಿರ ಆದಿನ್ನೂ ಫೈನಲೈಜ್ ಆಗಿದೇ ಇರುವುದಕ್ಕೆ ತುಂಬಾ ತೊಂದರೆ ಯಾಗಿದೆ, ಇದರಿಂದ ಯಾರ್‍ಯಾರಿಗೆ ಪ್ರೊಮೋಷನ್ಸ್ ಸಿಗಬೇಕೋ ಅದು ಸಿಗುತ್ತಾ ಇಲ್ಲ. ಇದರಿಂದ ಸರ್ಕಾರ ಇವತ್ತು ಅವರಿಗೆಲ್ಲರಿಗೂ ಒಂದು ದೊಡ್ಡ ಅನ್ಯಾಯ ಮಾಡಿದಂತಾಗಿದೆ. ಕೇಂದ್ರ ಸರ್ಕಾರದಿಂದ ಇದರ ಬಗ್ಗೆ ಒಂದು ಕಮ್ಯೂನಿಕೇಷನ್ ಕಳುಹಿಸಿ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಕೂಡಲೇ ಫೈನಲೈಜ್ ಮಾಡಬೇಕೆಂದು ಜೂನ್ 74 ರಲ್ಲಿ ಹೇಳಿದ್ದರೂ ಸಹ ಅದರ ಬಗ್ಗೆ ಇವತ್ತಿನವರೆಗೆ ಯಾವ ತರಹ ಕ್ರಮವನ್ನು ಸಹ ತೆಗೆದುಕೊಂಡಿಲ್ಲ ಏಕೆ ಈ ರೀತಿ ಆಗುತ್ತಿದೆಯೋ ನನಗಂತೂ ಅರ್ಥವಾಗುತ್ತಾ ಇಲ್ಲ. ಕೇವಲ ಏರಿಯಾವೈಜ್ ಮಾಡಬೇಕೆಂಬ ಅಧಿಕಾರಿಗಳ ಮನೋಭಾವನೆ ಹಾಗೂ ಮನೋವೃತ್ತಿಯಿಂದ ಈ ರೀತಿ ಆಗಿದೆಯೆಂದು ನಾನು ಹೇಳುತ್ತೇನೆ. ಮಂತ್ರಿಮಂಡಲದಲ್ಲಿಯಾಗಲೀ ಮಂತ್ರಿಮಂಡಲದಲ್ಲಿ ಇರತಕ್ಕ ಆಡಳಿತ ಪಕ್ಷ ಈ ರೀತಿಯ ಮನೋಭಾವನೆಯನ್ನು ಹೊಂದಿರಲಿಕ್ಕಿಲ್ಲ. ಆದರೆ ಕೆಲವು ಅಧಿಕಾರಿಗಳ ಮನೋವೃತ್ತಿಯಿಂದ ಈ ರೀತಿಯಾಗಿ ಅದು ನಿಧಾನವಾಗಿರುವುದರಿಂದ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದು ಸಹಜ. ಹೆಚ್ಚಿಗೆ ಪಿ.ಡಬ್ಲ್ಯು.ಡಿ.ನಲ್ಲಿಯೇ ಇದು ನಿಧಾನವಾಗಿದೆ. ಪಿ.ಡಬ್ಲ್ಯು.ಡಿ. ಜೂನಿಯರ್ಸ್ ಇಂಜಿನಿಯರ್ಸ್ ಬಗ್ಗೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳಿಂದ ಆದೇಶ ನೀಡಿದ್ದರೂ ಸಹ ಅದರ ಬಗ್ಗೆ ಏನೂ ಇದುವರೆಗೆ ಕಾರ್ಯಗತವಾಗಿಲ್ಲ. ಇದರ ಬಗ್ಗೆ ಒಂದು ರಿಟ್ ಪಿಟಿಷನ್ ಹಾಕಲಿಕ್ಕೆ 17-12-73 ರಲ್ಲಿಯೇ ಅನುಮತಿ ಕೊಟ್ಟರು. ಆದರೆ ಅಪೀಲ್ ಪಿಟಿಷನ್ ಹೈಕೋರ್ಟಿನಿಂದಲೇ 7-74ನೇ ಇಸವಿಯಲ್ಲಿಯೇ ಡಿಸ್‌ಮಿಸ್ ಆಯಿತು. ಇದು ಸರ್ಕಾರದ ಪರವಾಗಿ ಮಾಡಿರತಕ್ಕ ಕ್ರಮಗಳು.

ಶ್ರೀ ಕೆ.ಬಿ. ಶಿವಯ್ಯ.—ನಿಮಗೆ ಅದು ಯಾವರೀತಿ ಬಂತು, ಎಲ್ಲಿಂದ ಬಂತು, ಹೇಗೆ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದು ಸರ್ವಾಂಗವಾಗಿ ಬರುತ್ತದೆ.

ಶ್ರೀ ಜೆ ಎಲ್. ಕಬಾಡಿ.—ಹೈಕೋರ್ಟಿಗೆ ಹಾಕಿದಂಥ ಪಿಟಿಷನ್ ಇವತ್ತು ಸಾರ್ವಜನಿಕರ ತಿಳಿವಳಿಕೆಗೆ ಬರುವುದಿಲ್ಲವೇ ? ಸಾರ್ವಜನಿಕರು ಯಾರೇ ಆಗಲೀ ತಾನು ಕೋರ್ಟಿಗೆ ಹಾಕಿದಂಥ ಪಿಟಿಷನ್ ಮತ್ತು ಸರ್ಕಾರದವರು ಅದರ ಬಗ್ಗೆ ಅಫಿಡವಿಟ್ ಮಾಡಿ ಹಾಕಿದಂಥ ಕೇಸ್ ಜನಗಳ ತಿಳಿವಳಿಕೆಗೆ ಬಾರದೇ ಇರುತ್ತದೆಯೇ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದನ್ನು ಅವರಿಗೆ ಪಾಠಿವಾಳ ತಂದುಕೊಟ್ಟಿತು.

ಶ್ರೀ ಜೆ.ಎಲ್. ಕಬಾಡಿ.—ಯಾವುದೇ ಇನ್‌ಫರ್‌ಮೇಷನ್ ಆಗಲೀ ಸರ್ಕಾರದಲ್ಲಿ ಇಲ್ಲದೇ ಇರುವ ವಿಚಾರವನ್ನು ಇಲ್ಲಿ ಹೇಳುತ್ತಾ ಇಲ್ಲ. ಸಾರ್ವಜನಿಕರಿಗೆ ಆಗಿರುವಂಥ ಅನ್ಯಾಯ ಯಾವರೀತಿ ಇದೆಯೆಂಬ ವಿಚಾರವನ್ನು ಇಲ್ಲಿ ಹೇಳುವುದು ಸೂಕ್ತ. ಅದಕ್ಕಾಗಿ ಸರ್ಕಾರ ಇದರ ಬಗ್ಗೆ ಹೆಚ್ಚಿಗೆ

ಗಮನಕೊಟ್ಟು ಶೀಘ್ರದಲ್ಲಿಯೇ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ತಯಾರುಮಾಡಿ ಬಗೆಹರಿಸಿದರೆ, ಈಗ ಇದುವರೆಗೂ ಆಗಿರತಕ್ಕ ಅನ್ಯಾಯವನ್ನು ದೂರಮಾಡುವುದಕ್ಕೆ ಶಕ್ಯವಾಗುತ್ತದೆ.

ಇನ್ನು ಅಪ್ಪರ್‌ಕೃಷ್ಣಾ ಇರ್ರಿಗೇಷನ್ ವಿಚಾರ. ಇವತ್ತು ನಮಗೆ ಸಿಕ್ಕಿರತಕ್ಕ ಈ ಯೋಜನೆಯಿಂದ ಕನಿಷ್ಠ 36ಲಕ್ಷ ಎಕರೆ ನೀರಾವರಿ ಆಗಬೇಕಾದುದು ಇದೆ. ಫಸ್ಟ್ ಸ್ಟೇಜಿನಲ್ಲಿ 103 ಟಿ.ಎಂ.ಸಿ. ಫೀಟ್. ಇನ್ನು ಯುಟಿಲೈಜೇಷನ್ ಆಫ್ ವಾಟರ್ ಏನಿದೆಯೋ ಅದನ್ನು ನೋಡಿದರೆ 1970 ರಲ್ಲಿ ಮಾಡಿರತಕ್ಕ ಒಂದು ರಿಪೋರ್ಟ್ ಪ್ರಕಾರ 116 ಕೋಟಿ 67 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಅದು ಕೇವಲ ಫಸ್ಟ್ ಸ್ಟೇಜಿಗೆ. ಇನ್ನು ಸೆಕೆಂಡ್ ಸ್ಟೇಜಿಗೆ 168 ಕೋಟಿ 33 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಅಂದಮೇಲೆ ಹೀಗೆ ಒಟ್ಟು ಎರಡು ಸ್ಟೇಜುಗಳಿಗೂ 285 ಕೋಟಿ ರೂಪಾಯಿಗಳು ಒಂದನೇ ಮತ್ತು ಎರಡನೇ ಸ್ಟೇಜುಗಳಿಗೆ ಖರ್ಚಾಗುತ್ತದೆ ಆದರೆ ಈ ಯೋಜನೆ ಏನಿದೆ ಇದಕ್ಕೆ ನೀವು ಈಗ ಕೊಟ್ಟಿರುವುದು ಬಡ್ಜೆಟ್ಟಿನಲ್ಲಿ ಕೇವಲ 4 ಕೋಟಿ ರೂಪಾಯಿಗಳು ಮಾತ್ರ ಅದು ಏನೇನೂ ಸಾಕಾಗುವುದಿಲ್ಲ, ಅಲ್ಲದೆ ಮಾನ್ಯ ಮುಖ್ಯಮಂತ್ರಿಗಳು ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಹೆಚ್ಚುಹೆಚ್ಚು ಪ್ರಯತ್ನಮಾಡಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಹೆಚ್ಚಿನ ನೆರವನ್ನು ತೆಗೆದುಕೊಂಡು ಬರುತ್ತೇನೆಂದೂ ಅದರ ಒಂದು ಪ್ರಯತ್ನದಲ್ಲಿದ್ದೇನೆಂದೂ ಹೇಳುತ್ತಿದ್ದಾರೆ. ಇದರಿಂದ ಹೆಚ್ಚುಹೆಚ್ಚು ಪ್ರಗತಿಯನ್ನು ಸಾಧಿಸುವುದಕ್ಕೆ ಅನುಕೂಲ ಉಂಟು. ಒಟ್ಟಿನಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನಮಾಡಬೇಕು. ಬರಗಾಲ ಜಿಲ್ಲೆಯಾಗಿರುವ ರಾಯಚೂರು, ಬಿಜಾಪುರ ಮುಂತಾದುವುಗಳಿಗೆ ಇದು ಒಂದು ದೊಡ್ಡ ಯೋಜನೆಯಾಗಿದೆ. ಇದನ್ನು ಎಂದೂ ಕೈಬಿಡದೆ ಇವತ್ತು ಒದಗಿಸಿರುವ ಹಣ ಏನೇನು ಸಾಲದೇ ಇರುವುದರಿಂದ ನಾರಾಯಣಪುರ ಕಟ್ಟುವುದಕ್ಕೆ ಅಲ್ಲಿ ಶೀಘ್ರವಾಗಿ ಕೆಲಸಮಾಡುವುದಕ್ಕೆ ಅತಂಕವಾಗುತ್ತದೆ ಇದಕ್ಕೂ ಹಿಂದುಳಿದಿರುವ ಆಲಮಟ್ಟಿಯಲ್ಲಿ ಕನಿಷ್ಠ 8–9 ಕೋಟಿ ರೂಪಾಯಿಗಳು ಖರ್ಚುಮಾಡಿದರೂ ಅಲ್ಲಿ ಕೇವಲ ಫೌಂಡೇಷನ್ ಹಾಕುವುದಕ್ಕೂ ಅದು ಸಾಕಾಗುವುದಿಲ್ಲ ಆದ್ದರಿಂದ ಮೊದಲು ಹೇಗೋ ಅಲ್ಲಿ ಫೌಂಡೇಷನ್ ಹಾಕುವುದಕ್ಕೆ ವ್ಯವಸ್ಥೆ ಮಾಡಿದರೆ ಆಮೇಲೆ ಎಷ್ಟು ವರ್ಷಗಳಾದ ಮೇಲೆ ಯಾರಾದರೂ ಅಲ್ಲಿನ ಕೆಲಸಗಳನ್ನು ಮಾಡಿ ಆ ಯೋಜನೆಯನ್ನು ಮುಂದುವರಿಸಬಹುದು.

ಶ್ರೀ ಡಿ. ದೇವರಾಜ್ ಅರಸ್.—ಅಲ್ಲಿ ಕೆಲಸ ಈಗ ನಡೆಯುತ್ತಿದೆ.

ಶ್ರೀ ಜೆ. ಎಂ. ಕಬಾಡಿ.—ಇಲ್ಲ. ಯಾವ ಕೆಲಸವೂ ಇಲ್ಲದೆ ಆಫೀಸರ್ಸ್ ಅಲ್ಲಿ ಕೂತುಕೊಂಡು ಪಗಾರ ತೆಗೆದುಕೊಳ್ಳುತ್ತಿದ್ದಾರೆ ಇವತ್ತು ಅಲ್ಲಿರತಕ್ಕ ಕಂಡೀಷನ್ ಬೇರೆಯಾಗಿದೆ. ಆಲಮಟ್ಟಿಯಲ್ಲಿ ಅಕ್ವಿಸಿಷನ್ ಆಗಿರುವ ಒಂದು ಸಬ್ ಡಿವಿಜನ್ ಏನಿದೆಯೋ ಅದು ಒಂದು ಮಾತ್ರ ಇದೆ. ಉಳಿದೆಲ್ಲಾ ರಿಹ್ಯಾಬಿಲಿಟೇಷನ್ ಸ್ಕೀಂ ಮಾಡಿ ಈಗಾಗಲೇ ಎಲ್ಲಾ ಸ್ಟಾಫ್ ಹೋಗಿದೆ, ಸೂಪರಿಂಟ್‌ಂಡಿಂಗ್ ಇಂಜನಿಯರ್ ಸ್ಟ್ಯಾಫ್ ಸಹ ಅಲ್ಲಿ ಹೋಗಿದೆ ಇವತ್ತು ಕಾನೂನು ಕಾರ್ಯಗತ ಆಗಬೇಕಾಗಿದೆ. ಆದ್ದರಿಂದ ಇವತ್ತು ಮೊದಲು ಆಲಮಟ್ಟಿ ತಳಪಾಯ ಹಾಕುವುದಕ್ಕೆ ವ್ಯವಸ್ಥೆ ಮಾಡಿದರೆ ಸಾಕು. ಮುಂದೆ 20–30 ವರ್ಷಗಳಾದಮೇಲೆ ಬೇಕಾದರೆ ಅದನ್ನು ಕಟ್ಟಿ. ಯಾವುದು ಬ್ಯಾಕ್‌ವರ್ಡ್ ಆಗಿದೆಯೋ ಅದಕ್ಕೆ ಮೊದಲು ಪ್ರಾಶಸ್ತ್ಯ ಕೊಡಬೇಕು. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ಆಲಮಟ್ಟಿ ಮತ್ತು ನಾರಾಯಣಪುರ–ಈ ಎರಡು ಯೋಜನೆಗಳನ್ನು ಪ್ರಗತಿ ಮಾಡಬೇಕಾದರೆ ಮೊದಲು ಆಲಮಟ್ಟಿಗೆ ಫೌಂಡೇಷನ್ ಹಾಕಿಬಿಡಿ. ಅದಕ್ಕೆ ಹಣವಿದ್ದಷ್ಟು ಕೊಡಬಹುದು, ಏನಾದರೂ ನಾರಾಯಣಪುರ ಯೋಜನೆಯನ್ನು ಮೊದಲು ಕಟ್ಟಿದರೆ ಅದಕ್ಕೆ ಫೌಂಡೇಷನ್ ಹಾಕುವುದಕ್ಕಾಗುವುದಿಲ್ಲವೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಅದು ಮೈನಾರಿಟಿ ಕಮ್ಯೂನಿಟಿ ವಿಚಾರಕ್ಕೆ ಸಂಬಂಧಪಟ್ಟದ್ದು. ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರವಾಗಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ತಮ್ಮ ಮನಸ್ಸಿನಲ್ಲಿಟ್ಟು ಕೊಂಡಿದ್ದಾರೆ. ಇವರು ಮೈನಾರಿಟಿ ಕಮ್ಯೂನಿಟಿ ಬಗ್ಗೆ ಬಹಳ ವಿಶ್ವಾಸ, ಪ್ರೀತಿ ಗಳಿಸುತ್ತಾ ಬಂದಿದ್ದಾರೆ. ಇದು ಮುಸಲ್ಮಾನ್ ಸಮಸ್ಯೆ. ಬಿಜಾಪುರಕ್ಕೆ ಸಂಬಂಧ

ಪಟ್ಟಿದ್ದು. ಪೋಲೀಸ್ ಡಿಪಾರ್ಟ್‌ಮೆಂಟಿಗೆ ಸೇರಿದ ಷಾಹಿಇದಾಹ ಏನಿದೆಯೋ ಅದರ ಬಗ್ಗೆ ಈಗ 3-4 ವಿಷಯಗಳಿವೆ. ವಕ್ಫ್ ಬೋರ್ಡಿನವರು ಇದನ್ನು ಚೆನ್ನಾಗಿ ಸ್ಟಡಿಮಾಡಿ ಒಂದು ವಿಚಾರವನ್ನು ಹೇಳಿದ್ದಾರೆ. ಆ ಜಾಗ ಷಾಹಿ ಇದಾಗ ಅವರದು. ಅಲ್ಲಿ ಹೇಗೋ ಸರ್ಕಾರದವರ ಅಜ್ಞೆ ಮೇರೆಗೆ ಅದರ ಮುಂದೆ ಒಂದು ವಾಟರ್ ಟ್ಯಾಂಕನ್ನು ಮುನಿಸಿಪಾಲಿಟಿಯವರು ಕಟ್ಟಿ ಕೊಂಡಿದ್ದಾರೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಆರ್ಡರ್ ಮಾಡಿದ್ದಾರೆ. ಅಲ್ಲಿ ಈಗ ಪೋಲೀಸ್ ಡಿಪಾರ್ಟ್‌ಮೆಂಟಿನಿಂದ ಅದನ್ನು ಖಾಲಿ ಮಾಡಿಸಬೇಕು ಅರೇಬಿಯನ್ ಸ್ಕೂಲ್ ನಡೆಸುವುದಕ್ಕೆ ಬೇಕೆಂದು ಹೇಳಿದಾಗ ವಕ್ಫ್‌ಬೋರ್ಡಿನವರು ಅವರ ಒಂದು ವಿದಾದವನ್ನು ತಡೆಹಿಡಿದು ಅವನ್ನು ಖಾಲಿ ಮಾಡಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಅಲ್ಲಿ ಏನಾದರೂ ಸ್ಕೂಲನ್ನು ನಡೆಸುವುದಕ್ಕೆ ಆಸ್ಪದ ಮಾಡಿಕೊಡುವುದಾದರೆ ಅದು ಸರಿಹೋಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಇನ್ನೊಮ್ಮೆ ಈ ವಿಚಾರವನ್ನು ಪರಿಶೀಲಿಸಿ ಪುನ: ಆರ್ಡರ್ ಮಾಡಿಕೊಡಬೇಕೆಂದು ಹೇಳುತ್ತೇನೆ. ಅಷ್ಟೇ ಅಲ್ಲ.

6-00 P.M.

ಶ್ರೀ ಜೆ ಎಲ್. ಕಬಾಡಿ.—ಅಧ್ಯಕ್ಷರೇ ನನಗೆ ಇನ್ನು ಸ್ವಲ್ಪ ಹೊತ್ತು ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ಎಂ ಎಸ್. ಕೃಷ್ಣನ್.—ನಾವು ಬಿಜಾಪುರಕ್ಕೆ ಹೋಗಿದ್ದಾಗ ಶಾಹಿ ಇದಗಾದವರು ರೆಪ್ರಜೆಂಟೇಷನ್ ಕೂಡ ಕೊಟ್ಟಿದ್ದರು.

ಶ್ರೀ ಡಿ. ದೇವರಾಜ್ ಅರಸ್.—ನಾನು ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿ ಬಂದಿದ್ದೇನೆ

ಶ್ರೀ ಜೆ.ಎಲ್. ಕಬಾಡಿ.—ಈ ಷಾಹಿ ಇದ್‌ಗಾದ ಬಗ್ಗೆ ನಾನು ಕೂಡ ಪತ್ರವನ್ನು ತಮಗೆ ಬರೆದಿದ್ದೇನೆ. ದಯವಿಟ್ಟು ಅದರ ಬಗ್ಗೆ ಪುನ: ಪರಿಸೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ದೊಡ್ಡ ಅಘಾತವೇನೂ ಆಗುವುದಿಲ್ಲ ಅಲ್ಲಿ ಬಾರ್‌ಬರ್ ಶಾಪ್ ಮತ್ತು ಧೋಬಿ ಶಾಪ್‌ನ್ನು ಇಟ್ಟುಕೊಂಡಿದ್ದಾರೆ ಉಳಿದದ್ದು ಏನೂ ಇಲ್ಲ ಇನ್ನೊಂದು ಏನೆಂದರೆ ಅವರಿಗೆ ನವಾಜ್‌ಗೆ ಹತ್ತಿರವಿರತಕ್ಕಂಥ ಬಿಲ್ಡಿಂಗ್ ಅದು. ವಕ್ಫ್ ಬೋರ್ಡ್‌ನವರು ಪೂರ್ತಿ ಅದನ್ನೆಲ್ಲಾ ಪರಿಶೀಲನೆ ಮಾಡಿ, ಯಾರದು ಎಷ್ಟು ಏರಿಯಾ, ಯಾರು ಯಾರಿಗೆ ಎಷ್ಟೆಷ್ಟು ಕ್ಷೇತ್ರ ಬಂತು ಎನ್ನುವ ಬಗ್ಗೆ ಕೂಡ ಹೇಳಿದ್ದಾರೆ. ಅದುದರಿಂದ ಇವತ್ತು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಅದನ್ನು ಪುನ: ಪರಿಶೀಲನೆ ಮಾಡಬೇಕೆಂದು ಕೇಳಿಕೊಂಡು, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—The discussions will continue to-morrow. The House now stands adjourned to meet again to-morrow at 1 p.m.

The House adjourned at Two Minutes past Six of the Clock to meet again at One of the Clock on Tuesday the 23rd March 1976.